ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 16 ಶುಕ್ರವಾರ 2022

₹4

ಸಂಪುಟ: 43 | ಸಂಚಿಕೆ: 151 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com



ನಾಳೆ ಜಿಲ್ಲಾಡಳಿತದಿಂದ ವಿಶ್ವಕರ್ಮ ಜಯಂತಿ ಆಚರಣೆ

ಜನಪದ ಕಲಾತಂಡಗಳೊಂದಿಗೆ ಬೆಳ್ಳಿರಥದ ಮೆರವಣಿಗೆ



ಮೈಸೂರು,ಸೆ.15(ಆರ್‌ಕೆಬಿ)–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ವಿಶ್ವಕರ್ಮ ಜಯಂತ್ಯೋತ್ಸವ ಸಮಿತಿ ವತಿಯಿಂದ ಸೆ.17ರಂದು ಮೈಸೂರಿನ ಕಲಾಮಂದಿರದಲ್ಲಿ 7ನೇ ವರ್ಷದ ವಿಶ್ವಕರ್ಮ ಜಯಂತ್ಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಡಾ.ಎಂ.ಮೋಗಣ್ಣಾಚಾರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಇರ್ವಿನ್ ರಸ್ತೆಯ ಶ್ರೀಕಾಳಿಕಾಂಬ ಕಮಟೇಶ್ವರ ದೇವಸ್ಥಾನದ ಬಳಿಯಿಂದ ಜಾನಪದ ಕಲಾತಂಡಗಳ ಸಹಿತ ಬೆಳ್ಳಿರಥದ ಮೆರವಣಿಗೆಗೆ ಆರಂಭವಾಗಲಿದೆ. ಬಳಿಕ ಕಲಾಮಂದಿರದಲ್ಲಿ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಶಾಸಕ ಜಿ.ಟಿ.ದೇವೇಗೌಡ, ಮೇಯರ್ ಶಿವಕುಮಾರ್ ಇನ್ನಿತರರು ಉಪಸ್ಥಿತರಿರುತ್ತಾರೆ. ಪ್ರೊ.ಸಿ.ನಾಗಣ್ಣ ಮುಖ್ಯ ಭಾಷಣ ಮಾಡಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಸೋಮಸುಂದರಮೂರ್ತಿ, ಜಯಶಂಕರ್, ಸಿದ್ದಪ್ಪಾಚಾರ್, ಪ್ರಮೀಳಾ ಆಚಾರ್ ಇದ್ದರು.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಇಂದಿನಿಂದ ಶಿಲ್ಪ ಬಜಾರ್ ಕರಕುಶಲ ಪ್ರದರ್ಶನ, ಮಾರಾಟ

ಮೈಸೂರು, ಸೆ.15(ಆರ್‌ಕೆಬಿ)– ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಸೆ.16ರಿಂದ 25ರವರೆಗೆ ಗಾಂಧಿ ಶಿಲ್ಪ ಬಜಾರ್ ಕರಕುಶಲ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಹಣಕಾಸು ವಿಭಾಗದ ನಿರ್ದೇಶಕ ಮಲ್ಲಿಕಾರ್ಜುನ ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.16ರ ಸಂಜೆ 4 ಗಂಟೆಗೆ ಮೇಳಕ್ಕೆ ಚಾಲನೆ ದೊರೆಯಲಿದೆ.



ಮೇಳದಲ್ಲಿ ವಿವಿಧ ಕಡೆಯಿಂದ ಬಂದ ಕುಶಲಕರ್ಮಿಗಳು ಬಳಕೆದಾರ ಅಗತ್ಯ ಹಾಗೂ ಅಭಿರುಚಿ ಅರಿತು ಮಾರುಕಟ್ಟೆಗೆ ಬೇಕಾದ ವಿನ್ಯಾಸ ವಸ್ತುಗಳನ್ನು ರೂಪಿಸಿ ಮಾರಾಟ ಮಾಡಲಿದ್ದಾರೆ ಎಂದರು. ಮರದ ಕೆತ್ತನೆ, ಮರದ ಕುಂದಣ ಕಲೆ, ಶಿಲಾ ಶಿಲ್ಪ, ಕಂಚಿನ ವಿಗ್ರಹ, ರತ್ನಗಂಬಳಿ, ಹತ್ತಿ ಜಮಖಾನ, ಅನುಕರಣ ಆಭರಣ, ಮರದ ಆಲಂಕಾರಿಕ ಕಲಾ ವಸ್ತುಗಳು, ಬಾಟಿಕ್, ಕಲಂಕಾರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು, ಛತ್ತೀಸ್‌ಘಡದ ಢೋಕ್ರಾ, ಎರಕದ ವಸ್ತುಗಳು, ಮೇಘಾಲಯದ ಬಿದಿರಿನ ಕಲೆ, ರಾಜಸ್ಥಾನದ ಕರಕುಶಲ ವಸ್ತುಗಳು ಮೊದಲಾದವು ದೊರೆಯಲಿವೆ. ಮಧ್ಯವರ್ತಿಗಳಿಲ್ಲದೆ ಕುಶಲಕರ್ಮಿಗಳಿಂದ ಗ್ರಾಹಕರಿಗೆ ನೇರವಾಗಿ ಮಾರಾಟದ ವ್ಯವಸ್ಥೆ ಕಲ್ಪಿಸಲಾಗಿದೆ. ಹೀಗಾಗಿ ನಗರದ ಜನತೆ ಹಾಗೂ ಪ್ರವಾಸಿಗರು ಪ್ರಯೋಜನ ಪಡೆಯಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಕರಕುಶಲ ಸೇವಾ ಕೇಂದ್ರದ ನಿರ್ದೇಶಕ ಕೆ.ಎಸ್.ಸುನಿಲ್‌ಕುಮಾರ್, ಸಂಯೋಜಕ ಶಿವನಂಜಸ್ವಾಮಿ ಉಪಸ್ಥಿತರಿದ್ದರು.



ಮೈಸೂರಿನ ವಾರ್ಡ್ ನಂ.44 ಜನತಾನಗರದ 7 ಮತ್ತು 10ನೇ ಕ್ರಾಸ್ ರಸ್ತೆಗಳ ಡಾಂಬರೀಕರಣ ಕಾಮಗಾರಿಗೆ ನಗರಪಾಲಿಕೆ ಸದಸ್ಯೆ ಸವಿತಾ ಸುರೇಶ್ ಚಾಲನೆ ನೀಡಿದರು. ಈ ವೇಳೆ ಮುಖಂಡರಾದ ಲಿಂಗೇಗೌಡ, ಪುಟ್ಟ ಆಳಯ್ಯ, ನಾಗರಾಜು,ಮಾದೇವು, ಸುರೇಶ್, ಸರೋಜಮ್ಮ, ಇಂಜಿನಿಯರ್ ಕಿರಣ್, ಕಂಟ್ರ್ಯಾಕ್ಟರ್ ಶರೀಫ್ ಇನ್ನಿತರರಿದ್ದರು.

ಪಾಲಿಕೆ ಭ್ರಷ್ಟಾಚಾರ ಮುಕ್ತಗೊಳಿಸಲು ಮೇಯರ್ ಶಿವಕುಮಾರ್‌ಗೆ ಮಾಜಿ ಮೇಯರ್ ಭೈರಪ್ಪ ಸಲಹೆ

ಮೈಸೂರು, ಸೆ.15(ಆರ್‌ಕೆಬಿ)– ಮೇಯರ್ ಶಿವಕುಮಾರ್ ಅವರು ಪಾಲಿಕೆಯಲ್ಲಿನ ಎಲ್ಲ ಇಲಾಖೆಗಳನ್ನು ಭ್ರಷ್ಟಾಚಾರಮುಕ್ತಗೊಳಿಸಲು ಮುಂದಾಗಲಿ ಎಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಸಲಹೆ ನೀಡಿದ್ದಾರೆ.



ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಲಿಕೆಯ ಎಲ್ಲಾ ವಿಭಾಗದಲ್ಲೂ ಭ್ರಷ್ಟಾಚಾರವಿದೆ. ಮರಣ ಹಾಗೂ ಜನನ ಪ್ರಮಾಣ ಪತ್ರ ಪಡೆಯಲೂ ಲಂಚ ನೀಡದಿದ್ದರೆ ಕೆಲಸ ಆಗುವುದಿಲ್ಲ. ಸ್ವತಃ ತಾವೇ ತಮ್ಮ ತಂದೆಯ ಮರಣ ಪ್ರಮಾಣಪತ್ರ ಸುಲಭವಾಗಿ ಪಡೆಯಲಾಗಲಿಲ್ಲ ಎಂದರೆ ಶ್ರೀಸಾಮಾನ್ಯರ ಪಾಡೇನು ಎನ್ನುವಂತಾಗಿದೆ ಎಂದರು. ಮೈಸೂರನ್ನು ಪ್ಲಾಸ್ಟಿಕ್ ಮುಕ್ತ, ತ್ಯಾಜ್ಯ ಮುಕ್ತ ಎಂದು ಘೋಷಿಸಲಾಗಿದೆ. ಇದೇ ರೀತಿ ಶಿವಕುಮಾರ್ ಪಾಲಿಕೆಯನ್ನು ಲಂಚಮುಕ್ತ ಮಾಡಲಿ ಎಂದು ಮನವಿ ಮಾಡಿದರು. ಆನ್‌ಲೈನ್ ಮೂಲಕ ಸುಲಭವಾಗಿ ನಕ್ಷೆ ಪಡೆಯಬಹುದು ಎನ್ನಲಾಗುತ್ತಿದೆ. ಆದರೆ ಅಂತಹ ಸಂದರ್ಭಗಳಲ್ಲಿ ಈ ಮೂಲೆ ಸರಿಯಿಲ್ಲ, ಆ ಮೂಲೆ ಸರಿಯಿಲ್ಲ ಎಂದು ಅಧಿಕಾರಿಗಳು ಕೊಕ್ಕೆ ಹಾಕುತ್ತಾರೆ. ಬಳಿಕ ಆಫ್‌ಲೈನ್ ಮಾಡಿಸಿ ಲಂಚಕ್ಕಾಗಿ ಬೇಡಿಕೆ ಇಡುತ್ತಿದ್ದಾರೆ. ಹೀಗಾಗಿ ಇಲ್ಲಿಯೂ ಲಂಚವಿದೆ ಎಂದು ಆರೋಪಿಸಿದರು. ರಾಷ್ಟ್ರಪತಿಗಳು ಮೈಸೂರಿಗೆ ಭೇಟಿ ನೀಡುತ್ತಿರುವುದು, ಅವರೇ ದಸರಾ ಉದ್ಘಾಟಿಸುತ್ತಿರುವುದು, ಚಾಮುಂಡೇಶ್ವರಿಗೆ ಅಂಬಾರಿ ವೇಳೆ ಪುಷ್ಪಾರ್ಚನೆ ಮಾಡುವ, ಜಂಬೂಸವಾರಿಯಲ್ಲಿ ಕುದುರೆ ಸವಾರಿ ಮಾಡುವ ಸದವಕಾಶ ಈಗಿನ ಮೇಯರ್‌ಗೆ ದೊರೆತಿದೆ. ಹೀಗಾಗಿ ಈ ಅವಕಾಶ ಸದುಪಯೋಗಪಡಿಸಿಕೊಂಡು ಮೈಸೂರು ನಗರ ಅಭಿವೃದ್ಧಿಪಡಿಸಲಿ ಎಂದು ಸಲಹೆ ನೀಡಿದರು.

ಜಯಕರ್ನಾಟಕ ಸಂಘಟನೆ ಚಟುವಟಿಕೆ ಪುನಾರಂಭ

ಮೈಸೂರು, ಸೆ.15(ಆರ್‌ಕೆಬಿ)– ದಿವಂಗತ ಮುತ್ತಪ್ಪ ರೈ ಅವರ ನೇತೃತ್ವದಲ್ಲಿ ಏನಾದರೂ ಕ್ರಾಂತಿ ಮಾಡಬಹುದೆಂಬ ಕಾರಣದಿಂದ ರಾಜ್ಯಾದ್ಯಂತ ಅನೇಕ ಯುವಕರು ಜಯ ಕರ್ನಾಟಕ ಸಂಘಟನೆ ಸೇರಿದ್ದಾರೆ. ಸಂಘಟನೆಯು ಕೊರೊನಾ ಸಂದರ್ಭದಲ್ಲಿ ಕಡಿಮೆ ಮಾಡಿಕೊಂಡಿದ್ದ ಚಟುವಟಿಕೆಯನ್ನು ಈಗ ಚುರುಕುಗೊಳಿಸಲಿದೆ ಎಂದು ಸಂಘಟನೆಯ ಪದಾಧಿಕಾರಿ ಆರ್.ಹರೀಶ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯಾಧ್ಯಕ್ಷ ಡಾ.ಬಿ.ಎನ್. ಜಗದೀಶ್, ನೂತನ ಜಿಲ್ಲಾಧ್ಯಕ್ಷ ಎಸ್. ಶ್ರೀಧರ್ ಅವರಿಗೆ ನೇಮಕಾತಿ ಪತ್ರ ವಿತರಿಸಿ, ಮಾತನಾಡಿದರು. ಈಗ ಕೋವಿಡ್ ಸೋಂಕು ಕಡಿಮೆ ಆಗಿದ್ದು, ಯುವಜನರನ್ನು ಸಂಘಟನೆಗೆ ಆಕರ್ಷಿಸಲಾಗುತ್ತಿದೆ. ಯಾವುದೇ ಸರ್ಕಾರಿ ಶಾಲೆ, ಕಚೇರಿಗಳಲ್ಲಿ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಂಘಟನೆಯು ಹೋರಾಟ ರೂಪಿಸಿ, ಪರಿಹಾರ ದೊರಕಿಸಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಜಯಾ, ಅಜಯ್ ಶಾಸ್ತ್ರಿ ಉಪಸ್ಥಿತರಿದ್ದರು.

ನಾಳೆ ಮೆಲ್ಲುಸಿರೇ ಸವಿಗಾನ ಸಂಗೀತ ಸಂಜೆ

ಮೈಸೂರು, ಸೆ.15(ಆರ್‌ಕೆಬಿ)– ಎಂಜಿನಿಯರುಗಳೇ ಸೇರಿಕೊಂಡು ರಚಿಸಿರುವ ಭೂಮಿಕ ಅಸೋಸಿಯೇಟ್ಸ್ ವತಿಯಿಂದ ಸೆ.17ರಂದು ಸಂಜೆ 5.30 ಗಂಟೆಗೆ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಹಳೆಯ ಹಿಂದಿ ಚಿತ್ರಗೀತೆಗಳ 'ಮೆಲ್ಲುಸಿರೇ ಸವಿಗಾನ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗೌರವ ಕಾರ್ಯದರ್ಶಿ ಎಸ್.ಶಶಿಕುಮಾರ್ ತಿಳಿಸಿದರು. ನಮ್ಮದು ಎಂಜಿನಿಯರ್‌ಗಳ ಸಂಸ್ಥೆಯೇ ಆದರೂ ಕಾರ್ಯಕ್ರಮ ವೇಳೆ ಹೊಸ ಪ್ರತಿಭೆಗಳಿಗೂ ಅವಕಾಶ ನೀಡಲಾಗುತ್ತಿದೆ. ಇದು ಕರೋಕೆ ಕಾರ್ಯಕ್ರಮವಾಗಿದ್ದು, ಕನ್ನಡ, ಹಿಂದಿ, ತಮಿಳು, ತೆಲುಗು ಚಲನಚಿತ್ರ ಗೀತೆಗಳನ್ನು ಹಾಡಲಾಗುವುದು ಎಂದು ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸಂಸ್ಥೆಯ ಸದಸ್ಯರೇ ದೇಣಿಗೆ ಹಾಕಿ ಕಾರ್ಯಕ್ರಮ ನಡೆಸುತ್ತಿದ್ದೇವೆ. ಇಲ್ಲಿ ಹಾಡುವವರಿಗೆ ಉಚಿತ ಅವಕಾಶವಿದ್ದು, ಯಾವುದೇ ಶುಲ್ಕ ವಿಧಿಸುತ್ತಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಡಾ.ಎ.ಡಿ.ಶ್ರೀನಿವಾಸನ್, ಸುರೇಶ್, ರಾಜೇಂದ್ರ ಪ್ರಸಾದ್, ಆನಂದ್ ಉಪಸ್ಥಿತರಿದ್ದರು.

ನಿಧನ



ಶಂಕರಪ್ಪ

ಸರಗೂರು,ಸೆ.15–ತಾಲೂಕಿನ ನಂಜೀಪುರ ಗ್ರಾಮದ ಲೇಟ್ ಮಹದೇವಪ್ಪನವರ ಪುತ್ರ ಶಂಕರಪ್ಪ (55) ಬುಧವಾರ ಬೆಳಗ್ಗೆ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಸಹೋದರಿ, ಸಹೋದರರು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸಂಜೆ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಅಕ್ಷರ ದಾಸೋಹ ನೌಕರರ 5ನೇ ಮೈಸೂರು ಜಿಲ್ಲಾ ಸಮ್ಮೇಳನ

ಕೇರಳದಲ್ಲಿ ಬಿಸಿಯೂಟ ನೌಕರರಿಗೆ ದಿನಕ್ಕೆ 600 ರೂ., ನಮ್ಮಲ್ಲಿ 123 ರೂ.

ಮೈಸೂರು, ಸೆ.15(ಪಿಎಂ)–ಕೇರಳ ರಾಜ್ಯದಲ್ಲಿ ಅಕ್ಷರ ದಾಸೋಹ ನೌಕರರಿಗೆ (ಬಿಸಿಯೂಟ ನೌಕರರು) ದಿನಕ್ಕೆ 600 ರೂ. ವೇತನ ಕೊಡುತ್ತಿದ್ದು, ನಮ್ಮಲ್ಲಿ ಮಾತ್ರ ಕೇವಲ 123 ರೂ. ಕೊಡಲಾಗುತ್ತಿದೆ ಎಂದು ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ (ಸಿಐಟಿಯು) ಖಜಾಂಚಿ ಮಹದೇವಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಅಕ್ಷರ ದಾಸೋಹ ನೌಕರರ ಸಂಘದ ಖಜಾಂಚಿ ಮಹದೇವಮ್ಮ ಅಸಮಾಧಾನ



ಮೈಸೂರಿನ ಬುದ್ಧವಿಹಾರದ ಸಭಾಂಗಣದಲ್ಲಿ ಅಕ್ಷರ ದಾಸೋಹ ನೌಕರರ 5ನೇ ಜಿಲ್ಲಾ ಸಮ್ಮೇಳನ ನಡೆಯಿತು.

ಮೈಸೂರಿನ ಅಶೋಕ ವೃತ್ತದ (ಬಲ್ಲಾಳ್ ವೃತ್ತ) ಬಳಿಯ ವಿಶ್ವಮೈತ್ರಿ ಬುದ್ಧವಿಹಾರದ ಸಭಾಂಗಣದಲ್ಲಿ ಕನಿಷ್ಠ ಕೂಲಿ ಮತ್ತು ಕೆಲಸದ ಖಾಯಂಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ (ಸಿಐಟಿಯು) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಅಕ್ಷರ ದಾಸೋಹ ನೌಕರರ 5ನೇ ಮೈಸೂರು ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಕೇರಳ ಸರ್ಕಾರ ತನ್ನ ಅಕ್ಷರ ದಾಸೋಹ ನೌಕರರಿಗೆ ದಿನಕ್ಕೆ 600 ರೂ.ನಂತೆ ಮಾಸಿಕ 18 ಸಾವಿರ ರೂ. ವೇತನ ನೀಡುತ್ತಿದೆ. ಆದರೆ ನಮ್ಮಲ್ಲಿ ಗೌರವಧನದ ಹೆಸರಿನಲ್ಲಿ ದಿನಕ್ಕೆ ಕೇವಲ 123 ರೂ. ಮಾತ್ರ ನೀಡುತ್ತಿದ್ದು, ಮಾಸಿಕವಾಗಿ ದೊರೆಯುವ ಕೇವಲ ಮೂರೂವರೆ ಸಾವಿರ ರೂ.ನಲ್ಲಿ ಹೇಗೆ ಜೀವನ ಮಾಡಲು ಸಾಧ್ಯ. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಕಾರ್ಮಿಕ, ರೈತ ಹಾಗೂ ಮಹಿಳಾ ವಿರೋಧಿ ನೀತಿ ಅನುಸರಿಸುತ್ತಿವೆ ಎಂದು ದೂರಿದರು.

ಕನಿಷ್ಠ ಕೂಲಿ ಹಾಗೂ ನಿವೃತ್ತ ವೇತನಕ್ಕೆ ನಿರಂತರ ಹೋರಾಟ ಮಾಡಿದರೂ ಈ ಸರ್ಕಾರಗಳು ಜಗ್ಗುತ್ತಿಲ್ಲ. ರಾಜ್ಯದಲ್ಲಿ 6 ಸಾವಿರಕ್ಕೂ ಹೆಚ್ಚು ಅಕ್ಷರ ದಾಸೋಹದ ಮಹಿಳೆಯರನ್ನು 60 ವರ್ಷ ದಾಟಿದ ನೆಪದಲ್ಲಿ ಯಾವುದೇ ಸೌಲಭ್ಯ ನೀಡದೇ ನಿವೃತ್ತ ಹೆಸರಿನಲ್ಲಿ ಮನೆಗೆ ಕಳುಹಿಸಲಾಗಿದೆ. ಇವರಿಗೆ ನಿವೃತ್ತ ಸೌಲಭ್ಯವಾಗಿ ಕನಿಷ್ಠ ಲಕ್ಷ ರೂ. ನೀಡಬೇಕೆಂದು ಒತ್ತಾಯಿಸಿದರೂ ಸ್ಪಂದಿಸುತ್ತಿಲ್ಲ. ಅಚ್ಛೆ ದಿನ ಮಾಡುತ್ತೇವೆ ಎಂದು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ್ ಸೂರ್ಯ ಮಾತನಾಡಿ, ಶಾಲಾ ಮಕ್ಕಳಿಗೆ ಅನ್ನ ನೀಡುವ ಬಿಸಿಯೂಟ ತಾಯಂದಿರಿಗೆ ನಮ್ಮ ರಾಜ್ಯದಲ್ಲಿ ಕಡಿಮೆ ವೇತನ ನೀಡಲಾಗುತ್ತಿದೆ. ನಮ್ಮಿಂದ ಓಟು ಪಡೆದ ಯಾವುದೇ ಶಾಸಕ, ಮಂತ್ರಿಗಳು ಅಸಂಘಟಿತ ಕಾರ್ಮಿಕರಿಗೆ ವೇತನ ಹೆಚ್ಚಿಸುವ ಬಗ್ಗೆ ವಿಧಾನಸಭೆಯಲ್ಲಿ ಮಾತನಾಡುವುದಿಲ್ಲ. ಆದರೆ ತಮ್ಮ ವೇತನ ಹೆಚ್ಚಳ ಮಾಡಿಕೊಳ್ಳುತ್ತಾರೆ ಎಂದರು.

ಪ್ರಸ್ತುತ ನಮ್ಮಲ್ಲಿ ಶಾಸಕರು 1.40 ಲಕ್ಷ ರೂ.ನಿಂದ ಎರಡು ಲಕ್ಷ ರೂ.ವರೆಗೆ ವೇತನ ಪಡೆಯುತ್ತಿದ್ದಾರೆ. ಕೇರಳದಲ್ಲಿ ಶಾಸಕರ ಮಾಸಿಕ ವೇತನ 4,600 ಇದ್ದರೆ, ಕಾರ್ಮಿಕರ ಕನಿಷ್ಠ ವೇತನ ದಿನಕ್ಕೆ 670 ರೂ ಇದೆ. ಅಲ್ಲದೆ, ಅಲ್ಲಿ ಬಿಸಿಯೂಟ ನೌಕರರಿಗೆ ಮಾಸಿಕ 18 ಸಾವಿರ ರೂ. ವೇತನ ನೀಡಲಾಗುತ್ತಿದೆ. ಕೇರಳ ಸರ್ಕಾರ ಜನಪರ ಆಡಳಿತ ನೀಡುತ್ತಿದೆ ಎಂದರು. ಇದಕ್ಕೂ ಮುನ್ನ ರಾಮಸ್ವಾಮಿ ವೃತ್ತದಿಂದ ಬುದ್ಧ ವಿಹಾರದವರೆಗೆ ಬಿಸಿಯೂಟ ನೌಕರರ ಮೆರವಣಿಗೆ ನಡೆಯಿತು. ಅಂಗನವಾಡಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಸುನಂದಾ, ಸಿಐಟಿಯು ಜಿಲ್ಲಾಧ್ಯಕ್ಷ ಬಾಲಾಜಿ ರಾವ್, ಪ್ರಧಾನ ಕಾರ್ಯದರ್ಶಿ ಜಿ.ಜಯರಾಮ್, ಅಕ್ಷರ ದಾಸೋಹ ನೌಕರರ ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷೆ ಮಂಜುಳಾ ಮತ್ತಿತರರು ಹಾಜರಿದ್ದರು. ಜಿಲ್ಲೆಯ ವಿವಿಧ ತಾಲೂಕುಗಳಿಂದ ಪ್ರತಿನಿಧಿಗಳು ಜಿಲ್ಲಾ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

> “ಕಳೆದ 19 ವರ್ಷಗಳಿಂದ ದುಡಿಯುತ್ತಿರುವ ರಾಜ್ಯದ ಅಕ್ಷರ ದಾಸೋಹ ನೌಕರರ ಪರಿಸ್ಥಿತಿ ಸಂಕಷ್ಟದಲ್ಲಿದೆ. ಈ ಸರ್ಕಾರಗಳು ಅಭಿವೃದ್ಧಿಗೆ ನಮ್ಮ ಆದ್ಯತೆ ಎಂದು ಕೇವಲ ಮಾತಿಗೆ ಹೇಳುತ್ತವೆ. ಇವರ ಅಭಿವೃದ್ಧಿಯಲ್ಲಿ ನಾವಿಲ್ಲವೇ? ನಮ್ಮ ಶ್ರೇಯೋಭಿವೃದ್ಧಿಯೂ ಅಭಿವೃದ್ಧಿಯ ಭಾಗವಲ್ಲವೇ? ನಮಗೆ ಗೌರವಧನದ ಹೆಸರಿನಲ್ಲಿ ಕೊಡುವ ಪುಡಿಗಾಸಿನಲ್ಲಿ ಜೀವನ ನಡೆಸುವುದಾದರೂ ಹೇಗೆ? ದೇಶ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ಮೇಲೆ ಬಿಸಿಯೂಟ ನೌಕರರ ಪರಿಸ್ಥಿತಿ ಮತ್ತಷ್ಟು ಸಂಕಷ್ಟಕ್ಕೆ ಸಿಲುಕುತ್ತಿದೆ.
> –ಮಹದೇವಮ್ಮ

ಮೈಸೂರಲ್ಲಿ ನಾಳೆ ಮೆಗಾ ರಕ್ತದಾನ ಶಿಬಿರ

1500 ಯೂನಿಟ್ ರಕ್ತ ಸಂಗ್ರಹ ಗುರಿ

ಮೈಸೂರು,ಸೆ.15(ಆರ್‌ಕೆಬಿ)–ಅಖಿಲ ಭಾರತೀಯ ತೇರಾಪಂತ್ ಯುವಕ ಪರಿಷತ್ (ಎಬಿಟಿವೈಪಿ) ವತಿಯಿಂದ ಸೆ.17ರಂದು ದೇಶಾದ್ಯಂತ ವಿಶ್ವದ ಅತಿ ದೊಡ್ಡ ರಕ್ತದಾನ ಅಭಿಯಾನ ಹಮ್ಮಿಕೊಂಡಿದ್ದು, ಅದರ ಅಂಗವಾಗಿ ಎಬಿಟಿವೈಪಿ ಮೈಸೂರು ಘಟಕದ ವತಿಯಿಂದ ಅಂದು ಮೈಸೂರಿನ 13 ಕೇಂದ್ರಗಳಲ್ಲಿ ಮೆಗಾ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ರೋಟರಿ ಮೈಸೂರು ಅಧ್ಯಕ್ಷ ಕೆ.ಸುಬ್ರಹ್ಮಣ್ಯರಾವ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಅವರು, ತೇರಾಪಂತ್ ಜೊತೆಯಲ್ಲಿ ಮೈಸೂರಿನ ವಿವಿಧ ರೋಟರಿ ಸಂಸ್ಥೆಗಳು, ಇನ್ನರ್ ವ್ಹೀಲ್, ಜೆಎಸ್‌ಎಸ್ ಸೇರಿದಂತೆ ಹಲವು ಸಂಘಟನೆಗಳ ಸಹಯೋಗದಲ್ಲಿ ಈ ಶಿಬಿರ ಏರ್ಪಡಿಸಲಾಗಿದೆ ಎಂದರು.

ರಕ್ತದಾನದ ಮಹತ್ವವನ್ನು ತಿಳಿಸಿದ ಅವರು, 17ರಂದು ಬೆಳಗ್ಗೆ 9 ಗಂಟೆಗೆ ರಂಗರಾವ್ ಅಂಡ್ ಸನ್ಸ್ ಮುಖ್ಯಸ್ಥ ಆರ್.ಗುರು ಶಿಬಿರಕ್ಕೆ ಚಾಲನೆ ನೀಡಲಿದ್ದಾರೆ. ಅಂದು ಮೈಸೂರಿನಲ್ಲಿ 1500 ಯೂನಿಟ್ ರಕ್ತವನ್ನು ಸಂಗ್ರಹಿಸುವ ಗುರಿ ಹೊಂದಲಾಗಿದೆ ಎಂದರು.


ಮೈಸೂರಿನ ಎಂ.ಜಿ.ರಸ್ತೆಯಲ್ಲಿರುವ ತೇರಾ ಪಂತ್ ಭವನ, ಜೆಎಲ್‌ಬಿ ರಸ್ತೆ ಐಡಿಯಲ್ ಜಾವಾ ರೋಟರಿ ಶಾಲೆ, ಅಶೋಕ ರಸ್ತೆ ಶ್ರೀ ಕನ್ನಿಕಾ ಮಹಲ್, ನಜರ್‌ಬಾದ್ ರಾಜಗೋಪಾಲರಾವ್ ರಾಶಿಂಕರ್ ಕಲ್ಯಾಣ ಮಂಟಪ, ಕುವೆಂಪುನಗರದ ಜೆಎಸ್‌ಎಸ್ ಕಚೇರಿ, ಯರಗನಹಳ್ಳಿ ಶ್ರೀ ಸಾಯಿ ಎಲೆಕ್ಟ್ರಾನಿಕ್ಸ್, ವಿಜಯನಗರ 1ನೇ ಹಂತದ ಕೊಡವ ಸಮಾಜ, ಚಾಮುಂಡಿಬೆಟ್ಟದ ರಸ್ತೆ ಎಸ್‌ಡಿಎಂಐಎಂಡಿ, ವಿಜಯನಗರದ ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ವಿಟಿಯು ಸಾತಗಳ್ಳಿ, ಅಲ್ಲದೆ ಕೆ.ಆರ್.ನಗರ, ಎಚ್.ಡಿ.ಕೋಟೆ, ಶ್ರೀರಂಗಪಟ್ಟಣಗಳಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಆಸಕ್ತ ರಕ್ತದಾನಿಗಳು ರಕ್ತದಾನ ಮಾಡಿ ಸಹಕರಿಸುವಂತೆ ಮನವಿ ಮಾಡಿದರು. ಇದೇ ದಿನ ದೇಶದ 2 ಸಾವಿರ ಕಡೆಗಳಲ್ಲಿ ಕನಿಷ್ಠ 2 ಲಕ್ಷ ಯೂನಿಟ್ ರಕ್ತವನ್ನು ಸಂಗ್ರಹಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ರೋಟರಿ ಬ್ಲಡ್ ಬ್ಯಾಂಕ್ ಸೆಕ್ರೆಟರಿ ಸಮೀರ್, ತೇರಾಪಂತ್ ಮೈಸೂರು ಅಧ್ಯಕ್ಷ ವಿಕಾಸ್ ಗಾಂಧಿ ಮೆಹ್ತಾ, ಕಾರ್ಯದರ್ಶಿ ಪ್ರಮೋದ್ ಮುನೋತ್, ಪದಾಧಿಕಾರಿಗಳಾದ ಆನಂದ್ ಮಾಂಡೋಂತ್, ಜೀವಧಾರ ರಕ್ತ ನಿಧಿ ಕೇಂದ್ರದ ಆಡಳಿತಾಧಿಕಾರಿ ರಶ್ಮಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನ ಡಾ.ಕೆ.ರಮೇಶ್ ಕಾಮತ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ

ಮೈಸೂರು, ಸೆ.15–ಕರ್ನಾಟಕ ರಾಜ್ಯ ಕೊಂಕಣಿ ಸಾಹಿತ್ಯ ಅಕಾಡೆಮಿಯವರು ಕಲೆಗಾಗಿ ನೀಡುವ "ಜೀವಮಾನ ಸಾಧನೆ ಪ್ರಶಸ್ತಿ–2022" ಅನ್ನು ಮೈಸೂರಿನ ರಂಗಕರ್ಮಿ– ಚಲನಚಿತ್ರ ನಿರ್ದೇಶಕ ಡಾ.ಕೆ.ರಮೇಶ್ ಕಾಮತ್ ಅವರಿಗೆ ನೀಡಿದ್ದಾರೆ. ರಮೇಶ್ ಕಾಮತ್ ಅವರು ಮೈಸೂರಿನಲ್ಲೇ ಜನಿಸಿ, ಇಲ್ಲೇ ವಿದ್ಯಾಭ್ಯಾಸ ಪೂರೈಸಿ, ಪ್ರತಿಷ್ಠಿತ ಪುಣೆ ಫಿಲ್ಮ್ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ನಂತರ, 1980ರಲ್ಲಿ ಸಾರಸ್ವತ ಕೊಂಕಣಿ ಭಾಷೆಯ ಪ್ರಪ್ರಥಮ ಚಲನಚಿತ್ರ 'ಜನಮನ' ನಿರ್ಮಾಣ–ನಿರ್ದೇಶನ ಮಾಡಿದ್ದರು. 1960–1980ರ ಅವಧಿಯಲ್ಲಿ ಮೈಸೂರಿನಲ್ಲಿ ರಂಗ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಕಾಮತ್, ನಂತರ ಸರ್ಕಾರಿ ಕೆಲಸ ದೊರೆತ ಕಾರಣ ಬೆಂಗಳೂರಿಗೆ ತೆರಳಿ ಪ್ರತಿಷ್ಠಿತ ಜವಾಹರಲಾಲ್ ನೆಹರೂ ತಾರಾಲಯದ ನಿರ್ದೇಶಕರಾದರು.



ರಮೇಶ್ ಕಾಮತ್

ತಮ್ಮ 70ನೇ ವರ್ಷದ ಜನ್ಮ ದಿನೋತ್ಸವದ ಸಂದರ್ಭದಲ್ಲಿ ಅವರಿಗೆ ಈ ಉನ್ನತ ಪ್ರಶಸ್ತಿ ದೊರೆತಿದೆ. ಪ್ರಶಸ್ತಿಯು 50 ಸಾವಿರ ನಗದು, ಪ್ರಶಸ್ತಿ ಪತ್ರ ಮತ್ತು ಫಲಕ ಒಳಗೊಂಡಿರುತ್ತದೆ ಎಂದು ಅಕಾಡೆಮಿ ಅಧ್ಯಕ್ಷ ಜಗದೀಶ್ ಪೈ ತಿಳಿಸಿದ್ದಾರೆ.

ರಮೇಶ್ ಕಾಮತ್ ಕೊಂಕಣಿ ಭಾಷೆಗೆ ಮಾನ್ಯತೆ ಸಿಗುವ ಮುನ್ನವೇ ಸುಮಾರು 50 ವರ್ಷಗಳಿಂದ ಕೊಂಕಣಿ ಸಾಹಿತ್ಯ, ನಾಟಕ ರಂಗ, ಚಲನಚಿತ್ರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. 1980ರಲ್ಲಿಯೇ ಪ್ರಪ್ರಥಮ ಸಾರಸ್ವತ ಕೊಂಕಣಿ ಚಲನಚಿತ್ರ 'ಜನಮನ' ನಿರ್ಮಿಸಿ, ಅಪಾರ ಮನ್ನಣೆ ಗಳಿಸಿದ್ದಾರೆ. 1973ರಲ್ಲಿ ರಂಜನಾ ಆರ್ಟ್ ಸಂಸ್ಥೆ ಆರಂಭಿಸಿ, ದೇಶಾದ್ಯಂತ 50ಕ್ಕೂ ಹೆಚ್ಚಿನ ಕೊಂಕಣಿ ನಾಟಕ ಭಾರತದಾದ್ಯಂತ ಪ್ರದರ್ಶನ ನೀಡಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭ: ಇದೇ ಸೆಪ್ಟೆಂಬರ್ 18ರ ಭಾನುವಾರ ಬೆಂಗಳೂರಿನ ಮಲ್ಲೇಶ್ವರಂನ ಕಾಶೀ ಮಠದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕಾರ್ಯಕ್ರಮದಲ್ಲಿ ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಸುನಿಲ್‌ಕುಮಾರ್, ಸಂಸದ ಸದಾನಂದಗೌಡ, ಶಾಸಕರಾದ ವೇದವ್ಯಾಸ ಕಾಮತ್, ವಿಧಾನಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ನಾಳೆ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ

ಮೈಸೂರು, ಸೆ.15– ಜಿಲ್ಲಾ ಪಂಚಾಯತ್ ವತಿಯಿಂದ ಸೆ.17ರಂದು ಶನಿವಾರ ಬೆಳಗ್ಗೆ 10.30 ಗಂಟೆಗೆ ಜಿಪಂನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿಸೋಮಶೇಖರ್ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಹಮ್ಮಿಕೊಳ್ಳಲಾಗಿದೆ.

ಸೆ.18ರಂದು ಅರಸು ಮಂಡಳಿ ವಾರ್ಷಿಕ ಮಹಾಸಭೆ

ಮೈಸೂರು, ಸೆ.15– ಅರಸು ಮಂಡಳಿ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಸೆ.18ರಂದು ಬೆಳಗ್ಗೆ 11ಕ್ಕೆ ತ್ಯಾಗರಾಜ ರಸ್ತೆಯಲ್ಲಿರುವ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅನಾಥ ಶವಗಳಿಗೆ ಮುಕ್ತಿ ಕಾಣಿಸುವ

ಡಾ.ಅಯೂಬ್ ಅಹಮದ್‌ಗೆ ಪದ್ಮಶ್ರೀ ಪ್ರಶಸ್ತಿಗೆ ಸಂಸದ ಶಿಫಾರಸು

ಮೈಸೂರು, ಸೆ.15(ಆರ್‌ಕೆ)–ಅನಾಥ ಶವಗಳ ಅಂತ್ಯಕ್ರಿಯೆ ನೆರವೇರಿಸುತ್ತಿರುವ ಮೈಸೂರಿನ ಡಾ. ಅಯೂಬ್ ಅಹಮದ್ ಅವರಿಗೆ 2022ನೇ ಸಾಲಿನ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸುವಂತೆ ಸಂಸದ ಪ್ರತಾಪ್ ಸಿಂಹ ಶಿಫಾರಸು ಮಾಡಿದ್ದಾರೆ.

ಸೆ.14ರಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಅವರು, ನನ್ನ ಲೋಕಸಭಾ ಕ್ಷೇತ್ರ ವ್ಯಾಪ್ತಿ ನಿವಾಸಿಯಾದ 43 ವರ್ಷ ವಯಸ್ಸಿನ ಅಯೂಬ್ ಅಹಮದ್ ಮೈಸೂರಿನ ಮಂಡಿ ಮೊಹಲ್ಲಾ ಮಾರುಕಟ್ಟೆಯಲ್ಲಿ ಲೋಡರ್ ಕೆಲಸ ಮಾಡುತ್ತಿದ್ದು, ಆಸ್ಪತ್ರೆ, ಪೊಲೀಸ್ ಸಿಬ್ಬಂದಿ, ಸಾರ್ವಜನಿಕರಿಂದ ಕರೆ ಬಂದ ತಕ್ಷಣ ಸ್ಥಳಕ್ಕೆ ಹೋಗಿ ಅನಾಥ ಮೃತದೇಹಗಳನ್ನು, ತಮ್ಮ ಸ್ವಂತ ಕಾರಿನಲ್ಲಿ ಶವಾಗಾರಕ್ಕೆ ಸಾಗಿಸಿ ಮರಣೋತ್ತರ ಪರೀಕ್ಷೆ ಹಾಗೂ ಕಾನೂನು ಪ್ರಕ್ರಿಯೆ ಮುಗಿದ ನಂತರ ಅಂತ್ಯಕ್ರಿಯೆ ನೆರವೇರಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.



ಈವರೆಗೆ ಅವರು 16,000 ಮೃತದೇಹಗಳ ಅಂತ್ಯಕ್ರಿಯೆ ನಡೆಸಿದ್ದು, ಅವರು 'Body Miyan' ಎಂದೇ ಖ್ಯಾತರಾಗಿದ್ದಾರೆ. ಅವರ ಸೇವೆಯನ್ನು ಗುರುತಿಸಿ 2020ರಲ್ಲಿ ಅಮೇರಿಕಾದ ಹಾರ್ಮೋನಿ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿದ್ದು, ಮೈಸೂರು ಜಿಲ್ಲಾಡಳಿತದಿಂದ ರಾಜ್ಯೋತ್ಸವ ಪುರಸ್ಕಾರ ನೀಡಿರುವುದರಿಂದ ಡಾ. ಅಯೂಬ್ ಅಹಮದ್ ಅವರಿಗೆ 2022ನೇ ಸಾಲಿನ 'ಪದ್ಮಶ್ರೀ' ಪ್ರಶಸ್ತಿ ನೀಡುವಂತೆ ಪ್ರತಾಪ್ ಸಿಂಹ ಅವರು ಪ್ರಧಾನಿಗಳಿಗೆ ಬರೆದಿರುವ ಪತ್ರದಲ್ಲಿ ಮನವಿ ಮಾಡಿದ್ದಾರೆ.

ದಸರಾದಲ್ಲಿ ಪಾಲ್ಗೊಳ್ಳುವ ಹೆಣ್ಣಾನೆಗಳ ವಿಚಾರದಲ್ಲಿ ನಿರ್ಲಕ್ಷ್ಯ ಖಂಡಿಸಿ ಪ್ರತಿಭಟನೆ

ಗರ್ಭಿಣಿ ಲಕ್ಷ್ಮಿ ಆನೆಗೆ ಮಾನಸಿಕ, ದೈಹಿಕ ಹಿಂಸೆ ನೀಡಿದ ಅರಣ್ಯ ಅಧಿಕಾರಿಗಳ ವಿರುದ್ಧ ಆಕ್ರೋಶ

ಮೈಸೂರು, ಸೆ.15(ಆರ್‌ಕೆಬಿ)–ಈ ಬಾರಿಯ ದಸರಾ ಮಹೋತ್ಸವಕ್ಕೆ ತರಲಾಗಿದ್ದ ಹೆಣ್ಣಾನೆ ಲಕ್ಷ್ಮಿ ತುಂಬು ಗರ್ಭಿಣಿಯಾಗಿದ್ದರೂ ಅದಕ್ಕೆ ತಾಲೀಮು, ಶಬ್ದ ತಾಲೀಮು ಇನ್ನಿತರೆ ತರಬೇತಿಯಲ್ಲಿ ಬಳಸಿಕೊಂಡು ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದೆ. ಇದು ಅತ್ಯಂತ ನೋವು ಮತ್ತು ಆತಂಕದ ನಡೆಯಾಗಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಗುರುವಾರ ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಪ್ರತಿಭಟನೆ ನಡೆಸಿದರು.

ಗರ್ಭಿಣಿ ಆನೆಯನ್ನು ಪ್ರತಿದಿನ 8ರಿಂದ 10 ಕಿ.ಮೀ.ವರೆಗೆ ನಡೆಸಿದ್ದಲ್ಲದೆ, ಫಿರಂಗಿ, ಸಿಡಿಮದ್ದು ಸಿಡಿಸಿ ತುಂಬು ಗರ್ಭಿಣಿಯಾದ ಆಕೆಗೆ ಅಮಾನವೀಯ ರೀತಿಯಲ್ಲಿ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಲಾಗಿದೆ. ದಸರಾದಂತಹ ಶುಭ ಕಾರ್ಯಗಳಿಗೆ ಆನೆಗಳನ್ನು ಬಳಸಿಕೊಳ್ಳುವುದು ನಮ್ಮ ಸಂಸ್ಕೃತಿ. ಆದರೆ ಪೂಜ್ಯ ಭಾವನೆಯನ್ನೇ ಮುಂದಿಟ್ಟುಕೊಂಡು ಮಾರ್ಗಸೂಚಿ ಪಾಲಿಸದೇ ಗರ್ಭಿಣಿ ಆನೆಯನ್ನು ಕರೆ ತಂದು ಅರಣ್ಯ ಇಲಾಖೆ ಅಧಿಕಾರಿಗಳು ಭಾರೀ ಪ್ರಮಾದ ಮಾಡಿದ್ದಾರೆ. ಕೂಡಲೇ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಮುಂದೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮು ಎಚ್ಚರಿಕೆ ನೀಡಿದರು.



> “ಆನೆ ಲಕ್ಷ್ಮಿ ಸೆ.14ರಂದು ಗಂಡು ಮರಿಗೆ ಜನ್ಮ ನೀಡಿದೆ. ಆಕೆ ಗರ್ಭಿಣಿ ಎಂದು ತಿಳಿದಿದ್ದರೂ ದಸರಾ ಮಹೋತ್ಸವಕ್ಕೆ ಕರೆ ತಂದಿದ್ದು ಮೊದಲ ತಪ್ಪು. 2 ತಿಂಗಳ ಮೊದಲೇ ದಸರಾದಲ್ಲಿ ಪಾಲ್ಗೊಳ್ಳುವ ಎಲ್ಲಾ ಆನೆಗಳಿಗೆ ಆರೋಗ್ಯ ತಪಾಸಣೆ ನಡೆಸುವುದು ವಾಡಿಕೆ. ಆದರೆ ಅರಣ್ಯ ಅಧಿಕಾರಿಗಳು ಆನೆ ಲಕ್ಷ್ಮಿ ಗರ್ಭಿಣಿ ಎಂಬುದನ್ನು ಗುರುತಿಸುವಲ್ಲಿ ವಿಫಲರಾಗಿದ್ದಾರೆ. ಇದು ಅರಣ್ಯ ಇಲಾಖೆಯವರ ನಿರ್ಲಕ್ಷ್ಯಕ್ಕೆ ಸ್ಪಷ್ಟ ನಿದರ್ಶನವಾಗಿದೆ. **–ಕೆ.ಎಸ್.ಶಿವರಾಮು, ವೇದಿಕೆ ಅಧ್ಯಕ್ಷ.**

ಪ್ರತಿಭಟನೆಯಲ್ಲಿ ರಾಜ್ಯ ಅತೀ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಜಿಲ್ಲಾಧ್ಯಕ್ಷ ಡಿ.ನಾಗಭೂಷಣ್, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್. ನಾಗೇಶ್, ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಜಿಲ್ಲಾ ಕುಂಬಾರ ಸಂಘದ ಅಧ್ಯಕ್ಷ ಹೆಚ್.ಎಸ್. ಪ್ರಕಾಶ್, ಮುಖಂಡರಾದ ಮಹೇಂದ್ರ ಕಾಗಿನೆಲೆ, ಲೋಕೇಶ್‌ಕುಮಾರ್ ಮಾದಾಪುರ, ಸತ್ಯನಾರಾಯಣ್, ರವಿ ನಜ಼ರ್‌ಬಾದ್, ರವಿನಾಯಕ್, ಕನಕಮೂರ್ತಿ, ಮೈಸೂರು ಬಸವಣ್ಣ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.09.2022 ಶುಕ್ರವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ : ಷಷ್ಠಿ, ನಕ್ಷತ್ರ : ಕೃತ್ತಿಕಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ–ಪ್ರೊ.ಎನ್.ವೆಂಕೋಬರಾವ್, 6.40 ಅರಿವಿನ ಶಿಖರ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, ಮಕ್ಕಳ ಕ್ಯಾನ್ಸರ್ ಜಾಗೃತಿ ಮಾಸ ಸಂದೇಶ ಮತ್ತು ಧ್ಯೇಯವಾಕ್ಯ ಭಾಗವಹಿಸುವ ತಜ್ಞರು–ಡಾ.ತರಂಗಿಣಿ ದುರುಗಪ್ಪ, 10.00 ಎಂ.ವೆಂಕಟೇಶಾಚಾರ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ಯಾಮಾಶಾಸ್ತ್ರಿಗಳ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ, ಸಣ್ಣಕಥೆ–ವಸುಂಧರಾ ಕಡಲೂರು, ಸ್ವರಚಿತ ಕವನಗಳ ವಾಚನ–ಪ್ರತಿಭಾ ಕುಡ್ತಡಕ, 4.30 ವೃತ್ತಿ ಮಾಗದರ್ಶನ– ಹಿಂದೀ ಭಾಷೆ ಮತ್ತು ಸಾಹಿತ್ಯ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಪ್ರತಿಭಾ ಮುದಲಿಯಾರ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, 9.00 ರಸಮಂಜರಿ, ಅಮೃತ ಸ್ವಾತಂತ್ರ್ಯ ಸಂದರ್ಭದಲ್ಲಿ ಸಂಸ್ಕೃತ ಪ್ರಸಾರ, ಮಾತನಾಡುತ್ತಾರೆ ಉಮಾ ಗಣೇಶದತ್ತ, ವೇದ ವೈಶ್ವಿಕ ಚಿಂತನೆ– ಮಾತನಾಡುತ್ತಾರೆ ಡಾ.ಆರ್. ಸುರೇಶ್

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹಿಮ್ಮಡಿ, ಪಾದದಲ್ಲಿ ನೋವು–ಉರಿ–ಊತದ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್ ಕರಕುಶಲ ಪ್ರದರ್ಶನ ಮತ್ತು ಮಾರಾಟ ಮೇಳ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಸಂಜೆ 4ಕ್ಕೆ.

■ **ಸೆಂಟರ್ ಫಾರ್ ಕಲ್ಚರ್ ಕಮ್ಯೂನಿಕೇಷನ್ ಅಂಡ್ ಕ್ರಿಯೇಟಿವಿಟಿ:** ಸಿರಿ ವಾನಳ್ಳಿ ಅವರಿಂದ ಆನಂದ ಭಾವನಿ ಏಕವ್ಯಕ್ತಿ ಪ್ರದರ್ಶನ, ನಿರ್ದೇಶನ: ಡಾ.ಶ್ರೀಪಾದ ಭಟ್, ರಂಗರೂಪ : ಸುಧಾ ಆಡುಕಳ, ಸಂಗೀತ: ಅನುಷ್ ಶೆಟ್ಟಿ ಮತ್ತು ಮುನ್ನಾ, ಸ್ಥಳ: ರಮಾಗೋವಿಂದ ರಂಗಮಂದಿರ, ಸಂಜೆ 7ಕ್ಕೆ.

■ **ಕ್ರೆಡಾಯ್, ಬಿಎಐ, ಮೈಸೂರು ಸೆಂಟರ್:** ಮೈ ರಿಯಾಲ್ಟಿ 2022, ಮೈಸೂರಿನ ಅತೀ ದೊಡ್ಡ ಪ್ರಾಪರ್ಟಿ ಪ್ರದರ್ಶನ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಗೌರವ ಅತಿಥಿಗಳು: ಮುಡಾ ಆಯುಕ್ತ ದಿನೇಶ್‌ಕುಮಾರ್, ಸ್ಥಳ: ಕಾಸ್ಮೋಪಾಲಿಟನ್ ಕ್ಲಬ್, ಬೆಳಗ್ಗೆ 10.30ಕ್ಕೆ.

■ **ರೋಟರಿ ಮೈಸೂರು ಅಂಬಾರಿ:** ಶ್ರೀಹರ್ಷ ಮತ್ತು ತಂಡದವರಿಂದ ಸಂಗೀತ ಸಂಜೆ, ಉದ್ಘಾಟನೆ: ರೋ.ಪ್ರಕಾಶ್ ಕಾರಂತ್, ಮುಖ್ಯ ಅತಿಥಿಗಳು: ಮಾಜಿ ಶಾಸಕ ವಾಸು, ಕಾಂಗ್ರೆಸ್ ಮುಖಂಡ ಹರೀಶ್‌ಗೌಡ, ಡಾ.ಈ.ಸಿ.ನಿಂಗರಾಜ್‌ಗೌಡ, ರೋ.ಹೆಚ್.ಎಂ.ಹರೀಶ್, ರಾಜಶೇಖರಮೂರ್ತಿ, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 4ಕ್ಕೆ.

■ **ಲಯನ್ಸ್ ಇಂಟರ್‌ನ್ಯಾಷನಲ್:** ಲಯನ್ಸ್ ಕ್ವೆಸ್ಟ್, ಉಪಾಧ್ಯಾಯರಿಗೆ ತರಬೇತಿ ಕಾರ್ಯಾಗಾರ, ಉದ್ಘಾಟನೆ: ಲಯನ್ ಸುರೇಶ್ ರಾಮು, ಗೌರವ ಅತಿಥಿಗಳು: ಕೆ.ದೇವೇಗೌಡ, ಕವಿತಾ ಶಾಸ್ತ್ರಿ, ಅಧ್ಯಕ್ಷತೆ: ವಿ.ವೆಂಕಟೇಶ್, ಸ್ಥಳ:ಲಯನ್ಸ್ ವೆಸ್ಟ್ ಸೇವಾನಿಕೇತನ ಸ್ಕೂಲ್, ಗೋಕುಲಂ, ಬೆಳಗ್ಗೆ 9ಕ್ಕೆ.

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು:** ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮ, ಉದ್ಘಾಟನೆ: ಸಹಕಾರಿ ಸಂಘದ ಅಧ್ಯಕ್ಷ ಜಿ.ನಂಜನಗೌಡ, ಅಧ್ಯಕ್ಷತೆ: ನಿಕಟಪೂರ್ವ ನಿರ್ದೇಶಕ ಹೆಚ್.ವಿ.ರಾಜೀವ್, ಸ್ಥಳ: ಗ್ರೀನ್ ಹೆರಿಟೇಜ್ ಹೋಟೆಲ್ ಸಭಾಂಗಣ, ದಿವಾನ್ಸ್ ರಸ್ತೆ, ಬೆಳಗ್ಗೆ 10ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 16 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 151 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

ಹಣ ಅಕ್ರಮ ವರ್ಗಾವಣೆ: ಡಿಕೆಶಿಗೆ ಇಡಿ ಸಮನ್ಸ್



ಬೆಂಗಳೂರು, ಸೆ.15(ಕೆಎಂಶಿ)– ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ಜಾರಿ ಮಾಡಿದೆ.

ಈ ಸಂಬಂಧ ಶಿವಕುಮಾರ್ ಅವರೇ ಸರಣಿ ಟ್ವೀಟ್ ಮಾಡಿ, 'ಭಾರತ್ ಜೋಡೋ ಯಾತ್ರೆ ಹಾಗೂ ವಿಧಾನ ಸಭೆ ಅಧಿವೇಶನ ನಡೆಯುತ್ತಿರುವ ಮಧ್ಯೆಯೇ ಮತ್ತೊಮ್ಮೆ ಇ.ಡಿ ನನಗೆ ಸಮನ್ಸ್ ನೀಡಿದೆ' ಎಂದು ತಿಳಿಸಿದ್ದಾರೆ.

ನಾನು ಸಹಕರಿಸಲು ಸಿದ್ಧ. ಆದರೆ, ಈ ಸಮನ್ಸ್ ನೀಡಿರುವ ಸಮಯ ಹಾಗೂ ಮೇಲಿಂದ ಮೇಲೆ ನೀಡುತ್ತಿರುವ ಕಿರುಕುಳದಿಂದಾಗಿ ಸಾಂವಿಧಾನಿಕ ಮತ್ತು ರಾಜಕೀಯ ಕರ್ತವ್ಯಗಳನ್ನು ನಿರ್ವಹಿಸಲು ನನಗೆ ತೊಂದರೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ದೆಹಲಿಯ ಸಫ್ದರ್‌ಜಂಗ್ ಎನ್‌ಕ್ಲೇವ್‌ನಲ್ಲಿರುವ ಶಿವಕುಮಾರ್ ಒಡೆತನದ ನಿವಾಸದಲ್ಲಿ 8.59 ಕೋಟಿ ನಗದು ದೊರೆತಿದ್ದರಿಂದ, ಐಪಿಸಿ ಸೆಕ್ಷನ್ 120 'ಬಿ' ಅಡಿ ಪ್ರಕರಣ ದಾಖಲಿಸಲಾಗಿದೆ.

ಪೊಲೀಸ್ ಇಲಾಖೆಯಲ್ಲಿ 2006ರಿಂದ ಆಗಿರುವ ನೇಮಕಾತಿ ಅಕ್ರಮಗಳ ತನಿಖೆ

● ವಿಧಾನಸಭೆಯಲ್ಲಿ ಕಾನೂನು ಸಚಿವ ಮಾಧುಸ್ವಾಮಿ ಘೋಷಣೆ ● ಇತ್ತೀಚಿನ ಪಿಎಸ್‌ಐ ನೇಮಕಾತಿ ಪ್ರಕರಣದ ಚರ್ಚೆಗೆ ವಿಪಕ್ಷ ಕಾಂಗ್ರೆಸ್ ಪಟ್ಟು; ಬಿಜೆಪಿ ಆಕ್ಷೇಪ

ಬೆಂಗಳೂರು, ಸೆ.15(ಕೆಎಂಶಿ)– ಕಳೆದ 2006 ರಿಂದ ಪೊಲೀಸ್ ಇಲಾಖೆಯ ನೇಮಕಾತಿಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತನಿಖೆ ನಡೆಸುವುದಾಗಿ ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ವಿಧಾನಸಭೆಯಲ್ಲಿಂದು ಪ್ರಕಟಿಸಿದ್ದಾರೆ.

ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣ ಕುರಿತು ನಿಯಮ 60ರಡಿ ಚರ್ಚೆಗೆ ಅವಕಾಶ ಕೊಡಬೇಕೆಂದು ಪ್ರತಿಪಕ್ಷ ಕಾಂಗ್ರೆಸ್ ಪಟ್ಟು ಹಿಡಿದ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ಅವರು, ಈ ಹಗರಣವನ್ನು ಬಯಲಿಗೆಳೆದಿದ್ದೆ ನಮ್ಮ ಸರ್ಕಾರ. ಸವಿಸ್ತಾರವಾಗಿ ಚರ್ಚೆ ನಡೆಯಲಿ. ಆದರೆ ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ, ಈ ಬಗ್ಗೆ ನಮ್ಮವರೇ ಕೆಲವೊಂದಷ್ಟು ಮಾಹಿತಿ ನೀಡಲಿದ್ದಾರೆ ಎಂದರು. ಅಕ್ರಮ ನೇಮಕಾತಿಗೆ ಸಂಬಂಧಿಸಿದಂತೆ ಈಗಾಗಲೇ ಒಬ್ಬ ಹಿರಿಯ ಪೊಲೀಸ್ ಅಧಿಕಾರಿ ಸೇರಿದಂತೆ ನೂರಾರು ಮಂದಿ ವಿರುದ್ಧ ಪ್ರಕರಣ ದಾಖಲಿಸಿ, ಜೈಲಿಗೆ ಕಳುಹಿಸಲಾಗಿದೆ. ಪೊಲೀಸ್ ನೇಮಕಾತಿ



ಅವ್ಯವಹಾರ ಇದು ಈಗಿನಿಂದಲ್ಲ, ಹಿಂದಿನಿಂದಲೂ ನಡೆದಿರುವ ಬಗ್ಗೆ ಸುಳಿವು ಸಿಕ್ಕಿದೆ. ಈ ಹಿನ್ನೆಲೆಯಲ್ಲಿ 2006 ರಿಂದ ನಡೆದಿರುವ ನೇಮಕಾತಿ ಬಗ್ಗೆಯು ತನಿಖೆಗೆ ನಾವು ಸಿದ್ಧರಿದ್ದೇವೆ. ಚರ್ಚೆ ಸಂದರ್ಭದಲ್ಲಿ ಸರ್ಕಾರ ಎಲ್ಲ ಮಾಹಿತಿಯನ್ನು ಸದನದ ಮುಂದಿಟ್ಟು, ಬಹಿರಂಗಪಡಿಸಲಾಗುವುದು ಎಂದರು. ಪ್ರಶ್ನೋತ್ತರ ಕಲಾಪ ಮುಗಿದ ಬಳಿಕ ಸಿದ್ದರಾಮಯ್ಯನವರು ವಿಷಯ ಪ್ರಸ್ತಾಪಿಸಿ, ಇದೊಂದು ಅತ್ಯಂತ ಗಂಭೀರವಾದ ವಿಷಯ. ಹಿರಿಯ ಪೊಲೀಸ್ ಅಧಿಕಾರಿಗಳೇ ಹಗರಣದಲ್ಲಿ ಭಾಗಿಯಾಗಿ ಜೈಲಿಗೆ ಹೋಗಿದ್ದಾರೆ. ಅನೇಕರ ಮೇಲೆ ಭ್ರಷ್ಟಾಚಾರದ ಆರೋಪಗಳು ಕೇಳಿಬಂದಿವೆ. ಹೀಗಾಗಿ ನಿಯಮ 60ರಡಿ ಚರ್ಚೆಗೆ ಅವಕಾಶ ಕೊಡಬೇಕೆಂದು ನಿಲುವಳಿ ಮಂಡಿಸಿದರು. ಪಿಎಸ್‌ಐ ಹಗರಣ ಸಾಮಾನ್ಯ ವಿಷಯವಲ್ಲ. 545 ಹುದ್ದೆಗಳಿಗೆ ಸಾವಿರಾರು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು, ಅನೇಕರು ನೇಮಕಾತಿ ಹೊಂದಿದ್ದರು. ಆದರೆ ಏಕಾಏಕಿ ಹಗರಣ ನಡೆದಿದೆ ಎಂಬ ಒಂದೇ ಕಾರಣಕ್ಕೆ ಇಡೀ ನೇಮಕಾತಿ ಪ್ರಕ್ರಿಯೆ ರದ್ದುಪಡಿಸಲಾಗಿದೆ. ಹೀಗಾಗಿ ಚರ್ಚೆಗೆ ಅವಕಾಶ ▶ 9ನೇ ಪುಟಕ್ಕೆ

ಮತ್ತೆ 15 ಸಾವಿರ ಶಿಕ್ಷಕರ ನೇಮಕಾತಿ



ವಿಧಾನಸಭೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ನಾಗೇಶ್ ಘೋಷಣೆ

ಬೆಂಗಳೂರು, ಸೆ.15(ಕೆಎಂಶಿ)– ಪ್ರಸ್ತುತ 15 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಮತ್ತೆ ಹೊಸದಾಗಿ ಇದೇ ಪ್ರಮಾಣದ ಶಿಕ್ಷಕರ ನೇಮಕಾತಿಗೆ ಚಾಲನೆ ನೀಡಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ವಿಧಾನಸಭೆಯಲ್ಲಿಂದು ಪ್ರಕಟಿಸಿದರು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಾಜ್ಯಾದ್ಯಂತ 8100 ಹೊಸ ಶಾಲಾ–ಕಾಲೇಜುಗಳ ಕೊಠಡಿಗಳನ್ನು ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ವೈ.ರಾಮಪ್ಪ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಮುಂದಿನ ಎರಡು ವಾರದಲ್ಲಿ 15 ಸಾವಿರ ಶಿಕ್ಷಕರ ಅಂತಿಮ ನೇಮಕಾತಿ ಪಟ್ಟಿ ಹೊರ ಬೀಳಲಿದೆ ಆನಂತರ ದಾಖಲೆಗಳನ್ನು ಪರಿಶೀಲಿಸಿ, ಅವರನ್ನು ಶಾಲೆಗಳಿಗೆ ನಿಯೋಜಿಸಲಾಗುವುದು.



ಈ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಮತ್ತೆ ನವೆಂಬರ್‌ನಲ್ಲಿ ಹೊಸ ಶಿಕ್ಷಕರ ನೇಮಕಾತಿಗೆ ಅರ್ಜಿ ಆಹ್ವಾನಿಸಿ, 2023ರ ಜನವರಿ–ಫೆಬ್ರವರಿ ವೇಳೆಗೆ ಹೊಸಬರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದರು. ರಾಜ್ಯದಲ್ಲಿ 47 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಭರ್ತಿ ಮಾಡಲಾಗುವುದು. ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ 27 ಸಾವಿರ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಸರ್ಕಾರಿ ಪ್ರೌಢಶಾಲೆಗಳ ವಿವಿಧ ವೃಂದಗಳ 2500 ▶ 9ನೇ ಪುಟಕ್ಕೆ

ಆಭರಣ ವ್ಯಾಪಾರಿ ಕಾರು ಅಡ್ಡಗಟ್ಟಿ ದರೋಡೆ ಯತ್ನ; ದುಷ್ಕರ್ಮಿಗಳನ್ನು ಮರಕ್ಕೆ ಕಟ್ಟಿ ಹಾಕಿ ಥಳಿಸಿದ ಗ್ರಾಮಸ್ಥರು

ಪಾಂಡವಪುರ, ಸೆ.15– ಹಾಡಹಗಲೇ ಕಾರನ್ನು ಅಡ್ಡಗಟ್ಟಿ ದರೋಡೆಗೆ ಯತ್ನಿಸಿದ ದುಷ್ಕರ್ಮಿಗಳನ್ನು ಗ್ರಾಮಸ್ಥರೇ ಹಿಡಿದು ಮರಕ್ಕೆ ಕಟ್ಟಿ ಹಾಕಿ, ಹಿಗ್ಗಾಮುಗ್ಗಾ ಥಳಿಸಿದ ಘಟನೆ ತಾಲೂಕಿನ ಬನ್ನಘಟ್ಟ ಗ್ರಾಮದ ಬಳಿ ಗುರುವಾರ ಬೆಳಗ್ಗೆ ನಡೆದಿದೆ.

ಕೇರಳ ಮೂಲದ ನಿವಾಸಿಗಳಾದ ರಂಜಿತ್(35), ನಿಸಾದ್(35) ಸಾರ್ವಜನಿಕರಿಗೆ ಸಿಕ್ಕಿಬಿದ್ದಿರುವ ದರೋಡೆಕೋರರು. ಇವರು ಮಹಾರಾಷ್ಟ್ರ ಮೂಲದ ಬೆಳಗಾವಿ ನಿವಾಸಿ ಹಾಗೂ ಚಿನ್ನದ ವ್ಯಾಪಾರಿ ಬಾಲಾಜಿ ಅವರು ಪ್ರಯಾಣಿಸುತ್ತಿದ್ದ ಕಾರನ್ನು ಅಡ್ಡಗಟ್ಟಿ ದರೋಡೆಗೆ ಯತ್ನಿಸಿದ್ದರು.

ಘಟನೆಯ ವಿವರ: ಬೆಳಗಾವಿ ಮೂಲದ ಚಿನ್ನದ ವ್ಯಾಪಾರಿ ಬಾಲಾಜಿ ಅವರು ಹಣದೊಂದಿಗೆ ಚಿನ್ನದ ವ್ಯಾಪಾರಕ್ಕಾಗಿ ಮೈಸೂರಿಗೆ ತೆರಳುತ್ತಿದ್ದರು. ▶ 9ನೇ ಪುಟಕ್ಕೆ



ಪಾಂಡವಪುರ ತಾಲೂಕಿನ ಬನಘಟ್ಟದ ಬಳಿ ದರೋಡೆ ನಡೆಸಿ ಸಿಕ್ಕಿಬಿದ್ದ ದರೋಡೆಕೋರರನ್ನು ಸಾರ್ವಜನಿಕರು ಮರಕ್ಕೆ ಕಟ್ಟಿ ಹಾಕಿರುವುದು.

ನಕಲಿ ದಾಖಲೆ ಸೃಷ್ಟಿಸಿ ಕಂಡ ಕಂಡವರ ಆಸ್ತಿ ಮಾರಾಟ ಪ್ರಕರಣ

ಮೈಸೂರು ನಗರ ಕಾಂಗ್ರೆಸ್ ಉಪಾಧ್ಯಕ್ಷ ರಾಜಾರಾಂ ಬಂಧನ



ರಾಜಾರಾಂ

● ಈತನೇ ಪ್ರಕರಣದ ಕಿಂಗ್‌ಪಿನ್ ● ಈತನ ಚಾಲಕನೂ ಸೆರೆ ● ಕಾಂಗ್ರೆಸ್ ವಲಯದಲ್ಲಿ ಈತ ಪ್ರಭಾವಿ ಮುಖಂಡ ● ಬಂಧಿತರ ಸಂಖ್ಯೆ 5ಕ್ಕೆ ಏರಿಕೆ

ಎಸ್.ಟಿ.ರವಿಕುಮಾರ್

ಮೈಸೂರು, ಸೆ.15–ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಹಾಗೂ ಖಾಸಗಿಯವರ ಆಸ್ತಿಗಳನ್ನು ಮಾರಾಟ ಮಾಡುತ್ತಿದ್ದ ಪ್ರಕರಣದಲ್ಲಿ ಮೈಸೂರು ನಗರ ಕಾಂಗ್ರೆಸ್ ಉಪಾಧ್ಯಕ್ಷ ಹಾಗೂ ಆತನ ಕಾರು ಚಾಲಕನನ್ನು ಕುವೆಂಪುನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರ ಕಾಂಗ್ರೆಸ್ ಉಪಾಧ್ಯಕ್ಷ ರಾಜಾರಾಂ ಮತ್ತು ಆತನ ಕಾರು ಚಾಲಕ ಖದೀರ್ ಬಂಧನಕ್ಕೊಳಗಾದವರಾಗಿದ್ದು, ಸದ್ಯ ರಾಜಾರಾಂನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಈ ಜಾಲದ ಕಿಂಗ್‌ಪಿನ್ ಈತನೇ ಎಂಬುದು ಈವರೆಗೂ ಪೊಲೀಸರು ನಡೆಸಿದ ತನಿಖೆಯಿಂದ ತಿಳಿದು ಬಂದಿದ್ದು, ಈ ಹಿನ್ನೆಲೆಯಲ್ಲಿ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ರಾಜಾರಾಂನನ್ನು ವಿಚಾರಣೆಗಾಗಿ ತಮ್ಮ ವಶಕ್ಕೆ ಪಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಮೈಸೂರಿನ ರಾಮಕೃಷ್ಣ ನಗರ ಐ–ಬ್ಲಾಕ್‌ನಲ್ಲಿರುವ ಗೋಲ್ಡನ್ ಬೆಲ್ಸ್ ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ ವಿವಿಧ ಇಲಾಖೆಗಳು, ಅಧಿಕಾರಿಗಳ ಸೀಲ್‌ಗಳು, ಇ–ಸ್ಟಾಂಪ್ ಪೇಪರ್‌ಗಳು, ಸ್ಕ್ಯಾನರ್, ಪ್ರಿಂಟರ್‌ಗಳೊಂದಿಗೆ ಮೂವರು ಆರೋಪಿಗಳು ಸೆ.5ರಂದು ಕುವೆಂಪುನಗರ ಠಾಣಾ ಪೊಲೀಸರಿಗೆ ಸಿಕ್ಕಿಬಿದ್ದಿದ್ದರು. ಅಂದು ಸರ್ವೀಸ್ ಅಪಾರ್ಟ್‌ಮೆಂಟ್ ಮೇಲೆ ದಾಳಿ ನಡೆಸಿದ್ದ ಕಾನೂನು–ಸುವ್ಯವಸ್ಥೆ ವಿಭಾಗದ ಡಿಸಿಪಿ ಪ್ರದೀಪ್ ಗುಂಟಿ, ಕುವೆಂಪುನಗರ ಸರ್ಕಲ್ ಇನ್ಸ್‌ಪೆಕ್ಟರ್ ಕೆ.ಷಣ್ಮುಗ ವರ್ಮಾ, ಸಬ್ ಇನ್ಸ್‌ಪೆಕ್ಟರ್ ಗೋಪಾಲ್ ಅವರನ್ನೊಳಗೊಂಡ ತಂಡ ಬೆಂಗಳೂರಿನ ಹೆಬ್ಬಾಳದಲ್ಲಿರುವ ಕಟ್ಟಿಗೇನಹಳ್ಳಿ ನಿವಾಸಿಯೂ ಆದ ರಿಯಲ್ ಎಸ್ಟೇಟ್ ಉದ್ಯಮಿ ಮಹಮ್ಮದ್ ನಯೀಮ್, ವಿಪ್ರೋ ಕಂಪನಿಯಲ್ಲಿ ▶ 9ನೇ ಪುಟಕ್ಕೆ



ಆರೋಪಿ ಮಹಮ್ಮದ್ ನಯೀಮ್

ಈ ಬಾರಿ ದಸರಾದಲ್ಲಿ ಮೈಸೂರು ಮಿನುಗಲಿದೆ: 124 ಕಿಲೋಮೀಟರ್ ದೀಪಾಲಂಕಾರ



● ಸೂರ್ಯಾಸ್ತದಿಂದ ರಾತ್ರಿ 10.30ರವರೆಗೆ ಬೆಳಗಲಿದೆ ಮೈಸೂರು ● ಸಂಸತ್ ಭವನ ಮಾದರಿ, ಪುನೀತ್, ರಾಷ್ಟ್ರ ಲಾಂಛನ, ರಾಷ್ಟ್ರ ಧ್ವಜ, ಪ್ರಾಣಿ– ಪಕ್ಷಿಗಳ ಪ್ರಜ್ವಲಿಸುವ ಮಾದರಿ ● 3 ದಿನ ಮೊದಲೇ ದೀಪಾಲಂಕಾರ ವ್ಯವಸ್ಥೆ

ಮೈಸೂರು, ಸೆ.15(ಎಂಟಿವೈ)– ನಾಡಹಬ್ಬ ದಸರಾ ಪ್ರಮುಖ ಆಕರ್ಷಣೆ ದೀಪಾಲಂಕಾರ ಈ ಬಾರಿ ಜನಾಕರ್ಷಿಸಲಿದ್ದು, ನಗರದ 124 ಕಿ.ಮೀ. ದೀಪಾಲಂಕಾರ ಮಾಡುವ ಮೂಲಕ ಸಾಂಸ್ಕೃತಿಕ ನಗರಿ ಮೈಸೂರನ್ನು ಬೆಳಗಲು ನಿರ್ಧರಿಸಲಾಗಿದೆ. ದಸರಾ ದೀಪಾಲಂಕಾರದ ಸಿದ್ಧತೆ ಕುರಿತಂತೆ ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ▶ 7ನೇ ಪುಟಕ್ಕೆ

ಲಕ್ಷ್ಮಿ ಪುತ್ರನಿಗೆ 'ಶ್ರೀ ದತ್ತಾತ್ರೇಯ' ನಾಮಕರಣ

ಮೈಸೂರು, ಸೆ.15(ಎಸ್‌ಬಿಡಿ)–ದಸರಾ ಗಜಪಡೆಯ 'ಲಕ್ಷ್ಮಿ ಪುತ್ರ'ನಿಗೆ 'ಶ್ರೀ ದತ್ತಾತ್ರೇಯ' ಎಂದು ಗುರುವಾರ ನಾಮಕರಣ ಮಾಡಲಾಗಿದೆ. ಮೈಸೂರು ದಸರಾ ಮಹೋತ್ಸವದ ವಿಜಯದಶಮಿ ಮೆರವಣಿಗೆಗೆಂದು ಮೊದಲ ತಂಡದಲ್ಲಿ ಆಗಮಿಸಿರುವ 22 ವರ್ಷದ ಹೆಣ್ಣಾನೆ 'ಲಕ್ಷ್ಮಿ' ಸೆ.13ರ ರಾತ್ರಿ 8.10ರ ವೇಳೆಯಲ್ಲಿ ಗಂಡು ಮರಿಗೆ ಜನ್ಮ ನೀಡಿದ್ದಾಳೆ. ಅರಮನೆ ಅಂಗಳದಲ್ಲೇ 'ಲಕ್ಷ್ಮಿ ಪುತ್ರ'ನ ಜನನವಾಗಿದ್ದರಿಂದ ರಾಜವಂಶಸ್ಥರಿಗೆ ಅತೀವ ಸಂತಸವಾಗಿದ್ದು, ಮರಿಗೆ ಹೆಸರು ಸೂಚಿಸುವುದಾಗಿ ಪ್ರಮೋದಾದೇವಿ ಒಡೆಯರ್ ಅವರು ತಿಳಿಸಿದ್ದರು. ಅದರಂತೆ ಅವರು ಸೂಚಿಸಿದ್ದ ಮೂರರಲ್ಲಿ 'ಶ್ರೀ ದತ್ತಾತ್ರೇಯ' ಹೆಸರನ್ನು ಅಂತಿಮಗೊಳಿಸಿ ಮರಿ ಆನೆಗೆ ನಾಮಕರಣ ಮಾಡಲಾಗಿದೆ.

ತಾಯಿ 'ಲಕ್ಷ್ಮಿ' ಹಾಗೂ ಪುತ್ರ 'ಶ್ರೀ ದತ್ತಾತ್ರೇಯ' ಆರೋಗ್ಯವಾಗಿದ್ದು, ಪ್ರತ್ಯೇಕ ಸ್ಥಳದಲ್ಲಿ ಆರೈಕೆ ಮಾಡಲಾಗುತ್ತಿದೆ. ಅರಣ್ಯ ಇಲಾಖೆ ಅಧಿಕಾರಿಗಳು, ಪಶು ವೈದ್ಯರು, ಮಾವುತ ಹಾಗೂ ಕಾವಾಡಿ ವಿಶೇಷ ಕಾಳಜಿ ವಹಿಸಿದ್ದಾರೆ. ▶ 7ನೇ ಪುಟಕ್ಕೆ

ಅರಮನೆ ಅಂಗಳದಲ್ಲಿ ಜನಿಸಿದ ಆನೆ ಮರಿಗೆ ಹೆಸರು ಸೂಚಿಸಿದ ರಾಜಮಾತೆ



ಲಿಂಗಾಂಬುದಿ ಕೆರೆ ಆವರಣದಲ್ಲಿ ಮೈಸೂರಿನ ಮೊದಲ 'ಬೊಟಾನಿಕಲ್ ಗಾರ್ಡನ್' ದಸರೆಗೆ ಮುಕ್ತ

● ಸೆ.26ರಂದೇ ಗಾರ್ಡನ್ ಉದ್ಘಾಟನೆ ● 300 ಜಾತಿಯ ಅಪರೂಪದ ಸಸ್ಯಗಳುಳ್ಳ ಉದ್ಯಾನ ● ಮೈಸೂರಿನ ಪ್ರವಾಸಿ ತಾಣಗಳಿಗೆ ಮತ್ತೊಂದು ಸುಂದರ ವನ ಸೇರ್ಪಡೆ







ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಸೆ.15–ಲಿಂಗಾಂಬುದಿ ಕೆರೆ ಆವರಣದಲ್ಲಿ 15 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಿರುವ ಬೊಟಾನಿಕಲ್ ಗಾರ್ಡನ್ ಸೆ.26ರಂದು ಉದ್ಘಾಟನೆಗೊಳ್ಳಲಿದೆ. ಇದರೊಂದಿಗೆ ಮೈಸೂರಲ್ಲಿ ಮತ್ತೊಂದು ಸುಂದರ ತಾಣ ಸೌಂದರ್ಯ ಪ್ರಿಯರಿಗೆ ಲಭ್ಯವಾಗಲಿದೆ.

ಅಳಿವಿನಂಚಿನಲ್ಲಿರುವ ಗಿಡ–ಮರಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೇಂದ್ರವಾಗಲಿರುವ ಬೊಟಾನಿಕಲ್ ಗಾರ್ಡನ್ (ಸಸ್ಯ ಶಾಸ್ತ್ರೀಯ ತೋಟ) ಲಿಂಗಾಂಬುದಿ ಕೆರೆ ಆವರಣದಲ್ಲಿ ಮೈದಳೆದಿದೆ. 2010–11ನೇ ಸಾಲಿನಿಂದ ಈ ಪ್ರಯತ್ನ ನಡೆದಿದ್ದು, 2012ನೇ ಸಾಲಿನಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಯಿಂದ ತೋಟಗಾರಿಕಾ ಇಲಾಖೆಗೆ ಉದ್ದೇಶಿತ ಭೂಮಿಯನ್ನು ಹಸ್ತಾಂತರಿಸಲಾಗಿತ್ತು. ಪಾಳು ಬಿದ್ದ ಸ್ಥಿತಿಯಲ್ಲಿದ್ದ, ಗಿಡ–ಗಂಟಿ, ಮುಳ್ಳಿನ ▶ 7ನೇ ಪುಟಕ್ಕೆ

ಲಿಂಗಾಂಬುದಿ ಕೆರೆ

ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಲಿಂಗಾಂಬುದಿ ಕೆರೆ ಅಭಿವೃದ್ಧಿಪಡಿಸಲಾಗಿದೆ. 1828ರಲ್ಲಿ ಮಹಾರಾಣಿ ಕೃಷ್ಣ ವಿಲಾಸ ಲಿಂಗಾಜಮ್ಮಣ್ಣಿ ಅವರ ನೆನಪಿಗಾಗಿ ಕೆರೆಯನ್ನು ನಿರ್ಮಿಸಿದರು. ಇದು 250 ಎಕರೆ ವಿಸ್ತೀರ್ಣ ಹೊಂದಿದ್ದು, ಇದರಲ್ಲಿ ಲಿಂಗಾಂಬುದಿ ಸರ್ವೆ ನಂ 23ರಲ್ಲಿ 51.3 ಎಕರೆ, ದಟ್ಟಗಳ್ಳಿ ಸರ್ವೆ ನಂ. 82ರಲ್ಲಿ 136.11 ಎಕರೆ ಮತ್ತು ಅಯ್ಯಜ್ಜಯ್ಯನಹುಂಡಿ ಸರ್ವೆ ನಂ.11 ರಲ್ಲಿ 28.23 ಎಕರೆ ಒಳಗೊಂಡಿದೆ. ಕೆರೆಯ 150 ಎಕರೆ ಪ್ರದೇಶ ನೀರಿನಿಂದ ಆವೃತವಾಗಿದ್ದರೆ, ಉಳಿದ 100 ಎಕರೆ ಪ್ರದೇಶವನ್ನು ಮೀಸಲು ಅರಣ್ಯ ಪ್ರದೇಶ ಎಂದು ಘೋಷಿಸಲಾಗಿದೆ

ವಿದೇಶಿ ಪಕ್ಷಿಗಳ ಆಗಮನ

ಗಾರ್ಡನ್ ಲಿಂಗಾಂಬುದಿ ಕೆರೆಗೆ ಹೊಂದಿಕೊಂಡಿದೆ. ಹಚ್ಚ ಹಸಿರಿನಿಂದ ಕೂಡಿರುವ ಕೆರೆ ಆವರಣ ಹವ್ಯಾಸಿಗಳಿಗೆ ಮತ್ತು ವೃತ್ತಿಪರ ಪಕ್ಷಿ ವೀಕ್ಷಕರಿಗೆ ಸುಂದರ ತಾಣವಾಗಿದೆ. ವಿದೇಶದ ನಾನಾ ಪಕ್ಷಿ ಪ್ರಭೇದಗಳು ಕೆರೆ ಆವರಣಕ್ಕೆ ಬರುತ್ತವೆ. ಕೆರೆಯಲ್ಲಿ ಮಂಗಟ್ಟೆ, ನವಿಲುಗಳು, ಸಣ್ಣಚಿತ್ರಪಕ್ಷಿ, ಎಪಿಎಫ್ಲಿ (ಬಿಳಿ ಮತ್ತು ಕಂದು ಬಣ್ಣದ ಮಾರ್ಫ್), ನೀಲಿ ಟಿಕೆಲ್ಸ್, ಐಬಿಸ್, ಬಾತುಕೋಳಿಗಳು, ನೀಲಿ ಕೆನ್ನೆಯ ಜೇನುನೊಣ ತಿನ್ನುವ ಪಕ್ಷಿಗಳು ಕಾಣಸಿಗುತ್ತವೆ. ಪ್ರವಾಸಿಗರಿಗೆ ವಿದೇಶಿ ಪಕ್ಷಿ ಪ್ರಭೇದಗಳು ಆಯ್ದ ಋತುಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ. ಉಳಿದ ದಿನಗಳಲ್ಲಿ ನಾವು ವರ್ಷವಿಡೀ ಸ್ಥಳೀಯ ಪಕ್ಷಿ ಪ್ರಭೇದಗಳನ್ನು ವೀಕ್ಷಿಸಬಹುದು. ತೋಟಗಾರಿಕೆ ಇಲಾಖೆಯು ಪಕ್ಷಿ ವೀಕ್ಷಕರು ಮತ್ತು ಪ್ರವಾಸಿಗರಿಗೆ ಅನುಕೂಲವಾಗುವಂತೆ 'ಬರ್ಡ್ಸ್ ವಾಚ್‌ಟವರ್' ನಿರ್ಮಿಸಲು ಯೋಜನೆ ರೂಪಿಸಿದೆ.

ಮೈಸೂರಿನ ಹೆಮ್ಮೆಯ ಪ್ರತೀಕ

ಕಳೆದ ಒಂದು ದಶಕದ ನಿರಂತರ ಪ್ರಯತ್ನದಿಂದ ಮೈಸೂರಿನ ಮೊದಲ ಬೊಟಾನಿಕಲ್ ಗಾರ್ಡನ್ ಸಿದ್ಧಗೊಂಡಿದೆ. 4 ಕೋಟಿ ರೂ. ವೆಚ್ಚದಲ್ಲಿ ಇದನ್ನು ನಿರ್ಮಿಸಲಾಗಿದೆ. ಇದು ಸೆ.26 ರಂದು ಉದ್ಘಾಟನೆಗೊಳ್ಳಲಿದೆ. ಪ್ರತಿದಿನ ಬೆಳಗ್ಗೆ 7 ರಿಂದ ಸಂಜೆ 7ರವರೆಗೆ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗುತ್ತದೆ.

– ರುದ್ರೇಶ್, ಉಪನಿರ್ದೇಶಕ, ತೋಟಗಾರಿಕಾ ಇಲಾಖೆ

ನಕ್ಕರೆ ಅದೇ ಸ್ವರ್ಗ

ಭಾವಿಪತಿ : (ಭಾವಿ ಪತ್ನಿಯೊಂದಿಗೆ ಪುಸ್ತಕ ಮಳಿಗೆಗೆ ತೆರಳಿ) ನಿಮ್ಮಲ್ಲಿ ಪತಿಯೇ ಮನೆ ಯಜಮಾನ ಎನ್ನುವ ಪುಸ್ತಕವಿದೆಯೇ?

ಸೇಲ್ಸ್‌ಮ್ಯಾನ್ : (ವ್ಯಂಗ್ಯವಾಗಿ ನಗುತ್ತ) : ಕಾಮಿಕ್ ಮತ್ತು ಕತೆ ಪುಸ್ತಕಗಳು ಮೊದಲನೇ ಮಹಡಿಯಲ್ಲಿವೆ!

ಮೈಸೂರು ಮಿತ್ರ

ಶುಕ್ರವಾರ, 16 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಗ್ರಾಹಕರಿಗೆ ಏನು ಬೇಕೆಂದು ಕೇಳಿ ಅದನ್ನು ಉತ್ಪಾದಿಸಲು ಹೊರಟರೆ ಸಮಯ ತಗಲುತ್ತದೆ. ಆ ಹೊತ್ತಿಗೆ ಗ್ರಾಹಕನ ಇಚ್ಛೆ ಬದಲಾಗಿರುತ್ತದೆ.– ಸ್ಟೀವ್‌ಜಾಬ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ದಾನವಿಲ್ಲದ ಮನೆ ದೊಡ್ಡದಾದರೇನು?

ನಿಮ್ಮ ಪತ್ರಗಳು

ಅರೇನಹಳ್ಳಿ ಗ್ರಾಮಕ್ಕೆ ಸುಸಜ್ಜಿತ ಗ್ರಂಥಾಲಯ ಕಲ್ಪಿಸಿ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಅರೇನಹಳ್ಳಿ ಗ್ರಾಮವು ಎಲ್ಲಾ ಸಮುದಾಯದವರನ್ನು ಹೊಂದಿರುವ ಹಾಗೇ ತಾಲೂಕಿನಲ್ಲೇ ಹಿಂದುಳಿದ, ಈಚೀಚೆಗೆ ಒಂದಷ್ಟು ಮೂಲ ಭೂತ ಅಗತ್ಯಗಳನ್ನು ಹೊಂದಿ ಅಭಿವೃದ್ಧಿಯ ಕಡೆಗೆ ಸಾಗುತ್ತಿರುವ ಹಳ್ಳಿಯಾಗಿದೆ. ಪಿರಿಯಾಪಟ್ಟಣ ಹಾಗೂ ಕೃಷ್ಣರಾಜನಗರ ತಾಲೂಕುಗಳಿಗೆ ತೆರಳುವ ಮುಖ್ಯ ರಸ್ತೆಯಲ್ಲಿರುವ ಈ ಅರೇನಹಳ್ಳಿ ಗ್ರಾಮಕ್ಕೆ ಒಂದು ಸುಸಜ್ಜಿತ ಗ್ರಂಥಾಲಯದ ಅಗತ್ಯವಿದೆ. ವಿದ್ಯಾವಂತ ರೈತರು, ಅಕ್ಷರಸ್ಥ ಮಹಿಳೆಯರು, ಗ್ರಾಮದ ಯುವಕರು ತಮಗೆ ಸಿಗುವ ಸಮಯವನ್ನು ಪೋಲು ಮಾಡುತ್ತಿರುವುದು ಬೇಸರದ ಸಂಗತಿ ಯಾಗಿದೆ. ಅದರ ಬದಲು ಓದಿಕೊಂಡು ಜ್ಞಾನ ಸಂಪಾದನೆ ಮಾಡಿಕೊಳ್ಳುವುದರ ಮುಖೇನ ಸದುಪಯೋಗಪಡಿಸಿಕೊಳ್ಳಲಿ ಎಂಬುದು ಎಲ್ಲರ ಅಭಿಪ್ರಾಯವಾಗಿದೆ.

ಈ ನಿಟ್ಟಿನಲ್ಲಿ ಊರಿನ ಮಾರಿಗುಡಿಯ ಪಕ್ಕದಲ್ಲಿ ಇರುವ ಈ ಹಿಂದೆ ಪ್ರಾಥಮಿಕ ಶಾಲೆಯಿದ್ದ ಜಾಗದ ಕಟ್ಟಡದಲ್ಲಿ ಗ್ರಂಥಾಲಯವನ್ನು ಸ್ಥಾಪಿಸಲು ಜಿಲ್ಲಾ ಗ್ರಂಥಾಲಯ ಇಲಾಖೆಯು ಪರಿಶೀಲಿಸಿ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳಲು ಮುಂದಾಗಬೇಕು.

ಈ ಚಿತ್ರದಲ್ಲಿ ಕಾಣುವಂತೆ ಮೊದಲು ಇಲ್ಲಿ ಶಾಲೆಯಿತ್ತು. ಈಗ ಈಶ್ವರ ದೇವಾಲಯದ ಪಕ್ಕದ ಸ್ಥಳಕ್ಕೆ ಶಾಲೆ ಉನ್ನತೀಕರಣವಾಗಿ ಸ್ಥಳಾಂತರಗೊಂಡಿದೆ. ಮೊದಲು ಶಾಲೆಯಿದ್ದ ಈ ಕಟ್ಟಡವು ಈಗ ಶಿಥಿಲಗೊಂಡಿದ್ದು ಇದನ್ನು ಸ್ಥಳೀಯ ಜನರು ಕೃಷಿ ಉಪಕರಣಗಳನ್ನು ಇಡಲು, ದನಕರುಗಳನ್ನು ಕಟ್ಟಲು ಬಳಸಿ ಒಂದು ರೀತಿಯಲ್ಲಿ ಪಾಳು ಕಟ್ಟಡವಾಗಿಯೇ ಬದಲಾಯಿಸಿದ್ದಾರೆ ಎನ್ನಬಹುದು. ಹಾಗಾಗಿ ಶಿಥಿಲವಾಗಿರುವ ಈ ಶಾಲಾ ಕಟ್ಟಡವನ್ನು ಗ್ರಂಥಾಲಯ ಕಟ್ಟಡವಾಗಿ ಪುನರ್ ನಿರ್ಮಾಣ ಮಾಡಿ ಅಲ್ಲಿ ಗ್ರಂಥಾಲಯವನ್ನು ಆರಂಭ ಮಾಡಿದರೆ ಬಹುಜನರಿಗೆ ಜ್ಞಾನವನ್ನು ಪಸರಿಸಲು ತುಂಬಾ ಅನುಕೂಲವಾಗುತ್ತದೆ ಅಲ್ಲವೇ...

ಈ ನಿಟ್ಟಿನಲ್ಲಿ ಸಂಬಂಧಿಸಿದ ಅಧಿಕಾರಿಗಳು ಈ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಗ್ರಾಮಸ್ಥರ ಮನವಿ.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ ತಾ.

ಕನ್ನಡ ಕಡೆಗಣಿಸುವವರಿಗೆ ತಕ್ಕ ಶಾಸ್ತಿ

ಮಾನ್ಯರೆ,

ಕನ್ನಡದಲ್ಲಿ ಚೆಕ್ ಬರೆದಿರುವುದನ್ನು ಅಮಾನ್ಯ ಮಾಡಿರುವುದನ್ನು ಖಂಡಿಸಿ ಇತ್ತೀಚೆಗೆ ಬ್ಯಾಂಕ್ ಖಾತೆದಾರರೊಬ್ಬರು ಗ್ರಾಹಕರ ವ್ಯಾಜ್ಯಗಳ ಆಯೋಗಕ್ಕೆ ದೂರು ಸಲ್ಲಿಸಿದ ಹೋರಾಟದ ಫಲದಿಂದ ಬ್ಯಾಂಕ್‌ಗೆ ದಂಡ ವಿಧಿಸುವುದರ ಮೂಲಕ ಜಯದ ನಗೆಯನ್ನು ಬೀರುವುದರೊಂದಿಗೆ ಕನ್ನಡ ಕಡೆಗಣಿಸುವ ಬ್ಯಾಂಕುಗಳಿಗೆ ಈ ತೀರ್ಪು ಎಚ್ಚರಿಕೆಯ ಗಂಟೆಯಾಗಿದೆ. ಬ್ಯಾಂಕ್‌ನ ತ್ರಿಭಾಷಾ ಸೂತ್ರದಂತೆ ಕನ್ನಡದಲ್ಲಿ ಮಾಹಿತಿಯನ್ನು ನೀಡಬೇಕು. ಅನೇಕ ಬ್ಯಾಂಕುಗಳಲ್ಲಿ ಇತರೆ ರಾಜ್ಯಗಳಿಂದ ಬಂದಿರುವ ಸಿಬ್ಬಂದಿ ವರ್ಗದವರಿಗೆ ಕನ್ನಡವೇ ಗೊತ್ತಿರುವುದಿಲ್ಲ. ಇದರಿಂದ ಗ್ರಾಮೀಣ ಪ್ರದೇಶದ ಜನರಿಗೆ ವ್ಯವಹರಿಸಲು ತುಂಬಾ ತೊಂದರೆಯಾಗುತ್ತಿದೆ. ಇವರಿಗೆ ಕರ್ನಾಟಕದಲ್ಲಿ ಉದ್ಯೋಗ ಮಾತ್ರ ಬೇಕು. ಕನ್ನಡ ಕಲಿಯುವುದಕ್ಕೆ ಮಾತ್ರ ಸಿಬ್ಬಂದಿಗಳಿಗೆ ತಾತ್ಸಾರ ಮನೋಭಾವವೇಕೆ? ಕನ್ನಡದ ಬಗ್ಗೆ ಇತರರು ಕೂಡ ಅಸಡ್ಡೆ ತೋರದೆ ಕನ್ನಡ ಅಭಿಮಾನವನ್ನು ಬೆಳೆಸಿಕೊಂಡು, ಪ್ರತಿನಿತ್ಯ ವ್ಯವಹಾರಗಳಲ್ಲಿ ಕನ್ನಡವನ್ನು ಬಳಸುವುದರ ಮೂಲಕ ಕನ್ನಡದ ಅಸ್ಮಿತೆಯನ್ನು ಉಳಿಸಿ ಬೆಳೆಸಲು ಎಲ್ಲರೂ ಕೈಜೋಡಿಸೋಣ. ಬೇರೆ ಬೇರೆ ದೇಶಗಳಲ್ಲಿ ನೆಲೆಸಿರುವ ಕನ್ನಡಿಗರು ಕನ್ನಡ ಭಾಷೆಗೆ ಪ್ರಾಮುಖ್ಯತೆಯನ್ನು ನೀಡಿರುವ ಅದೆಷ್ಟೋ ಉದಾಹರಣೆಗಳಿವೆ. ವಿಶ್ವಮಟ್ಟದಲ್ಲಿ ಕನ್ನಡ ಭಾಷೆಯನ್ನು ಪಸರಿಸಿದ್ದಾರೆ. ಆದರೆ ಕನ್ನಡ ನೆಲದಲ್ಲೇ ಕನ್ನಡ ಮಾಯವಾಗುತ್ತಿರುವುದು ದುಃಖದ ಸಂಗತಿಯಾಗಿದೆ. ಇಂತಹ ಸಂದರ್ಭದಲ್ಲಿ ಈ ತೀರ್ಪು ಆಮ್ಲಜನಕದಂತೆ ಕನ್ನಡಿಗರ ಪಾಲಿಗೆ ಮಹತ್ವದಾಗಿದ್ದು, ಕನ್ನಡ ಭಾಷೆಗೆ ಸಂದ ಜಯವಾಗಿದೆ. ಇನ್ನು ಮುಂದಾದರೂ ಕನ್ನಡಿಗರು, ಎಚ್ಚೆತ್ತುಕೊಂಡು ನಾಡಿನ ಭಾಷಾ ಏಳಿಗೆಗಾಗಿ ಟೊಂಕಕಟ್ಟಿ ನಿಲ್ಲೋಣವೆಂದು ಶಪಥ ಮಾಡೋಣ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಕಾರ್ಯನಿರ್ವಹಿಸದ ಸಾರ್ವಜನಿಕ ಆರೋಗ್ಯ ಕೇಂದ್ರ

ಮಾನ್ಯರೆ,

ಕಳೆದ ಎರಡು ತಿಂಗಳ ಹಿಂದೆ ಮೈಸೂರಿನ ಕುವೆಂಪುನಗರದ, ಎಂ–ಬ್ಲಾಕ್‌ನ ಹುಡ್ಕೊ ಬಡಾವಣೆಯಲ್ಲಿ ಸರ್ಕಾರದ ವತಿಯಿಂದ ಸಾರ್ವಜನಿಕ ಆರೋಗ್ಯ ಕೇಂದ್ರವನ್ನು ಮೇಯರ್ ಸೇರಿದಂತೆ ಹಲವು ಗಣ್ಯರು ಉದ್ಘಾಟಿಸಿದರು. ಆದರೆ ಇದುವರೆಗೂ ಈ ಆರೋಗ್ಯ ಕೇಂದ್ರದಲ್ಲಿ ವೈದ್ಯರು ಸೇರಿದಂತೆ ಯಾವುದೇ ಒಬ್ಬ ಸಿಬ್ಬಂದಿಯೂ ಕಾರ್ಯ ನಿರ್ವಹಿಸುತ್ತಿಲ್ಲ. ಇದನ್ನು ಯಾವ ಪುರುಷಾರ್ಥಕ್ಕೆ ಉದ್ಘಾಟಿಸಿದರೋ ಗೊತ್ತಿಲ್ಲ.ಈ ಹುಡ್ಕೋ ಬಡಾವಣೆಯಲ್ಲಿ ಕಡು– ಬಡವರೆ ಹೆಚ್ಚಾಗಿ ವಾಸ ಮಾಡುವುದರಿಂದ ಇವರಿಗೆ ಅನುಕೂಲವಾಗುವಂತೆ ಕೂಡಲೇ ವೈದ್ಯರು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಿ. ಮುಂದಿನ ದಿನಗಳಲ್ಲಿ ಕೇವಲ ಪ್ರಚಾರಕ್ಕಾಗಿ ಇಂತಹ ಉದ್ಘಾಟನೆಗಳನ್ನು ಮಾಡಬೇಡಿ.

–ಬೂಕನಕೆರೆ ವಿಜೇಂದ್ರ, ಮೈಸೂರು

ಮೈಸೂರಿನ ಫುಟ್‌ಪಾತ್ ನಾಯಿಗಳ ಶೌಚಾಲಯ!

ಮಾನ್ಯರೆ,

ನಾಯಿ ಒಂದು ಸಾಕುಪ್ರಾಣಿ, ನಾಯಿ ಸಾಕುವುದು ತಪ್ಪಲ್ಲ. ಆದರೆ ಸಾರ್ವಜನಿಕ ಸ್ಥಳಗಳಲ್ಲಿ ಗಲೀಜು ಮಾಡಿಸುವುದು ತಪ್ಪು. ಮೈಸೂರಿನಲ್ಲಿ ಪ್ರತಿದಿನ ಬೆಳಗ್ಗೆ ಅಥವಾ ಸಂಜೆ ನಾಯಿಯೊಂದಿಗೆ ವಾಕಿಂಗ್ ಮಾಡುವ ಜನರಿಗೆ ಈ ಮೂಲಕ ತಿಳಿಸುವುದೇನೆಂದರೆ ಭಾರತದಲ್ಲೇ ಸ್ವಚ್ಛ ನಗರಿ ಎಂದು ಹೆಸರಾಗಿರುವ ನಮ್ಮ ಮೈಸೂರಿನ ಫುಟ್‌ಪಾತ್ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಸಾಕುಪ್ರಾಣಿಗಳನ್ನು ಕರೆದುಕೊಂಡು ಬಂದು ಗಲೀಜು ಮಾಡಿಸಬೇಡಿ. ಪ್ರತಿನಿತ್ಯ ಫುಟ್‌ಪಾತ್, ಬಸ್ ಸ್ಟಾಂಡ್ ಅಥವಾ ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಸಾವಿರಾರು ಜನರು ಓಡಾಡುತ್ತಾರೆ. ನೋಡಿದವರಿಗೆ ಅಸಹ್ಯವಾಗುತ್ತದೆ. ದಯವಿಟ್ಟು ಮಹಾನಗರ ಪಾಲಿಕೆಯವರು ಈ ವಿಷಯದ ಬಗ್ಗೆ ಗಮನಹರಿಸಿ ಜಾಗೃತಿ ಮೂಡಿಸಬೇಕು ಎಂದು ಮನವಿ.

– ಮಹಾಂತೇಶ್, ಕಾಲೇಜು ವಿದ್ಯಾರ್ಥಿ, ಮೈಸೂರು



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಗುಣತ್ರಯವನ್ನು ದಾಟಬೇಕು

ಸತ್ತ್ವ, ರಜಸ್, ತಮಸ್ ಎಂಬ ಮೂರು ಗುಣಗಳಿಂದ ಜಗತ್ತು ಆವೃತವಾಗಿದೆ. ಸತ್ತ್ವಗುಣವು ನಿರ್ಮಲ ಸ್ವಭಾವದ್ದು, ಅದು ಮಾನವನನ್ನು ಜ್ಞಾನದ ಕಡೆಗೆ ಒಯ್ಯುತ್ತದೆ. ರಜೋ ಗುಣವು ಕ್ರಿಯಾಸ್ವಭಾವದ್ದು. ಅದು ಶುಭಾ ಶುಭ ಕರ್ಮಗಳಲ್ಲಿ ತೊಡಗಿಸುತ್ತದೆ. ತಮೋಗುಣವು ಕತ್ತಲೆಯ ಅಥವಾ ಅಜ್ಞಾನದ ಸ್ವಭಾವದ್ದು. ಅದು ಸೋಮಾರಿತನ, ಆಲಸ್ಯಗಳ ಕಡೆಗೆ ಮನುಷ್ಯನನ್ನು ತಳ್ಳುತ್ತದೆ ಎಂಬುದನ್ನು ನೋಡಿದ್ದೇವೆ. ಭಗವದ್ಗೀತೆಯ ಹದಿನಾಲ್ಕನೆಯ ಅಧ್ಯಾಯದಲ್ಲಿ ಈ ಬಗೆಗೆ ಹೆಚ್ಚು ಮಾಹಿತಿಯನ್ನು ಕೊಟ್ಟಿದ್ದಾರೆ.

ರಜಸ್ತಮಶ್ಚಾಭಿಭೂಯ ಸತ್ತ್ವಂ ಭವತಿ ಭಾರತ ।
ರಜಃ ಸತ್ತ್ವಂ ತಮಶ್ಚೈವ ತಮಃ ಸತ್ತ್ವಂ ರಜಸ್ತಥಾ ॥

ರಜೋ ಗುಣವನ್ನು ತಮೋ ಗುಣವನ್ನೂ ದಮನ ಮಾಡಿ ತಾನೇ ವಿಜೃಂಭಿಸಲು ಸತ್ತ್ವಗುಣವು ಪ್ರಯತ್ನಿಸುತ್ತದೆ. ಹಾಗೆಯೇ ರಜೋ ಗುಣವು ಸತ್ತ್ವ ಗುಣ ತಮೋ ಗುಣಗಳನ್ನು ಸೋಲಿಸಲು, ತಮೋ ಗುಣವು ಸತ್ತ್ವತಮೋ ಗುಣಗಳನ್ನು ಕೆಳಕ್ಕೆ ತಳ್ಳಿ ತಾನೇ ಮೆರೆಯಲು ಬಯಸುತ್ತದೆ.

ಇದು ಹೇಗೆಂದರೆ ಒಂದು ಭೂಮಿಯಲ್ಲಿ ಬೆಳೆದ ಮರಗಳಲ್ಲಿ ಒಂದೊಂದೂ ಭೂಮಿಯಲ್ಲಿರುವ ನೀರನ್ನೂ, ಸೂರ್ಯನ ಬಿಸಿಲನ್ನೂ ತಾನೇ ಪಡೆಯಲು ಪ್ರಯತ್ನಿಸುವುದನ್ನು ಕಾಣಬಹುದು. ಹಾಗೆ ಒಂದೊಂದು ಗುಣವೂ ಅತಿ ಹೆಚ್ಚು ವ್ಯಾಪ್ತಿಯನ್ನು ತಾನೇ ಪಡೆದುಕೊಳ್ಳಲು ಯತ್ನವನ್ನು ಮಾಡುವುದು ಸ್ವಾಭಾವಿಕ. ಮಾನವನ ಆಧ್ಯಾತ್ಮಿಕ ಪ್ರಗತಿಯ ದೃಷ್ಟಿಯಿಂದ ಸತ್ತ್ವಗುಣ ಬೆಳೆದರೆ ಒಳ್ಳೆಯದು. ಹಣ, ಅಧಿಕಾರ, ಪ್ರತಿಷ್ಠೆ ಮುಂತಾದುವುಗಳನ್ನು ಅಪೇಕ್ಷಿಸುವವರಿಗೆ ರಜೋಗುಣ ಅಪೇಕ್ಷಿತ. ತಮೋಗುಣ ಹೆಚ್ಚುವುದು ಯಾರಿಗೂ ಅಪೇಕ್ಷಿತವಲ್ಲ.

ಮರಣ ಕಾಲದಲ್ಲಿ ವ್ಯಕ್ತಿಯಲ್ಲಿ ಯಾವ ಗುಣ ಹೆಚ್ಚಾಗಿರುವುದೋ ಅದನ್ನು ಅನುಸರಿಸಿ ಆ ವ್ಯಕ್ತಿಯ ಮುಂದಿನ ಜನ್ಮವು ನಿರ್ಧಾರಿತವಾಗುತ್ತದೆ. ಇದನ್ನು ಎರಡು ಶ್ಲೋಕಗಳಲ್ಲಿ ಶ್ರೀ ಕೃಷ್ಣನು ತಿಳಿಸಿಕೊಟ್ಟಿದ್ದಾನೆ.

ಯದಾ ಸತ್ತ್ವೇ ಪ್ರವೃದ್ಧೇ ತು ಪ್ರಲಯಂ ಯಾತಿ ದೇಹಭೃತ್ ।
ತದೋತ್ತಮವಿದಾಂ ಲೋಕಾನ್ ಅಮಲಾನ್ ಪ್ರತಿಪದ್ಯತೇ ॥
(14.14–15)

ಸತ್ತ್ವಗುಣವು ಪ್ರಬಲವಾಗಿದ್ದಾಗ ಮರಣವನ್ನು ಹೊಂದುವ ಜೀವಿಯು ಉತ್ತಮ ಜ್ಞಾನವುಳ್ಳವರ ಪರಿಶುದ್ಧವಾದ ಲೋಕಗಳನ್ನು ಸೇರಿಕೊಳ್ಳುವನು. ರಜಸ್ಸು ಹೆಚ್ಚಾಗಿದ್ದಾಗ ಸಾಯುವ ಜೀವಿಯು ಕರ್ಮಗಳಲ್ಲಿ ಆಸಕ್ತರಾದವರ ಮನೆಗಳಲ್ಲಿ ಹುಟ್ಟುವನು. ತಮಸ್ಸು ಬೆಳೆದಿರುವಾಗ ಸಾಯುವ ವ್ಯಕ್ತಿ ವಿದ್ಯೆಯೂ ಜ್ಞಾನವೂ ಇಲ್ಲದ ಮೂಢರ ಮನೆಗಳಲ್ಲಿ ಹುಟ್ಟುವನು–ಎಂಬುದು ಈ ಶ್ಲೋಕಗಳ ತಾತ್ಪರ್ಯ.

ಹೀಗೆ ಹುಟ್ಟಿದವರು ಹಾಗೇ ಕರ್ಮಿಗಳೋ ದಡ್ಡರೋ ಆಗುವರೆಂಬ ನಿಯಮವಿಲ್ಲ. ಉತ್ತಮ ಜ್ಞಾನಿಗಳ, ತಪಸ್ವಿಗಳ ವಂಶದಲ್ಲಿ ಹುಟ್ಟಿದರೂ ದಡ್ಡರಾಗಿ, ಅಪರಾಧಿಗಳಾಗಿ, ಪಾಪಿಗಳಾಗಿ ಮುಂದೆ ತಮೋಗುಣವನ್ನೇ ಬೆಳೆಸಿಕೊಂಡವರೂ ಇದ್ದಾರೆ. ಕರ್ಮಿಗಳ ವಂಶದ ಸಂಜಾತರೂ ಮುಂದೆ ಸತ್ತ್ವಗುಣವನ್ನು ಹೆಚ್ಚಿಸಿಕೊಂಡು ವಿದ್ಯಾವಂತರೂ ಜ್ಞಾನಿಗಳೂ ಆದ ಉದಾಹರಣೆಗಳಿವೆ. ಹುಟ್ಟು ಯಾರ ಅಧೀನದಲ್ಲೂ ಇಲ್ಲ. ಪ್ರಯತ್ನ ನಮ್ಮ ಸ್ವಾಧೀನ. ಅದರಿಂದ ನಮ್ಮ ದಾರಿಯನ್ನು ನಿರ್ಮಿಸಿಕೊಳ್ಳುವ ಹಕ್ಕು ನಮ್ಮೆಲ್ಲರಿಗೂ ಇದೆ. ಹಾಗೆ ನಾವು ಆರಿಸಿಕೊಂಡ, ಪುಣ್ಯಕರ್ಮದ ಫಲ ಸಾತ್ತ್ವಿಕ ಗುಣ. ರಜಃ ಪ್ರೇರಿತವಾದ ಕರ್ಮ ದುಃಖಕ್ಕೆ ಕಾರಣ. ತಮಸ್ಸಿನಿಂದ ಮಾಡುವ ಕರ್ಮ ಅಜ್ಞಾನವೆಂಬ ಫಲವನ್ನು ಕೊಡುತ್ತದೆ. ಯಾವ ಕರ್ಮವನ್ನು, ಎಂದರೆ ಕೆಲಸವನ್ನು ಆರಿಸಿಕೊಳ್ಳುವ ಅವಕಾಶ ಪ್ರತಿಯೊಬ್ಬರಿಗೂ ಇದೆ.

ಸತ್ತ್ವಗುಣದಿಂದ ಜ್ಞಾನ, ರಜೋಗುಣದಿಂದ ಲೋಭ, ತಮಸ್ಸಿನಿಂದ ಮೋಹ ಉಂಟಾಗುವುದು ಎಲ್ಲರ ಬದುಕಿನಲ್ಲೂ ಇದ್ದದ್ದೇ. ಸತ್ತ್ವಗುಣದಿಂದ ಆಧ್ಯಾತ್ಮಿಕವಾಗಿ ಮೇಲೆ ಏರಬಹುದು. ರಜೋಗುಣದಿಂದ ಮಧ್ಯ ಲೋಕದಲ್ಲೇ ಇರಬಹುದು. ಆದರೆ ತಮೋಗುಣವನ್ನು ಹೆಚ್ಚಿಸಿಕೊಂಡರೆ ಕೆಳಗೆ ಇಳಿಯುವುದು ಖಂಡಿತ. ಅದು ಅಜ್ಞಾನದ ಸಮುದ್ರ. ಇಳಿಯುವುದು ಯಾವಾಗಲೂ ಸುಲಭ. ಮತ್ತೆ ಮೇಲೆ ಏರುವುದು ಮಾತ್ರ ಕಷ್ಟ.

ಈ ಲೋಕದಲ್ಲಿರುವ ಧನಧಾನ್ಯಾದಿ ಸಂಪತ್ತುಗಳು, ಅಧಿಕಾರ, ಪ್ರತಿಷ್ಠೆ ಮುಂತಾದ ಅಭಿಮಾನ ಕಾರಣಗಳು ಅನಿತ್ಯ, ಭಗವಂತನ ಅನುಗ್ರಹದಿಂದ ಲಭ್ಯವಾಗುವ ಮುಕ್ತಿಯೊಂದೇ ಶಾಶ್ವತ, ಅದೇ ಅಮೃತತ್ವ, ಅದನ್ನು ಪಡೆಯುವುದೇ ಮಾನವ ಜನ್ಮದ ಗುರಿ ಎಂದು ಜ್ಞಾನಿಗಳು ಹೇಳುತ್ತಾರೆ. ಆ ಗುರಿಯನ್ನು ತಲುಪಲು ಮೊದಲು ತಮಸ್ಸನ್ನೂ, ರಜಸ್ಸನ್ನೂ ಕರಗಿಸಿ ತೊಳೆದು ಸತ್ತ್ವವನ್ನು ಹೆಚ್ಚಿಸಿಕೊಳ್ಳಬೇಕು. ಆಮೇಲೆ ಆ ಸತ್ತ್ವವನ್ನೂ ತ್ಯಜಿಸಿ ಶುದ್ಧ ನಿರ್ಗುಣ ಸ್ವರೂಪನು ಆಗಬೇಕು. ಇದನ್ನು ಶ್ರೀಕೃಷ್ಣನು ಪ್ರತಿಪಾದಿಸಿದ್ದಾನೆ –

ಗುಣಾನೇತಾನ್ ಅತೀತ್ಯ ತ್ರೀನ್ ದೇಹೀ ದೇಹಸಮುದ್ಭವಾನ್ ।
ಜನ್ಮಮೃತ್ಯುಜರಾ ದುಃಖೈರ್ವಿಮುಕ್ತೋಽಮೃತಮಶ್ನುತೇ॥ (14.20)

ದೇಹದಲ್ಲಿ ಹುಟ್ಟಿರುವ ಈ ಸತ್ತ್ವ–ರಜಸ್–ತಮಸ್ ಎಂಬ ಮೂರು ಗುಣಗಳನ್ನು ದಾಟಿ ಹೋದ ಜೀವನು ಹುಟ್ಟು, ಸಾವು, ಮುಪ್ಪು ಎಂಬ ದುಃಖಗಳಿಂದ ವಿಮುಕ್ತನಾಗಿ ಅಮೃತತ್ವವನ್ನು ಪಡೆಯುವನು. ಇದನ್ನೇ ಭಗವಂತನು ಅರ್ಜುನನಿಗೆ ಮತ್ತೆ ಮತ್ತೆ ಒತ್ತಿ ಹೇಳಿರುವುದು. ಎರಡನೆಯ ಅಧ್ಯಾಯದಲ್ಲೂ ಅವನು ಹೇಳಿರುವ ಪ್ರಸಿದ್ಧವಾದ ಮಾತು–

'ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ' (2.45)

ವೇದಗಳೆಲ್ಲವೂ ಮೂರು ಗುಣಗಳ ಪ್ರಭಾವಕ್ಕೆ ಒಳಗಾಗಿರುವ ಜನರಿಗಾಗಿ ಇವೆ. ಅರ್ಜುನನೆ, ನೀನು ಈ ಮೂರು ಗುಣಗಳ ಪ್ರಭಾವಗಳಿಗೆ ನಿಲುಕದವನಾಗಬೇಕು– ಎಂಬುದು ಭಗವಂತನ ಉಪದೇಶ. ಆದರೆ ಹಾಗೆ ಆಗುವುದು ಹೇಗೆ? ನಾವು ನಿಸ್ತ್ರೈಗುಣ್ಯರಾಗಬೇಕು ಎಂಬ ಸಂಕಲ್ಪವನ್ನು ಮಾಡಿಸುತ್ತಿರುವುವೂ ಆ ಗುಣಗಳೇ. ಅವುಗಳನ್ನು ದಾಟಿ ಹೋಗುವುದು ಹೇಗೆ? ಇದೇ ಮುಖ್ಯ ಪ್ರಶ್ನೆ. ಇದನ್ನೇ ಅರ್ಜುನನೂ ಕೇಳಿದ್ದಾನೆ. ಅದಕ್ಕೆ ಶ್ರೀ ಕೃಷ್ಣನು ಹೇಳಿದ ಉತ್ತರ ಕೇಳುವುದಕ್ಕೆ ಸುಲಭವ, ಅನುಷ್ಠಾನಕ್ಕೆ ದುಷ್ಕರ.

ಸತ್ತ್ವಗುಣದಿಂದ ಉಂಟಾಗುವ ಪ್ರಕಾಶ (ಬೆಳಕು–ಜ್ಞಾನ), ರಜೋಗುಣದಿಂದ ಹುಟ್ಟುವ ಕಾರ್ಯಪ್ರವೃತ್ತಿ (ಇದನ್ನೋ ಅದನ್ನೋ ಮಾಡಲು ತೊಡಗುವ ಸ್ವಭಾವ, ತಮೋಗುಣದಿಂದ ಉಂಟಾಗುವ ಮೋಹ ಇತ್ಯಾದಿಗಳನ್ನು, ಅವು ತಾವೇ ಹುಟ್ಟಿದಾಗ ಜ್ಞಾನಿಯು ದ್ವೇಷಿಸುವುದಿಲ್ಲ. ಅವು ಹುಟ್ಟದಿದ್ದರೆ, ಅಥವಾ ಹುಟ್ಟಿ ದೂರವಾದರೆ, ಅವು ಬರಲಿ ಎಂದು ಬಯಸುವುದಿಲ್ಲ. ಗುಣಗಳ ಬಗೆಗೆ ಉದಾಸೀನನಾಗಿದ್ದು ಆ ಗುಣಗಳಿಂದ ಉಂಟಾಗುವ ಚಾಂಚಲ್ಯಕ್ಕೆ ಅವಕಾಶವನ್ನೇ ಕೊಡುವುದಿಲ್ಲ. ಆ ಜ್ಞಾನಿಗೆ ಸುಖವೂ ದುಃಖವೂ ಸಮಾನ. ಅವನ ದೃಷ್ಟಿಯಲ್ಲಿ ಮಣ್ಣಿನ ಹೆಂಟೆಯೂ ಚಿನ್ನದ ಗಟ್ಟಿಯೂ ಕಲ್ಲಿನ ಚೂರೂ ಸಮಾನ. ಪ್ರಿಯವನ್ನೂ, ಅಪ್ರಿಯವನ್ನೂ, ಸ್ತುತಿಯನ್ನೂ, ನಿಂದೆಯನ್ನೂ ಜ್ಞಾನಿಯೂ ಸಮಾನವಾಗಿ ಸ್ವೀಕರಿಸುತ್ತಾನೆ. ಅವನ ಬದುಕು ಮೂರು ಗುಣಗಳ ಪ್ರಭಾವವನ್ನೂ ಪ್ರಭಾವಲಯವನ್ನೂ ದಾಟಿ ಹೋಗುವ ದಾರಿಯಾಗಿದೆ. ಅಂತಹ ಜ್ಞಾನಿಯೇ ಗುಣಾತೀತ.

ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ।
ಸರ್ವಾರಂಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ॥ (14–25)

ಗುಣಗಳಿಗೆ ಅತೀತನಾಗಿ ಇರಲು ಅಪೇಕ್ಷಿಸುವವನು ಸಮ್ಮಾನವಾದಾಗ, ಅವಮಾನವಾದಾಗ ಸಮಾನವಾಗಿರುತ್ತಾನೆ. ಸಮ್ಮಾನದಿಂದ ಹಿಗ್ಗುವುದಿಲ್ಲ, ಅವಮಾನವಾದಾಗ ಕುಗ್ಗುವುದಿಲ್ಲ. ಅವನಿಗೆ ಮಿತ್ರರು, ಶತ್ರುಗಳು ಎಂಬ ಭೇದಭಾವನೆ ಎಂದೂ ಇರುವುದಿಲ್ಲ. ಸ್ವಾರ್ಥದಿಂದ ಆ ಜ್ಞಾನಿ ಯಾವ ಸಂಕಲ್ಪವನ್ನೂ ಮಾಡನು. ಅವನೇ ಗುಣಾತೀತ.

ಶ್ರೀ ಕೃಷ್ಣನ ಇನ್ನೊಂದು ನುಡಿ –

ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ।
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥
(14–26)

ಭಗವಂತನನ್ನು ವ್ಯಭಿಚಾರ ಸ್ಪರ್ಶವಿಲ್ಲದ ಭಕ್ತಿಯೋಗದಿಂದ ಯಾವನು ಪೂಜಿಸುವನೋ ಅವನು ಈ ಮೂರು ಗುಣಗಳ ಬೇಲಿಯನ್ನು ದಾಟಿ ಹೋಗಿ ಬ್ರಹ್ಮತ್ವವನ್ನು ಪಡೆದುಕೊಳ್ಳಲು ಅರ್ಹನಾಗುವುದು ದೃಢ.

ಹೀಗೆ ಶ್ರೀ ಕೃಷ್ಣನು ಸತ್ತ್ವ–ರಜಸ್–ತಮಸ್ ಮೂರು ಗುಣಗಳ ಸ್ವರೂಪವನ್ನೂ ಅವುಗಳನ್ನು ದಾಟಿ ಹೋಗುವ ವಿಧಾನವನ್ನೂ ವಿವರಿಸಿದ್ದಾನೆ. ಭಕ್ತಿಯೋಗ ಎಂಬ ಶಬ್ದವು ಇಲ್ಲಿ ಬಂದಿರುವುದು ವಿಶೇಷ. ನಾವು ಭಕ್ತಿಯೋಗವೆಂದು ಕರೆಯುವ ಹನ್ನೆರಡನೆಯ ಅಧ್ಯಾಯದಲ್ಲಿ ಭಕ್ತಿಯೋಗ ಎಂಬ ಶಬ್ದವಿಲ್ಲ. ಹದಿನಾಲ್ಕನೆಯ ಅಧ್ಯಾಯವನ್ನು ಗುಣತ್ರಯ ವಿಭಾಗಯೋಗ ಎಂದು ಕರೆದಿದ್ದಾರೆ.

ಯಾವುದೇ ತನಿಖೆ ಎದುರಿಸಲು ನಾನು ಸಿದ್ಧ

● ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸವಾಲು ● ಇಂಧನ ಸಚಿವರಾಗಿದ್ದ ವೇಳೆಯ ದಾಖಲೆ ಸಂಗ್ರಹಕ್ಕೆ ವ್ಯಂಗ್ಯ

ಮೈಸೂರು,ಸೆ.15(ಆರ್‌ಕೆ)–ನಾನು ಯಾವುದೇ ತನಿಖೆ ಎದುರಿಸಲು ಸಿದ್ಧನಿದ್ದೇನೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸವಾಲು ಹಾಕಿದ್ದಾರೆ.



ಭಾರತ ಜೋಡೋ ಪಾದ ಯಾತ್ರೆ ಕೈಗೊಂಡಿರುವ ರಾಹುಲ್ ಗಾಂಧಿ ಅವರು ಅ.2ರಂದು ನಂಜನಗೂಡು ತಾಲೂಕು, ಬದನವಾಳು ಗ್ರಾಮಕ್ಕೆ ಆಗಮಿಸುವ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆಗೆಂದು ಆಗಮಿಸಿದ್ದ ಡಿಕೆಶಿ, ಮೈಸೂರಿನಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು.

ರಾಜ್ಯದಲ್ಲಿ ನಾನು ಇಂಧನ ಸಚಿವನಾಗಿದ್ದ ಅವಧಿಯ ದಾಖಲೆಗಳನ್ನು ಕೊಡಿ ಎಂದು ಇಂಧನ ಇಲಾಖೆ ಅಧಿಕಾರಿಗಳಿಗೆ ಒತ್ತಡ ಹೇರುತ್ತಿದ್ದಾರೆ ಎಂದು ನನಗೆ ದೂರವಾಣಿ ಮೂಲಕ ಹೇಳುತ್ತಿದ್ದಾರೆ. ಯಾವುದೇ ದಾಖಲೆ ಕೇಳಿದರೂ ಕೊಡಿ ಎಂದು ಹೇಳಿದ್ದೇನೆ. ದಾಖಲೆ ಅಷ್ಟೇ ಅಲ್ಲ, ತಪ್ಪು ಮಾಡಿದ್ದರೆ ನಾನೇ ಹಗ್ಗವನ್ನೂ ಕಳುಹಿಸುತ್ತೇನೆ ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್ ಪಕ್ಷ ಹಾಗೂ ನನ್ನನ್ನು ತನಿಖೆ ಹೆಸರಲ್ಲಿ ಬಿಜೆಪಿ ಹೆದರಿಸುತ್ತಿದೆ. ನಾವು ಹೆದರುವ ಪ್ರಶ್ನೆಯೇ ಇಲ್ಲ. ಯಾವ ತನಿಖೆಯನ್ನಾದರೂ ಮಾಡಲಿ, ಎದುರಿಸಲು ಸಿದ್ಧರಿದ್ದೇವೆ. ಕಾಂಗ್ರೆಸ್ ಆಡಳಿತಾವಧಿಯ ಕಾರ್ಯಕ್ರಮ ಸಮಗ್ರ ತನಿಖೆ ನಡೆಸುವುದಾಗಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಬೇಕಿದ್ದರೆ ಅವರು ಚಡ್ಡಿ, ಪ್ಯಾಂಟ್, ಹಾಸಿಗೆ, ಹೊಟ್ಟೆ ಎಲ್ಲದರ ತನಿಖೆ ಮಾಡಿಸಲಿ. ಎಲ್ಲದಕ್ಕೂ ನಾವು ಸಿದ್ಧರಿದ್ದೇವೆ ಎಂದ ಡಿ.ಕೆ.ಶಿವಕುಮಾರ್, ತನಿಖೆ ನಡೆಸಲು ನಿಮಗೆ ಮೂರೂವರೆ ವರ್ಷ ಬೇಕಿತ್ತಾ ಎಂದು ಪ್ರಶ್ನಿಸಿದರು.

ನಾವು ಯಾವ ದಾಖಲೆಗಳನ್ನೂ ಮುಚ್ಚಿಟ್ಟಿಲ್ಲ. ಬೇಕಿದ್ದರೆ ಬುಲ್ಡೋಜರ್ ತರಿಸಲಿ, ನೆಲ ಅಗೆದು ಶೋಧ ಮಾಡಲಿ. ನಮ್ಮದೇನೂ ಅಭ್ಯಂತರವಿಲ್ಲ. ಬಿಜೆಪಿಯವರು ತಮ್ಮ ತಪ್ಪು ಮುಚ್ಚಿಕೊಳ್ಳಲು ಈ ರೀತಿ ಬೇರೆಯವರನ್ನು ಬೆದರಿಸುತ್ತಿದ್ದಾರೆ. ಅದಕ್ಕೆಲ್ಲಾ ನಾವು ಬಗ್ಗುವುದಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.


ಅಲ್ಪಸಂಖ್ಯಾತರಿಗೆ ಭಯ ಹುಟ್ಟಿಸಲು ಸರ್ಕಾರ ಮತಾಂತರ ನಿಷೇಧ ಕಾಯ್ದೆಯನ್ನು ವಿಧಾನಪರಿಷತ್‌ನಲ್ಲಿ ಮಂಡಿಸುತ್ತಿದೆ. ಭಾವನಾತ್ಮಕ ವಿಚಾರಗಳನ್ನು ಕೆರಳಿಸಿ, ದೇಶ ಮತ್ತು ರಾಜ್ಯವನ್ನು ವಿಭಜಿಸಲು ಬಿಜೆಪಿ ಮುಂದಾಗಿದೆ. ಜಾತಿ, ಧರ್ಮ ಒಡೆಯುವ ಹುನ್ನಾರ ಇದಾಗಿದ್ದು, ಜನರಿಗೆ ಅವರ ಆಟ ಗೊತ್ತಾಗಿದೆ ಎಂದರು.

ಸೆಪ್ಟೆಂಬರ್ 30ಕ್ಕೆ ಭಾರತ್ ಜೋಡೋ ಯಾತ್ರೆ ಕರ್ನಾಟಕ ತಲುಪಲಿದ್ದು, ಆಸಕ್ತಿ ಇರುವವರು ಯಾತ್ರೆಯಲ್ಲಿ ಪಾಲ್ಗೊಳ್ಳಬಹುದು. ಆನ್‌ಲೈನ್ ಮೂಲಕವೂ ನೋಂದಣಿ ಮಾಡಿಸುತ್ತಿದ್ದು, ಪಕ್ಷಾತೀತವಾಗಿ ನಾವು ಎಲ್ಲರಿಗೂ ಮುಕ್ತ ಅವಕಾಶ ನೀಡಿದ್ದೇವೆ. ಸಾಮರಸ್ಯ ಮೂಡಿಸಿ ದೇಶದಲ್ಲಿ ಶಾಂತಿ ಕಾಪಾಡುವುದು, ನಿರುದ್ಯೋಗ ಸಮಸ್ಯೆ ನಿವಾರಣೆ, ಅಗತ್ಯ ವಸ್ತುಗಳ ಬೆಲೆ ಏರಿಕೆ, ಭ್ರಷ್ಟಾಚಾರ ವಿರುದ್ಧ ಧನಿ ಎತ್ತುವುದು ರೈತರು, ಕಾರ್ಮಿಕರ ಬದುಕು ಸುಧಾರಣೆ ಮಾಡುವ ನಿಟ್ಟಿನಲ್ಲಿ ಈ ಯಾತ್ರೆ ಮಾಡುತ್ತಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ಇದೇ ಸಂದರ್ಭ ತಿಳಿಸಿದರು.

ಇದು ಭಾರತ ಐಕ್ಯತಾ ಯಾತ್ರೆಯಾಗಿದ್ದು, ರಾಜ್ಯ ಮತ್ತು ರಾಷ್ಟ್ರದ ಸಮಸ್ಯೆ ಆಲಿಸಲಿದ್ದು, ಯುವಕರು, ಮಹಿಳೆಯರು, ಬುಡಕಟ್ಟು ಜನರು, ರೈತರು, ಕಾರ್ಮಿಕರ ಸಮಸ್ಯೆ ಆಲಿಸಲು ಸಂವಾದ ನಡೆಸಲಿರುವ ರಾಹುಲ್ ಗಾಂಧಿ ಅವರು, ಬಳ್ಳಾರಿಯಲ್ಲಿ ಬೃಹತ್ ಸಮಾವೇಶ ನಡೆಸುವರು. ಬೇರೆಯವರು ಯಾತ್ರೆ ಬಗ್ಗೆ ಸಾವಿರ ಟೀಕೆ ಮಾಡಬಹುದು. ಎಲ್ಲಿ ಶ್ರಮ ಇದೆಯೋ ಅಲ್ಲಿ ಫಲವಿದೆ. ಎಲ್ಲಿ ಭಕ್ತಿ ಇದೆಯೋ ಅಲ್ಲಿ ಭಗವಂತ ಇದ್ದಾನೆ ಎಂದು ಡಿಕೆಶಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹೊಸ ಪ್ರಥಮ ದರ್ಜೆ ಕಾಲೇಜು ಆರಂಭಿಸಲ್ಲ

ಬೆಂಗಳೂರು, ಸೆ.15(ಕೆಎಂಶಿ)– ರಾಜ್ಯದಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವುದಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ವಿಧಾನಸಭೆಗಿಂದು ತಿಳಿಸಿದರು.



ಪ್ರಶ್ನೋತ್ತರ ಅವಧಿಯಲ್ಲಿ ಕೆ.ವೈ.ನಂಜೇಗೌಡರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ 440 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು, ಈಗಿರುವ ಕಾಲೇಜುಗಳ ಗುಣಮಟ್ಟ ಹೆಚ್ಚಳ ಹಾಗೂ ಸುಧಾರಣೆಗೆ ಆದ್ಯತೆ ನೀಡಲಾಗುವುದು ಎಂದರು. ಶೇ.75ರಷ್ಟು ಕಾಲೇಜುಗಳಲ್ಲಿ 1500ಕ್ಕಿಂತ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದೆ. ಕೆಲವು ಕಾಲೇಜುಗಳಲ್ಲಿ ಸೌಲಭ್ಯದ ಕೊರತೆಯಿದೆ. 150 ಸಂಸ್ಥೆಗಳು ಮಾತ್ರ ಮಾನ್ಯತೆ ಪಡೆದಿವೆ. ಹೀಗಾಗಿ ಮೂಲ ಸೌಕರ್ಯ ಹೆಚ್ಚಿಸುವುದು ಮತ್ತು ಗುಣಮಟ್ಟ ಹೆಚ್ಚಳಕ್ಕೆ ಆದ್ಯತೆ ನೀಡಲಾಗುವುದು ಎಂದರು.

ಪ್ರಧಾನಿ ನರೇಂದ್ರ ಮೋದಿ ಜನ್ಮದಿನದ ಹಿನ್ನೆಲೆಯಲ್ಲಿ ನಾಳೆಯಿಂದ ಮೈಸೂರು ಕೆ.ಆರ್.ಕ್ಷೇತ್ರದಲ್ಲಿ ಮೋದಿ ಯುಗ ಉತ್ಸವ–2022

● ಅರ್ಹ ಫಲಾನುಭವಿಗಳಿಗೆ ವಿವಿಧ ಯೋಜನೆ ಫಲ ಸಮರ್ಪಣೆ ● ಮಾಜಿ ಸಿಎಂ ಎಸ್.ಎಂ.ಕೃಷ್ಣರಿಂದ ಚಾಲನೆ

ಮೈಸೂರು, ಸೆ.15(ಎಂಟಿವೈ)– ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಸೆ. 17ರಿಂದ 25ರವರೆಗೆ 'ಮೋದಿ ಯುಗ ಉತ್ಸವ–2022' ಆಯೋಜಿಸಲಾಗಿದ್ದು, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರ, ನಗರಪಾಲಿಕೆ ಮತ್ತು ವಿವಿಧ ಇಲಾಖೆಯ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಒದಗಿಸುವುದರೊಂದಿಗೆ ಕೆಲವು ಯೋಜನೆಗಳ ಸಮರ್ಪಕವಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ 'ಮೋದಿ ಯುಗ್ ಉತ್ಸವ್ ಸೇ ಅಂತ್ಯೋದಯ ತಕ್, ಅಮೃತ್ ಕಾಲ್ ಸೇ ಶತಮಾನ್ ತಕ್, ತಾಯಿಯ ಗರ್ಭದಿಂದ ಭೂ ಗರ್ಭದವರೆಗೆ ನಮ್ಮ ಸಂಕಲ್ಪ' ಶೀರ್ಷಿಕೆಯಡಿ 9 ದಿನಗಳವರೆಗೆ ವಿದ್ಯಾರಣ್ಯಪುರಂನ ಶ್ರೀ ರಾಮಲಿಂಗೇಶ್ವರ ಉದ್ಯಾನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಸೆ.25ರವರೆಗೆ ಕಾರ್ಯಕ್ರಮ ರೂಪಿಸಲಾಗಿದೆ. ಆದರೆ ಅ.2ರವರೆಗೂ ವಿಸ್ತರಿಸಲಾಗಿದೆ ಎಂದರು.

ಸೆ.17ರಂದು ಬೆಳಗ್ಗೆ 11 ಗಂಟೆಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಇಂಧನ ಸಚಿವ ವಿ.ಸುನೀಲ್‌ಕುಮಾರ್, ಗಣಿ ಮತ್ತು ಭೂ ವಿಜ್ಞಾನ ಸಚಿವ ಹಾಲಪ್ಪ ಬಸಪ್ಪ ಆಚಾರ್, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸಚ್ಚಿದಾನಂದಮೂರ್ತಿ ಭಾಗವಹಿಸಲಿದ್ದಾರೆ. ಅಂದು ಕ್ಷೇತ್ರದಲ್ಲಿರುವ 10,000 ಮಹಿಳೆಯರಿಗೆ ಆರ್ಥಿಕ ಶಕ್ತಿ ಹೆಚ್ಚಿಸುವ ದೃಷ್ಟಿಯಿಂದ ಮಹಿಳಾ ಮಾರುಕಟ್ಟೆಯನ್ನು ಪ್ರಾರಂಭಿಸಲು ಚಾಲನೆ ನೀಡಲಾಗುತ್ತದೆ. ದೊಡ್ಡ ಮಟ್ಟದಲ್ಲಿ ರಕ್ತದಾನ ಶಿಬಿರವನ್ನೂ ಹಮ್ಮಿಕೊಳ್ಳಲಾಗಿದೆ. ಸೆ.25ರವರೆಗೆ ಪ್ರತಿನಿತ್ಯ ಮಕ್ಕಳು, ಹಿರಿಯರು, ಯುವಕ ಯುವತಿಯರಿಗೆ ಅನುಕೂಲವಾಗುವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು. ಸೆ.25 ರಂದು ಪಂಡಿತ್ ದೀನ್ ದಯಾಳ ಉಪಾಧ್ಯಾಯರ ಅಂತ್ಯೋದಯ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಕ್ಷೇತ್ರದ 472 ಕಿ.ಮೀ. ರಸ್ತೆಯ ಅಭಿವೃದ್ಧಿ ಕಾರ್ಯ ಪ್ರಾರಂಭವಾಗಿದ್ದು, 200 ಕಿ.ಮೀ. ಪೂರ್ಣಗೊಂಡಿದೆ. ಡಿಸೆಂಬರ್ ತಿಂಗಳ ಒಳಗೆ ಉಳಿದ ಎಲ್ಲ ರಸ್ತೆ ಕಾಮಗಾರಿಗಳು ಪೂರ್ಣಗೊಳ್ಳಲಿವೆ. 120 ಪಾರ್ಕ್‌ಗಳು ವಿಷಯಾಧಾರಿತ ಅಭಿವೃದ್ಧಿ ಕಾರ್ಯ ಪ್ರಾರಂಭವಾಗಿದೆ. ಎಲ್ಲ ಸಮುದಾಯದ ಒಟ್ಟು 11 ಸ್ಮಶಾನಗಳ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಕೆ.ಆರ್ ಕ್ಷೇತ್ರವನ್ನು ಆರೋಗ್ಯವಂತ ಕ್ಷೇತ್ರವನ್ನಾಗಿ ಮಾಡಲು ಈಗಾಗಲೇ ಸಾರ್ವಜನಿಕರ ಮನೆಗಳಲ್ಲಿಯೇ ಆರೋಗ್ಯ ತಪಾಸಣಾ ಕಾರ್ಯ ಮುಗಿದಿದ್ದು, ಶೇ.20ರಷ್ಟು ಸಕ್ಕರೆ ಕಾಯಿಲೆ, ಶೇ.16ರಷ್ಟು ರಕ್ತದೊತ್ತಡ ಸಮಸ್ಯೆ ಇರುವುದು ಕಂಡುಬಂದಿದೆ. ಜನರ ಆರೋಗ್ಯವನ್ನು ಗುಣಪಡಿಸುವುದರೊಂದಿಗೆ ರೋಗ ಬರದಂತೆ ತಡೆಯಲಾಗುತ್ತದೆ. ಈ ಸಂಬಂಧ ಅಲೋಪತಿ, ಆಯುರ್ವೇದ, ಯೋಗ, ನ್ಯಾಚುರೋಪತಿ ಜೀವನಶೈಲಿಯ ಮೂಲಕ ಆರೋಗ್ಯವಂತ ಮೈಸೂರು ರೂಪಿಸಲು 'ಹೆಲ್ತಿ ಮೈಸೂರು' ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತದೆ ಎಂದರು.

ಮಹಿಳಾ ಸಬಲೀಕರಣ ನಮ್ಮ ಉದ್ದೇಶವಾಗಿದೆ. ಎಂಎಂಆರ್ ಮತ್ತು ಐಎಂಆರ್ ಪ್ರಕರಣವನ್ನು ಕ್ಷೇತ್ರದಲ್ಲಿ 1 ವರ್ಷದ ಅವಧಿಯಲ್ಲಿ ಶೂನ್ಯಕ್ಕೆ ತರುವುದು ನಮ್ಮ ಗುರಿಯಾಗಿದೆ. ಈ ಸಂಬಂಧ ನಾನಾ ಯೋಜನೆ ರೂಪಿಸಲಾಗುತ್ತದೆ. ಯುವಕ, ಯುವತಿಯರಿಗೆ ಉದ್ಯೋಗ ಸೃಷ್ಟಿ, ಉದ್ಯೋಗ ಮೇಳ, ಸ್ವಂತ ಉದ್ಯೋಗಕ್ಕೆ ಬೇಕಾದ ಅನೇಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುತ್ತದೆ. ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯ ಮೂಲಕವಾಗಿ ದೇಶಕ್ಕೆ ಮಾದರಿ ಮಾಡುವ ಹಲವು ಯೋಜನೆಗಳ ಅನುಷ್ಠಾನಕ್ಕೆ ತರಲಾಗುತ್ತದೆ ಎಂದು ಹೇಳಿದರು.

> 'ಸರ್ವರಿಗೂ ಸೂರು' ಎನ್ನುವ ಪ್ರಧಾನಮಂತ್ರಿಗಳ ಕನಸನ್ನು ನನಸು ಮಾಡುವ ಯೋಜನೆಯಡಿ ಈಗಾಗಲೇ 2,212 ಮನೆಗಳ ಮಂಜೂರಾತಿ ನೀಡಲಾಗಿದ್ದು, 2,350 ಮನೆಗಳ ಮಂಜೂರಾತಿಯನ್ನು ನೀಡುವುದಲ್ಲದೆ, ಡಿಸೆಂಬರ್ ಅಂತ್ಯದ ಒಳಗೆ ಉಳಿದ ಎಲ್ಲ ಅರ್ಹ ಫಲಾನುಭವಿಗಳಿಗೆ ಮನೆ ನೀಡುವ ಯೋಜನೆಗಳಿಗೆ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಪ್ರತಿಯೊಬ್ಬರೂ ಗೌರವಾನ್ವಿತವಾಗಿ ವೃತ್ತಿ ಮಾಡಲು ಕೌಶಲ ಮತ್ತು ಹಣಕಾಸು ನೆರವು ನೀಡುವ ಯೋಜನೆಗಳನ್ನು ಕೇಂದ್ರದ ಮತ್ತು ರಾಜ್ಯದ ಯೋಜನೆಗಳನ್ನು ಬ್ಯಾಂಕ್‌ಗಳ ಮೂಲಕ ಚಾಲನೆ ನೀಡಲಾಗುತ್ತಿದೆ. –ಎಸ್.ಎ.ರಾಮದಾಸ್

ಸಂಸದ ಪ್ರತಾಪ ಸಿಂಹ ಮಾತನಾಡಿ, ದೇಶದ ಪ್ರಗತಿಗಾಗಿ ಪ್ರಧಾನಿ ಮೋದಿ ಅವರು ಶ್ರಮಿಸುತ್ತಿದ್ದಾರೆ. ಅವರ ಜನ್ಮದಿನದ ಹಿನ್ನೆಲೆಯಲ್ಲಿ ದೇಶದಾದ್ಯಂತ ವಿವಿಧ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅದೇ ಮಾದರಿಯಲ್ಲಿ ಕೆ.ಆರ್.ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಅವರು ಹಲವು ಕಾರ್ಯಕ್ರಮ ಆಯೋಜಿಸಿದ್ದಾರೆ. ಅದರ ಹೊರತಾಗಿಯೂ ವಿವಿಧ ಕ್ಷೇತ್ರಗಳಲ್ಲೂ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ಗಿರಿಧರ್, ವಾಣೀಶ್ ಕುಮಾರ್, ಸೋಮಸುಂದರ್, ಮುಖಂಡರಾದ ಅಚ್ಯುತ ರಾವ್, ನಂದಾ, ವಿನೋದ್, ವಡಿವೇಲು ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪಡಿತರ ಅಂಗಡಿಗಳಲ್ಲಿ ಸರ್ವರ್ ಸಮಸ್ಯೆ ಆಹಾರ ಧಾನ್ಯ ವಿತರಣೆಯಲ್ಲಿ ವ್ಯತ್ಯಯ

ಫಲಾನುಭವಿಗಳ ನಿತ್ಯ ಅಲೆದಾಟ ಮಾಮೂಲು...



ಮೈಸೂರು,ಸೆ.15–ತಾಂತ್ರಿಕ ಸಮಸ್ಯೆಯಿಂದ ನ್ಯಾಯ ಬೆಲೆ ಅಂಗಡಿ ಪಡಿತರ ವಿತರಣೆಯಲ್ಲಿ ವ್ಯತ್ಯಯವುಂಟಾಗಿದ್ದು, ಫಲಾನುಭವಿಗಳು ಸಂಕಷ್ಟ ಎದುರಿಸುವಂತಾಗಿದೆ.

ಸರ್ವರ್ ಸಮಸ್ಯೆಯಿಂದ ಎಲೆಕ್ಟ್ರಾನಿಕ್ ಪಾಯಿಂಟ್ ಆಫ್ ಸೇಲ್(ಇ–ಪಿಒಎಸ್) ಮೂಲಕ ವಹಿವಾಟು ಸಾಧ್ಯವಾಗದ ಕಾರಣ ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್)ಗೆ ಅಡ್ಡಿಯಾಗಿದೆ. ಪರಿಣಾಮ ಫಲಾನುಭವಿಗಳು ಪಡಿತರ ಕೇಂದ್ರಗಳ ಮುಂದೆ ತಾಸುಗಟ್ಟಲೆ ಕಾದು ಆಹಾರ ಧಾನ್ಯಗಳು ಸಿಗದೆ ಬರಿಗೈಯ್ಯಲ್ಲಿ ವಾಪಸ್ಸಾಗುತ್ತಿದ್ದಾರೆ.

ಈ ಅವ್ಯವಸ್ಥೆಗೆ ನಜರ್‌ಬಾದ್ ವ್ಯಾಪ್ತಿಯ ಸಿದ್ಧಾರ್ಥ ನಗರದಲ್ಲಿರುವ 'ಸಿದ್ದಾರ್ಥನಗರ ವಿವಿಧೋದ್ದೇಶ ಸಹಕಾರ ಸಂಘ'ದ ಮೂಲಕ ನಡೆಸಲಾಗುತ್ತಿರುವ ಪಡಿತರ ವಿತರಣಾ ಕೇಂದ್ರ ಜ್ವಲಂತ ಸಾಕ್ಷಿಯಾಗಿದೆ. ಇಲ್ಲಿ ಸರ್ವರ್ ಸಮಸ್ಯೆ ಸಾಮಾನ್ಯ ಎಂಬಂತಾಗಿದೆ. ಫಲಾನುಭವಿಗಳು ಗಂಟೆಗಳ ಕಾಲ ಕಾದು ನಿಲ್ಲುವುದು ನಂತರ ಕೇಂದ್ರದ ನಿರ್ವಾಹಕ ಹೇಳುವ 'ಸರ್ವರ್ ಡೌನ್ ಆಗಿದೆ, ಆಮೇಲೆ ಬನ್ನಿ' ಎಂಬ ಸಿದ್ಧ ಉತ್ತರವನ್ನು ನಂಬಿ ಅನಿವಾರ್ಯವಾಗಿ ಮನೆಗೆ ವಾಪಸ್ಸಾಗುವುದು ಆಗಾಗ್ಗೆ ನಡೆಯುತ್ತಿರುತ್ತದೆ. ಇದರಿಂದ ಈ ಕೇಂದ್ರ ವ್ಯಾಪ್ತಿಗೆ ಬರುವ ಪಡಿತರದಾರರು ಅತೀವವಾಗಿ ರೋಸಿ ಹೋಗಿದ್ದಾರೆ. ಕೆಲಸ ಬಿಟ್ಟು ದಿನವಿಡೀ ನಿಂತರೂ ಪಡಿತರ ಸಿಗದಿದ್ದರೆ ಆ ಬಡವರಿಗಾಗುವ ನೋವು, ತೊಂದರೆ ಅವರಿಗಷ್ಟೇ ಗೊತ್ತು ಎಂದು ನೊಂದವರು ಅಲವತ್ತುಕೊಂಡಿದ್ದಾರೆ. ಸರ್ವರ್ ಸಮಸ್ಯೆ ಎಂದು ಹೇಳುವುದು ಹೊಸತೇನಲ್ಲ. ನಾವು ಪಡಿತರ ಪಡೆಯಲು ಹೋದಾಗಲೆಲ್ಲಾ ಇದೇ ಸಮಸ್ಯೆಯನ್ನು ಮುಂದಿಡುತ್ತಾರೆ. ಈ ಭಾಗದಲ್ಲಿ ಹೆಚ್ಚು ವಯೋವೃದ್ಧರು ಹಾಗೂ ಬಡವರು ಪಡಿತರಕ್ಕಾಗಿ ಬರುತ್ತಾರೆ. ಆಹಾರ ಧಾನ್ಯ ಪಡೆಯುವುದು ಅನಿವಾರ್ಯವಾದ ಕಾರಣ ಆ ದಿನ ಕೂಲಿ ಕೆಲಸಕ್ಕೂ ಹೋಗದೆ

ಪಡಿತರ ವಿತರಣಾ ಕೇಂದ್ರಕ್ಕೆ ಬರುತ್ತಾರೆ. ಆದರೆ ಬೆಳಗ್ಗೆ ಸರತಿಯಲ್ಲಿ ನಿಂತವರನ್ನು ಮಧ್ಯಾಹ್ನ ಬರುವಂತೆ ಹೇಳಿ ಕಳುಹಿಸುತ್ತಾರೆ. ಸರಿ ಏನೋ ಸಮಸ್ಯೆ ಇರಬಹುದೆಂದು ಮಧ್ಯಾಹ್ನದವರೆಗೂ ಕಾದು ಪಡಿತರ ಕೇಳಿದರೆ ಸರ್ವರ್ ಬಂದಿಲ್ಲ ನಾಳೆ ಬಂದುಬಿಡಿ ಎನ್ನುತ್ತಾರೆ. ಒಂದು ದಿನ ಕೂಲಿಗೆ ಹೋಗದಿದ್ದರೂ ಸಂಸಾರ ನಡೆಸುವುದು ಕಷ್ಟ ಎನ್ನುವವರು ಮತ್ತೆ ಬರುವುದು ಸುಲಭದ ಮಾತಲ್ಲ ಎಂದು 60 ವರ್ಷದ ವೃದ್ಧೆ ಶಾರದಮ್ಮ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಾಮಾನ್ಯವಾಗಿ ಪಡಿತರ ಅಂಗಡಿ ಬೆಳಿಗ್ಗೆ 7 ರಿಂದ ಮಧ್ಯಾಹ್ನ 12 ಮತ್ತು ಸಂಜೆ 4 ರಿಂದ ರಾತ್ರಿ 8 ರವರೆಗೆ ತೆರೆದಿರುತ್ತದೆ. ಆದರೆ ಸರ್ವರ್ ಸಮಸ್ಯೆ ಬಿಟ್ಟು ಬಿಡದಂತೆ ಕಾಡುತ್ತಿದ್ದರೂ ಇನ್ನೂ ಪರಿಹಾರ ಕ್ರಮ ಕೈಗೊಂಡಿಲ್ಲ. ಪರಿಣಾಮ ಸರ್ವರ್ ಸಮಸ್ಯೆ ಇಲ್ಲದ ದಿನಗಳಲ್ಲಿ ಮಾತ್ರ ಫಲಾನುಭವಿಗಳು ನ್ಯಾಯಬೆಲೆ ಅಂಗಡಿಗೆ ತೆರಳುವ ದುಃಸ್ಥಿತಿ ನಿರ್ಮಾಣವಾಗಿದೆ. ಪಿಡಿಎಸ್ ಪ್ರಕ್ರಿಯೆ ಸಂಪೂರ್ಣವಾಗಿ ಆನ್‌ಲೈನ್ ವ್ಯವಸ್ಥೆಯಡಿಯಲ್ಲೇ ನಡೆಸಬೇಕಿರುವ ಕಾರಣ ಪರ್ಯಾಯ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಫಲಾನುಭವಿ ರಾಜಣ್ಣ ಹೇಳಿದರು.

ಪಡಿತರ ವಿತರಣಾ ಕೇಂದ್ರಗಳಲ್ಲಿ ವಹಿವಾಟು ಪ್ರಕ್ರಿಯೆ ರಾಜ್ಯ ಮಟ್ಟದ ಸಾಫ್ಟ್‌ವೇರ್ ಮೂಲಕವೇ ನಡೆಯಲಿದ್ದು, ಅದರಲ್ಲಿ ಎಲ್ಲಾ ಫಲಾನುಭವಿಗಳ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಲಾಗಿದೆ. ಫಲಾನುಭವಿಗಳ ಹೆಬ್ಬೆರಳಿನ ಗುರುತು ಹಾಗೂ ದಾಖಲಾಗಿರುವ ಮಾಹಿತಿ ಹೊಂದಿಕೆಯಾದರಷ್ಟೇ ಅವರ ಕೋಟಾದಲ್ಲಿ ಧಾನ್ಯಗಳನ್ನು ನೀಡಲು ಸಾಧ್ಯ. ಆದರೆ ಸರ್ವರ್ ಸಮಸ್ಯೆಯಿಂದಾಗಿ ಹಲವು ಕುಟುಂಬ ಸದಸ್ಯರ ಹೆಬ್ಬೆರಳಿನ ಗುರುತು ಡೇಟಾ ಫೀಡ್‌ನೊಂದಿಗೆ ಹೊಂದಿಕೆ ಆಗದಿರುವುದು ಅತ್ಯಂತ ವಿಷಾದನೀಯ. ಕೆಲವೆಡೆ ಇ–ಪಿಒಎಸ್ ಯಂತ್ರಗಳು ಫಲಾನುಭವಿಗಳ ಬಯೋಮೆಟ್ರಿಕ್ ಡೇಟಾವನ್ನು ದಾಖಲಿಸುತ್ತವೆಯಾದರೂ ರಶೀದಿ ಮುದ್ರಿಸುವ ಮೊದಲೇ ಆಫ್‌ಲೈನ್ ಆಗಿ ಪ್ರಕ್ರಿಯೆ ಅಪೂರ್ಣಗೊಳ್ಳುತ್ತದೆ.

ಮೈಸೂರಿನಲ್ಲಿ ದಸರಾ ಸಂಭ್ರಮ ಮನೆ ಮಾಡಿದ್ದು, ಈ ವೇಳೆ ವಿಶೇಷ ಖಾದ್ಯ ಹಾಗೂ ಸಿಹಿತಿಂಡಿಗಳನ್ನು ಸಿದ್ಧಪಡಿಸಿಕೊಳ್ಳುವುದು ಸರ್ವೆಸಾಮಾನ್ಯ. ಆದರೆ ಸರ್ವರ್ ಸಮಸ್ಯೆಯಿಂದ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಆಹಾರ ಧಾನ್ಯವೂ ಸಿಗದೆ ಪರಿತಪಿಸುವಂತಾಗಿದೆ. ಹಲವು ತಾಂತ್ರಿಕ ಸಮಸ್ಯೆಗಳಿಂದ ಫಲಾನುಭವಿಗಳ ಜೊತೆಗೆ ಪಡಿತರ ಕೇಂದ್ರದ ನಿರ್ವಾಹಕರಿಗೂ ತೊಂದರೆಯಾಗುತ್ತದೆ. ಈ ಗಂಭೀರ ಸಮಸ್ಯೆಯನ್ನು ಪರಿಹರಿಸದ ಹೊರತು ಪಡಿತರ ವಿತರಣಾ ಕೇಂದ್ರಗಳ ನಿರ್ವಹಣೆ ಕಷ್ಟಸಾಧ್ಯವಾಗಿದೆ.

ಪುನೀತ್ ಜನ್ಮದಿನ ಇನ್ಮುಂದೆ ಸ್ಫೂರ್ತಿ ದಿನ



ಬೆಂಗಳೂರು: ಪುನೀತ್ ರಾಜ್‌ಕುಮಾರ್ ಅವರು ಅನೇಕರಿಗೆ ಸ್ಫೂರ್ತಿಯಾಗಿದ್ದರು. ಸಾಕಷ್ಟು ಸಾಮಾಜಿಕ ಕೆಲಸಗಳನ್ನು ಮಾಡುವ ಮೂಲಕ ಅನೇಕರಿಗೆ ಮಾದರಿ ಆಗಿದ್ದರು. ಅವರ ಮಾರ್ಗದರ್ಶನದಲ್ಲಿ ಅನೇಕ ಕಲಾವಿದರು ಬದುಕು ಕಟ್ಟಿಕೊಂಡಿದ್ದರು. ಆದರೆ, ಈಗ ಅಪ್ಪು ಇಲ್ಲ ಎಂಬ ನೋವು ಅನೇಕರನ್ನು ಬಹುವಾಗಿ ಕಾಡುತ್ತಿದೆ. ಪುನೀತ್ ನಿಧನ ಹೊಂದಿ ವರ್ಷ ಕಳೆಯುತ್ತಾ ಬಂದರೂ ಅವರ ಅಗಲಿಕೆ ನೋವು ಕಡಿಮೆ ಆಗಿಲ್ಲ. ಒಂದಲ್ಲಾ ಒಂದು ರೀತಿಯಲ್ಲಿ ಅವರನ್ನು ನೆನಪಿಸಿಕೊಳ್ಳುವ ಕಾರ್ಯ ಆಗುತ್ತಿದೆ. ಈಗ ಪುನೀತ್ ರಾಜ್‌ಕುಮಾರ್ ಜನ್ಮದಿನವನ್ನು ಸ್ಫೂರ್ತಿ ದಿನವನ್ನಾಗಿ ಆಚರಿಸಲು ಸರ್ಕಾರ ನಿರ್ಧರಿಸಿದೆ. ಈ ಮೂಲಕ ಅನೇಕರಿಗೆ ಸ್ಫೂರ್ತಿ ಆಗಿದ್ದ ಸ್ಟಾರ್ ನಟನಿಗೆ ಸರ್ಕಾರ ವಿಶೇಷವಾಗಿ ಗೌರವ ಸೂಚಿಸುತ್ತಿದೆ. ಈ ಬಗ್ಗೆ ಅಧಿಕೃತ ಘೋಷಣೆ ಒಂದೇ ಬಾಕಿ ಇದೆ.

ಪುನೀತ್ ಅವರು ನಟನಾಗಿ ಮಾತ್ರ ಚಿತ್ರರಂಗದಲ್ಲಿ ಗುರುತಿಸಿಕೊಂಡಿರಲಿಲ್ಲ. ಅವರು ನಿರ್ಮಾಪಕನಾಗಿ ಅನೇಕ ಯುವ ಪ್ರತಿಭೆಗಳಿಗೆ ಅವಕಾಶ ನೀಡಿದ್ದರು. ಅವರು ಮಾಡಿದ್ದ ಸಾಮಾಜಿಕ ಕೆಲಸಗಳು ಹಲವು. 'ಕನ್ನಡದ ಕೋಟ್ಯಾಧಿಪತಿ' ಶೋಗೆ ಬಂದ ಸ್ಪರ್ಧಿಗೆ ಪುನೀತ್ ಸಾಕಷ್ಟು ಸ್ಫೂರ್ತಿದಾಯಕ ಮಾತುಗಳನ್ನಾಡುತ್ತಿದ್ದರು. ಈ ಕಾರಣದಿಂದ ಪುನೀತ್ ಅವರಿಗೆ ಸರ್ಕಾರ ವಿಶೇಷವಾಗಿ ಗೌರವ ಸೂಚಿಸಲು ನಿರ್ಧರಿಸಿದೆ.

ಯೋಗಥಾನ್ ಮುಂದೂಡಿಕೆ

ಮೈಸೂರು, ಸೆ.15– ಕೇಂದ್ರ ಸರ್ಕಾರದ ಆಯುಷ್ ಮಂತ್ರಾಲಯದ ಸಹಯೋಗದೊಂದಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸೆ.17ರಂದು ನಿಗದಿಪಡಿಸಿದ್ದ 'ಯೋಗಥಾನ್' ಕಾರ್ಯಕ್ರಮವನ್ನು ಮುಂದೂಡಲಾಗಿದೆ.

ವಿಧಾನಮಂಡಲ ಅಧಿವೇಶನ, ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ಪರೀಕ್ಷೆಗಳು ನಡೆಯುತ್ತಿರುವುದು ಹಾಗೂ ಮಳೆ ಕಾರಣಗಳಿಂದಾಗಿ 'ಯೋಗಥಾನ್' ಮುಂದೂಡಲಾಗಿದ್ದು, ಇದಕ್ಕಾಗಿ ನೋಂದಣಿಯಾಗಿದ್ದ ಯೋಗಪಟುಗಳು, ವಿದ್ಯಾರ್ಥಿಗಳು, ತರಬೇತುದಾರರು, ಯೋಗ ಸಂಸ್ಥೆಗಳು ತಮ್ಮ ಯೋಗಾಭ್ಯಾಸ ಮುಂದುವರೆಸಬೇಕು. ಮುಂದೆ ನಿಗದಿಯಾಗುವ ದಿನದಲ್ಲಿ ನಡೆಯುವ 'ಯೋಗಥಾನ್'ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗಿನ್ನಿಸ್ ವಿಶ್ವ ದಾಖಲೆಗೆ ಸಹಕರಿಸಬೇಕೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸೆ.18, ಮೈಸೂರು ಕೊಡವ ಸಮಾಜದ ಸರ್ವ ಸದಸ್ಯರ ಸಭೆ

ಮೈಸೂರು, ಸೆ. 15–ಮೈಸೂರು ಕೊಡವ ಸಮಾಜದ ವಾರ್ಷಿಕ ಸರ್ವ ಸದಸ್ಯರ ಸಭೆಯು ಸೆ.18ರಂದು ಬೆಳಗ್ಗೆ 10.30 ಗಂಟೆಗೆ ವಿಜಯನಗರ 1ನೇ ಹಂತದಲ್ಲಿರುವ ಕೊಡವ ಸಮಾಜದ ಗುರುಮನೆ ಸಭಾಂಗಣದಲ್ಲಿ ನಡೆಯಲಿದೆ. ಸಮಾಜದ ಅಧ್ಯಕ್ಷ ಮೇಚಂಡ ಎಂ.ಶಶಿ ಪೊನ್ನಪ್ಪ ಅಧ್ಯಕ್ಷತೆ ವಹಿಸುವರು ಎಂದು ಸಮಾಜದ ಕಾರ್ಯದರ್ಶಿ ಮುಕ್ಕಾಟ್ಟೀರ ಬಿ. ಜೀವನ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

14th Year Fond Remembrance



Though you are not in our midst, you are alive in our memory & thoughts.

Rashmi Dasappa
Date of Death 16-09-2008

Parents:
B.M. Hallidasappa
C. Kamalamma
Brother & Sister

7ನೇ ವರ್ಷದ ಪುಣ್ಯಸ್ಮರಣೆ



ಕಾರ್ತಿಕ್

ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಕೋರುವ
ತಂದೆ – ಕುಮಾರ್
ತಾಯಿ – ಸುಧಾ,
ಮೋಹನ್ ಹಾಗೂ ಕುಟುಂಬದವರು

ನಿಂತಿದ್ದ ಲಾರಿಗೆ ಬೈಕ್ ಡಿಕ್ಕಿ: ಓರ್ವ ಸಾವು

ಮತ್ತೊಬ್ಬನಿಗೆ ತೀವ್ರ ಗಾಯ

ಮೈಸೂರು, ಸೆ.15–ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿ ನಿಂತಿರುವ ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಮೈಸೂರಿನ ದೇವೇಗೌಡ ವೃತ್ತದ ಬಳಿ ಗುರುವಾರ ರಾತ್ರಿ ಸಂಭವಿಸಿದೆ. ಕಾಳಿಸಿದ್ದನಹುಂಡಿ ಗ್ರಾಮದ ಯುವಕ ಸ್ವಾಮಿ (32) ಮೃತಪಟ್ಟಿದ್ದು, ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಬೈಕ್ (ಡಬ್ಲ್ಯೂಬಿ11 ಇ1863)ನಲ್ಲಿ ಬರುತ್ತಿದ್ದವರು ನಿಯಂತ್ರಣ ತಪ್ಪಿ ರಸ್ತೆಬದಿ ನಿಂತಿದ್ದ ಟ್ರಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದ್ದಾರೆ. ಈ ಬೈಕ್ ಸವಾರರು ಹೆಲ್ಮೆಟ್ ಧರಿಸಿರಲಿಲ್ಲ ಎಂದು ಸಿದ್ಧಾರ್ಥ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮುಂದಿನ ವರ್ಷದಿಂದ ಪ್ರತಿ ಜಿಲ್ಲೆಯಲ್ಲಿ ಸರ್ಕಾರದಿಂದಲೇ ವಿಶ್ವೇಶ್ವರಯ್ಯ ಜಯಂತಿ ಆಚರಣೆ: ಸಿಎಂ ಬೊಮ್ಮಾಯಿ ಘೋಷಣೆ



ಬೆಂಗಳೂರು, ಸೆ.15(ಕೆಎಂಶಿ)– ಮುಂದಿನ ವರ್ಷ ಸರ್ಕಾರದ ವತಿಯಿಂದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಅವರ ಜನ್ಮ ದಿನಾಚರಣೆ ಆಯೋಜನೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಕರ್ನಾಟಕ ಇಂಜಿನಿಯರಿಂಗ್ ಸೇವಾ ಸಂಘ ಹಾಗೂ ಕರ್ನಾಟಕ ಇಂಜಿನಿಯರುಗಳ ಸಂಘದ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಅಭಿಯಂತರರ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶ್ವೇಶ್ವರಯ್ಯ ಅವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಸರ್.ಎಂ.ವಿಶ್ವೇಶ್ವರಯ್ಯ ಅವರ ಜನ್ಮದಿನವನ್ನು ಇಂಜಿನಿಯರ್ಸ್ ದಿನವನ್ನಾಗಿ ಆಚರಿಸುತ್ತೇವೆ. ಈ ವರ್ಷ ಭಾರತ ಸರ್ಕಾರವೂ ಅಧ್ಯಯನ ಮಾಡಿ ಎಲ್ಲಾ ರಾಜ್ಯಗಳಲ್ಲಿ ಸರ್ಕಾರವೇ ಅಭಿಯಂತರರ ದಿನಾಚರಣೆ ಆಚರಿಸಲು ಸೂಚಿಸಿದೆ. ನಮ್ಮ ರಾಜ್ಯದಲ್ಲಿ ಈಗಾಗಲೇ ಆಚರಣೆ ಮಾಡಿಕೊಂಡು ಬರಲಾಗುತ್ತಿದೆ ಎಂದರು.

ವಿಶ್ವೇಶ್ವರಯ್ಯ ಅವರು ಕನ್ನಡನಾಡಿನ ಅತ್ಯಂತ ಹೆಮ್ಮೆಯ ಪುತ್ರ ಅವರು ಸದಾ ಕಾಲ ನಮಗೆ ಪ್ರೇರಣೆ. ಕನ್ನಡ ನಾಡು ಕಟ್ಟಿದ ಧೀಮಂತ ವ್ಯಕ್ತಿ. ವಿಶ್ವೇಶ್ವರಯ್ಯ ಅವರ ಹೆಸರಿನಲ್ಲಿಯೇ ಸ್ಫೂರ್ತಿ ಇದೆ. 90 ವರ್ಷಕ್ಕಿಂತ ಹೆಚ್ಚು ಕಾಲ ಬಾಳಿ, ಬದುಕಿದ ಅವರ ಬದುಕಿನ ಪ್ರತಿ ಕ್ಷಣವೂ ನಾಡಿನ, ದೇಶನ ಅಭಿವೃದ್ಧಿ, ಜನರ ಒಳಿತಿಗಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಇಷ್ಟು ವೈವಿಧ್ಯಮಯ ಜ್ಞಾನ ಮತ್ತು ಬದ್ಧತೆ ಇರುವ ವ್ಯಕ್ತಿಗಳು ಬಹಳ ಕಡಿಮೆ. ನಿಜವಾದ ದೇಶಭಕ್ತರು, ನಾಡು ಕಟ್ಟಿದವರು ಅವರು. ಕೇವಲ ಅಣೆಕಟ್ಟುಗಳನ್ನು, ರಸ್ತೆಗಳನ್ನು ಮಾತ್ರ ನಿರ್ಮಾಣ ಮಾಡಲಿಲ್ಲ. ಇಂಧನ ಕ್ಷೇತ್ರದಲ್ಲಿಯೂ ಅವರ ಕೊಡುಗೆ ಅಪಾರ. ಬೃಹತ್ ಕಾರ್ಖಾನೆಗಳ ನಿರ್ಮಾಣವನ್ನು ಮಾಡಿದರು. ರಾಜ್ಯದ ಅಧೀನದಲ್ಲಿರುವ ವಿಶ್ವೇಶ್ವರಯ್ಯ ಉಕ್ಕು ಕಾರ್ಖಾನೆ, ಸಿಮೆಂಟ್, ಕಾಗದ ಮುಂತಾದ ಕಾರ್ಖಾನೆಗಳನ್ನು ಮೈಸೂರು ಮಹಾ ರಾಜರ ಆಶ್ರಯದಲ್ಲಿ ಆರಂಭಿಸಿದರು. ಕೆಆರ್‌ಎಸ್ ಅಣೆಕಟ್ಟು ಕಟ್ಟಿ ನಮ್ಮ ಕಾವೇರಿ ಜಲಾನಯನ ಭಾಗದ ರೈತರಿಗೆ ದೊಡ್ಡ ಕೊಡುಗೆ ನೀಡಿದ್ದಾರೆ ಎಂದರು.

3ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ಶ್ರೀ ಟಿ.ಎನ್.ದಾಸೇಗೌಡರವರು
(ನಿ|| ಉಪನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ)
ಮರಣ : 16-09-2019

ದುಃಖತಪ್ತರು:–
ಪತ್ನಿ, ಬಿ.ಸಿ.ಸರಸ್ವತಿ,
ಮಗಳು ಯಶೋದರೆ.ಟಿ.ಡಿ,
ಅಳಿಯ ನಾರಾಯಣ ಸ್ವಾಮಿ
ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು
ಮತ್ತು ಸ್ನೇಹಿತರು



ಗೌರವ ಡಾಕ್ಟರೇಟ್ ಪುರಸ್ಕೃತ ನಟ ರಮೇಶ್ ಅರವಿಂದ್‌ಗೆ ಶಿವಾಜಿ ಸುರತ್ಕಲ್–2 ಚಿತ್ರ ತಂಡದಿಂದ ಸನ್ಮಾನ

ಮೈಸೂರು, ಸೆ.15(ಜಿಎ)– ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪಡೆದಿರುವ ಚಲನಚಿತ್ರ ನಟ ರಮೇಶ್ ಅರವಿಂದ್ ಅವರನ್ನು ಶಿವಾಜಿ ಸುರತ್ಕಲ್–2 ಚಿತ್ರತಂಡ ಅಭಿನಂದಿಸಿತು.

ಮೈಸೂರಿನ ಮನೆಯೊಂದರಲ್ಲಿ ಅಂಜನಾದ್ರಿ ಸಿನಿ ಕ್ರಿಯೇಷನ್ ಅವರ ನಿರ್ಮಾಣದೊಂದಿಗೆ ನಟ ರಮೇಶ್ ಅರವಿಂದ್ ಅವರು ಮುಖ್ಯ ಭೂಮಿಕೆಯಲ್ಲಿ ಅಭಿನಯಿಸುತ್ತಿರುವ 'ಶಿವಾಜಿ ಸುರತ್ಕಲ್–2' ಚಿತ್ರದ ಚಿತ್ರೀಕರಣ ಆರಂಭವಾಗಿದ್ದು, ಇದೇ ವೇಳೆ ಗುರುವಾರ ಸಂಜೆ ಚಿತ್ರತಂಡವು ರಮೇಶ್ ಅವರನ್ನು ಅಭಿನಂದಿಸಿತು. ಇದೇ ವೇಳೆ 'ಶಿವಾಜಿ ಸುರತ್ಕಲ್–2' ಚಿತ್ರ ಸಂಬಂಧ ಮಾಧ್ಯಮಗಳೊಂದಿಗೆ ತಮ್ಮ ಅನಿಸಿಕೆಯನ್ನು ಹಂಚಿಕೊಂಡರು.

ಶಿವಾಜಿ ಸುರತ್ಕಲ್–2 ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದ್ದು, ಅದಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಈ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ಪಡೆದಿರುವ ಅವರನ್ನು ಅಭಿನಂದಿಸುವುದು ನಮ್ಮ ಕರ್ತವ್ಯವೆಂದು ಚಿತ್ರ ನಿರ್ದೇಶಕ ಆಕಾಶ್ ಶ್ರೀವತ್ಸ ತಿಳಿಸಿದರು.

ನಟ ಡಾ.ರಮೇಶ್ ಅರವಿಂದ್ ಮಾತನಾಡಿ, ಗೀತಪ್ರಿಯ ನಿರ್ದೇಶನದಲ್ಲಿ ಮೌನ ಗೀತೆಯಿಂದ ಆರಂಭವಾದ ನನ್ನ ಸಿನಿಮಾ ಪಯಣ ಇಂದಿಗೆ 30 ವರ್ಷಗಳಾದರೂ ಅಭಿಮಾನಿಗಳು ನನ್ನ ಕೈ ಬಿಟ್ಟಿಲ್ಲ, ಮತ್ತಷ್ಟು ಬಿಗ್ಗಿದಪ್ಪಿಕೊಳ್ಳುತ್ತಿದ್ದಾರೆ. ಮತ್ತಷ್ಟು ಪ್ರೀತಿ ನೀಡಿ ಪ್ರೋತ್ಸಾಹಿಸುತ್ತಿದ್ದಾರೆ. ಅವರಿಗೆ ನಾನು ಸದಾ ಚಿರಋಣಿಯಾಗಿದ್ದೇನೆ ಎಂದರು. ಶಿವಾಜಿ ಸುರತ್ಕಲ್ ಮೊದಲ ಭಾಗವು ಎಷ್ಟು ಕುತೂಹಲಕಾರಿಯಾಗಿತ್ತು. ಶಿವಾಜಿ ಸುರತ್ಕಲ್–2 ಚಿತ್ರವು ಅದಕ್ಕಿಂತ ಹೆಚ್ಚು ವಿಭಿನ್ನವಾಗಿ ಮೂಡಿಬರುತ್ತಿದೆ. ಅದರಂತೆ ಇಲ್ಲಿಯೂ ವಿವಿಧ ಪ್ರಕರಣಗಳನ್ನು ತನಿಖೆ ಮೂಲಕ ಭೇದಿಸಲಾಗುತ್ತದೆ. ಮೈಸೂರಿನಲ್ಲಿ ಚಿತ್ರೀಕರಣ ಆರಂಭಿಸಿರುವುದು ಸಂತಸದ ವಿಚಾರವಾಗಿದ್ದು, ಕಳೆದ ಬಾರಿಯೂ ಮೊದಲ ಭಾಗವನ್ನು ಇಲ್ಲಿಯೇ ಚಿತ್ರೀಕರಣ ಮಾಡಲಾಗಿತ್ತು. ಇಲ್ಲಿನ ಕಟ್ಟಡಗಳು, ರಸ್ತೆಗಳು ಅದ್ಭುತವಾಗಿ ಮೂಡಿ ಬಂದಿತ್ತು ಎಂದರು.

ಸುದ್ದಿಗೋಷ್ಠಿಯಲ್ಲಿ ಬಹುಭಾಷ ನಟ ನಾಸಿರ್, ನಟಿ ರಾಧಿಕಾ, ನಿರ್ಮಾಪಕ ಅನುಪ್‌ಗೌಡ ಉಪಸ್ಥಿತರಿದ್ದರು.


ರಮೇಶ್ ಅರವಿಂದ್ ಅವರು ಗೌರವ ಡಾಕ್ಟರೇಟ್ ಪಡೆದಿರುವ ಹಿನ್ನೆಲೆಯಲ್ಲಿ ಶಿವಾಜಿ ಸುರತ್ಕಲ್–2 ಚಿತ್ರತಂಡ ಕೇಕ್ ಕತ್ತರಿಸಿ ಸಂಭ್ರಮಿಸಿತು.

> ಮೈಸೂರಿಗೆ ಬಂದರೆ ತಾಯಿ ಮನೆಗೆ ಬಂದ ಅನುಭವ ಪ್ರತಿ ಬಾರಿಯೂ ಆಗುತ್ತದೆ. ಕನ್ನಡದಿಂದಲೇ ನನ್ನ ವೃತ್ತಿ ಜೀವನ ಆರಂಭವಾಗಿದ್ದು, ಕೆಜಿಎಫ್ ಚಿತ್ರದ ನಂತರ ಕನ್ನಡ ಚಿತ್ರರಂಗವೂ ಜಗತ್ತಿನಾದ್ಯಂತ ವಿಸ್ತರಿಸಿದೆ. ಸಿನಿಮಾ ವಿಚಾರದಲ್ಲಿ ಯಾವುದೇ ಭಾಷೆಯ ಪರಿಮಿತಿಗಳಿಲ್ಲ. ಪ್ರತಿಯೊಂದು ಭಾರತದ ಚಿತ್ರವಾಗುತ್ತಿರುವುದು ಸಂತಸದ ವಿಚಾರವಾಗಿದೆ. ರಮೇಶ್ ಅವರೊಂದಿಗೆ ನನ್ನ ಒಡನಾಟ 25 ವರ್ಷಕ್ಕೂ ಹೆಚ್ಚಿನದ್ದು, ಅವರೊಟ್ಟಿಗೆ ಅಭಿನಯಿಸುತ್ತಿರುವುದು ಹಾಗೂ ಇದೇ ಸಂದರ್ಭದಲ್ಲಿ ಅವರಿಗೆ ಗೌರವ ಡಾಕ್ಟರೇಟ್ ಲಭಿಸಿರುವುದು ಸಂತಸದ ವಿಚಾರವಾಗಿದೆ. **–ನಾಸಿರ್, ಬಹುಭಾಷಾ ನಟ**

> ನನಗೆ ಪ್ರತಿನಿತ್ಯ ಕೇಳಿ ಬರುತ್ತಿರುವ ಪ್ರಶ್ನೆ ಎಂದರೆ ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮ ಮತ್ತೆ ಯಾವಾಗ ಬರುತ್ತದೆ. ಆದರೆ, ಈಗಾಗಲೇ ಅದರ ಕುರಿತು ವಾಹಿನಿಯ ಮುಖ್ಯಸ್ಥ ರಾಘವೇಂದ್ರ ಹುಣಸೂರ್ ಅವರ ಬಳಿ ಚರ್ಚಿಸಿದ್ದು, ಕಾರ್ಯಕ್ರಮದ ಮಾದರಿಯನ್ನು ಬದಲಾವಣೆ ಮಾಡುವ ಚಿಂತನೆಯಲ್ಲಿದ್ದೇವೆ. ಈ ಬಾರಿ ವಿವಿಧ ಕ್ಷೇತ್ರದ ಸಾಧಕರೊಂದಿಗೆ ನಮ್ಮ ಯೋಧರು ಮತ್ತು ರೈತರನ್ನು ಕರೆಸಬೇಕು ಎಂಬ ಉದ್ದೇಶವಿದೆ. ಕಮಲ್ ಹಾಸನ್ ಅವರಿಗೆ ವಿಕ್ರಮ್ ಚಿತ್ರದ ಮೂಲಕ ಅಭೂತಪೂರ್ವ ಪ್ರತಿಕ್ರಿಯೆ ದೊರೆತಿದ್ದು, ಅವರೊಟ್ಟಿಗೆ ಮತ್ತೊಂದು ಸಿನಿಮಾ ಮಾಡುವ ಆಲೋಚನೆ ಇದೆ.
> **–ಡಾ.ರಮೇಶ್ ಅರವಿಂದ್, ನಟ**

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮಳೆಯಿಂದ ಅಪಾರ ಹಾನಿ ವಿಶೇಷ ಅನುದಾನ ಬಿಡುಗಡೆಗೆ ಜಿಟಿಡಿ ಆಗ್ರಹ

• ವಿಧಾನಸಭೆಯಲ್ಲಿ ಕ್ಷೇತ್ರದ ಮಳೆ ಹಾನಿಯ ಚಿತ್ರಣ ಕಟ್ಟಿಕೊಟ್ಟ ಶಾಸಕರು; ಕೆರೆ, ಕಟ್ಟೆ ಒಡೆದು ನೀರು ನುಗ್ಗಿ ಭಾರೀ ಹಾನಿಯ 'ಮೈಸೂರು ಮಿತ್ರ'ನ ಸಚಿತ್ರ ವರದಿ ಪ್ರದರ್ಶನ



ಬೆಂಗಳೂರು, ಸೆ.15– ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಮಳೆಯಿಂದ ಭಾರೀ ಹಾನಿಯಾಗಿದ್ದು, ಪರಿಹಾರಕ್ಕಾಗಿ ಕೂಡಲೇ ವಿಶೇಷ ಅನುದಾನ ಬಿಡುಗಡೆ ಮಾಡಬೇಕೆಂದು ಶಾಸಕ ಜಿ.ಟಿ.ದೇವೇಗೌಡರು ವಿಧಾನಸಭೆಯಲ್ಲಿ ಗುರುವಾರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ರಾಜ್ಯದ ಪ್ರವಾಹ ಪರಿಸ್ಥಿತಿ ಕುರಿತು ಮಾತನಾಡಿದ ಅವರು, ಭಾರೀ ಮಳೆಯಿಂದ ಮೈಸೂರಿನಲ್ಲಿ ಸಾವಿರಾರು ಕೋಟಿಯಷ್ಟು ನಷ್ಟವುಂಟಾಗಿದೆ. ಅದರಲ್ಲೂ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯಲ್ಲಿ ಕೆರೆಗಳು ಕೋಡಿಬಿದ್ದು ರಸ್ತೆಗಳು, ಸೇತುವೆಗಳು ಸಂಪೂರ್ಣ ಹಾಳಾಗಿರುವುದರಿಂದ ಗ್ರಾಮಗಳ ನಡುವಿನ ಸಂಪರ್ಕ ಕಡಿತಗೊಂಡಿದೆ. ಟ್ರಾನ್ಸ್‌ಫಾರ್ಮರ್‌ಗಳೂ ಹಾಳಾಗಿವೆ, ಶಾಲಾ ಕೊಠಡಿಗಳಿಗೆ ಹಾನಿಯಾಗಿದೆ, ಅಪಾರ ಪ್ರಮಾಣದ ಬೆಳೆ ನಷ್ಟವಾಗಿ ರೈತರು ಕಂಗಾಲಾಗಿದ್ದಾರೆ. ಮೂಲಸೌಕರ್ಯ ಹಾಗೂ ಪರಿಹಾರಕ್ಕಾಗಿ ವಿಶೇಷ ಅನುದಾನ ಬಿಡುಗಡೆ ಮಾಡುವ ಮೂಲಕ ಸರ್ಕಾರ ಜನರ ನೆರವಿಗೆ ನಿಲ್ಲಬೇಕೆಂದು ಆಗ್ರಹಿಸಿದರು.

ರೈತನಾಗಿದ್ದ ನನಗೆ ರಾಜಕೀಯದ ಬಗ್ಗೆ ಆಸಕ್ತಿ ಇರಲಿಲ್ಲ. ನೀರಾವರಿ ಇಲ್ಲದಿದ್ದರೂ ಕೆರೆಗಳ ಬಯಲಲ್ಲಿ ಭತ್ತ ಬೆಳೆಯುತ್ತಿದ್ದೆವು. 1965–66ನೇ ಇಸವಿಯಲ್ಲಿ ಅಮೆರಿಕಾದ ಕೆಂಪು ಜೋಳ, ಅಟ್ಟ, ಮೈದಾ, ಸೂಜಿ ಪರಿಚಯವಾಗಿತ್ತಾದರೂ ಆಗ ಭೀಕರ ಬರಗಾಲವಿತ್ತು. ನಂತರ 1975ರವರೆಗೂ ಯಥೇಚ್ಛ ಮಳೆಯಾಗಿ ಕೆರೆ ಕಟ್ಟೆಗಳು ತುಂಬಿದವು. ಅಲ್ಲಿಂದ ಮತ್ತೆ ಬರಗಾಲ ಎದುರಾಗಿದ್ದರಿಂದ ಕೆರೆ–ಕಟ್ಟೆಗಳು ತುಂಬಲೇ ಇಲ್ಲ. ಸದ್ಯದ ಪರಿಸ್ಥಿತಿ ಗಮನಿಸಿದರೆ ನಾಲೆ, ಕೆರೆ–ಕೋಡಿಗಳ ದುರಸ್ತಿ ಮಾಡುವ ಪ್ರಶ್ನೆಯೇ ಇಲ್ಲ. ಏಕೆಂದರೆ ಎಲ್ಲಾ ಕೆರೆಗಳನ್ನೂ ಒತ್ತುವರಿ ಮಾಡಿಕೊಳ್ಳಲಾಗಿದೆ. ಹಳ್ಳಿ ಜನ ಕೂಲಿಗಾಗಿ ನಗರ ಪ್ರದೇಶಕ್ಕೆ ಹೋದಂತೆಲ್ಲಾ ಅಲ್ಲಿ ಲೇಔಟ್‌ಗಳು ವಿಸ್ತರಣೆಯಾದವು. ಈ ವೇಳೆ ರಾಜಕಾಲುವೆ ಒತ್ತುವರಿ ಅಥವಾ ಅತಿಕ್ರಮಿಸಿಕೊಂಡಿದ್ದರೂ ಅಧಿಕಾರಿಗಳು ಅನುಮೋದನೆ ನೀಡಿದರು. ಇದೆಲ್ಲದರ ಪರಿಣಾಮ ಇದೀಗ ಸಂಕಷ್ಟ ಎದುರಿಸುವಂತಾಗಿದೆ ಎಂದು ಜಿ.ಟಿ.ದೇವೇಗೌಡರು ದೂರಿದರು.

ನಾನು ಪ್ರತಿನಿಧಿಸುವ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಡಾವಣೆ ನಿರ್ಮಾಣಕ್ಕೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅನುಮೋದನೆ ನೀಡಿದೆ. ನಿವೇಶನಗಳನ್ನು ವಿಭಜಿಸಿ ಗ್ರಾಹಕರಿಗೆ ಹಂಚಿಕೆ ಮಾಡಿದ್ದಾರೆ. ಆದರೆ ಬಹುತೇಕ ಬಡಾವಣೆಗಳಲ್ಲಿ ಕನಿಷ್ಠ ಮೂಲಸೌಕರ್ಯ ಕಲ್ಪಿಸಿಲ್ಲ. ಇತ್ತೀಚೆಗೆ ಭಾರೀ ಮಳೆಯಿಂದ ಸಾಕಷ್ಟು ಮನೆಗಳಿಗೆ ನೀರು ನುಗ್ಗಿದೆ. ಮೇ ತಿಂಗಳಲ್ಲಿ ಮಳೆಯಿಂದ ಬೋಗಾದಿ ಕೆರೆ, ಹಿನಕಲ್ ಕೆರೆ, ಲಿಂಗಾಂಬುದಿ ಕೆರೆಗಳು ತುಂಬಿ ಕೋಡಿ ಬಿದ್ದು ಅಪಾರ ಹಾನಿಯಾಗಿದೆ. ಆಗ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಪಾಲಿಕೆ ಆಯುಕ್ತರು ಪರಿಶೀಲನೆ ನಡೆಸಿ, 28 ಕೋಟಿ ರೂ. ಪರಿಹಾರಕ್ಕೆ ಪ್ರಸ್ತಾವನೆ ಸಲ್ಲಿಸಿದರೂ ಸರ್ಕಾರದಿಂದ ಬಿಡುಗಡೆಯಾಗದ ಕಾರಣ ಈವರೆಗೂ ಪರಿಹಾರ ಕಾರ್ಯ ಕೈಗೊಳ್ಳಲು ಸಾಧ್ಯವಾಗಿಲ್ಲ ಎಂದು 'ಮೈಸೂರು ಮಿತ್ರ' ಸೇರಿದಂತೆ ಇನ್ನಿತರೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಪ್ರದರ್ಶಿಸಿ, ಮಳೆ ಅವಾಂತರವನ್ನು ಸದನದ ಕಣ್ಣಿಗೆ ಕಟ್ಟಿದರು.

ಬಿಎಸ್‌ವೈ ಬಣ್ಣಿಸಿದ ಶಾಸಕ ಜಿಟಿಡಿ

ಬಿ.ಎಸ್.ಯಡಿಯೂರಪ್ಪರವರು ಪ್ರಥಮ ಬಾರಿ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ನಾನು ಗೃಹ ಮಂಡಳಿ ಅಧ್ಯಕ್ಷನಾಗಿದ್ದೆ. ಉತ್ತರ ಕರ್ನಾಟಕದಲ್ಲಿ ಪ್ರವಾಹದಿಂದ ಭಾರೀ ನಷ್ಟವಾಗಿದ್ದರಿಂದ ಸರ್ಕಾರ ಸಮರೋಪಾದಿಯಲ್ಲಿ ಕೆಲಸ ಮಾಡಿತ್ತು. ಮುಖ್ಯಮಂತ್ರಿಯಾಗಿದ್ದ ಬಿಎಸ್‌ವೈ ಸಂತ್ರಸ್ತರಿಗಾಗಿ ಸಾಕಷ್ಟು ಮನೆಗಳನ್ನು ಕಟ್ಟಿಸಿದ್ದರು. ಇನ್ಫೋಸಿಸ್, ಮಠ ಮಾನ್ಯಗಳು, ಸಹೃದಯರ ನೆರವಿನಿಂದ ಸಾವಿರಾರು ಮನೆಗಳನ್ನು ನಿರ್ಮಾಣ ಮಾಡಲಾಯಿತು. ಕೆರೆಗಳ ಅಭಿವೃದ್ಧಿಗೂ ಬಿಎಸ್‌ವೈ ಒತ್ತು ನೀಡಿದ್ದರು. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 5 ಕೆರೆಗಳನ್ನು ತಲಾ 5 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಯೋಜನೆ ಆರಂಭಿಸಿದರು. ಅದಕ್ಕಾಗಿ ಕೆರೆ ಅಚ್ಚುಕಟ್ಟು ಪ್ರಾಧಿಕಾರವನ್ನೂ ರಚಿಸಲಾಗಿತ್ತು. ಆದರೆ ನಂತರದಲ್ಲಿ ಸರ್ಕಾರಗಳು ಇದನ್ನು ಮುಂದುವರೆಸಲಿಲ್ಲ. **–ಜಿ.ಟಿ.ದೇವೇಗೌಡರು**

ಗುತ್ತಿಗೆದಾರರು ಸರ್ಕಾರದ ಮಾನ ಕಳೆಯುತ್ತಿದ್ದಾರೆ

ಗುತ್ತಿಗೆದಾರರು ಸರ್ಕಾರದ ಮಾನ ಕಳೆಯುತ್ತಿದ್ದಾರೆ. ಟೆಂಡರ್‌ನಲ್ಲಿ ಕಡಿಮೆ ಮೊತ್ತ ನಮೂದಿಸಿ ಸಮಸ್ಯೆ ಸೃಷ್ಟಿಗೆ ಕಾರಣರಾಗಿ ಈಗ 40 ಪರ್ಸೆಂಟ್ ಕಮಿಷನ್ ಆರೋಪ ಮಾಡುತ್ತಿದ್ದಾರೆ. ಪಿಎಂಜಿಎಸ್‌ವೈ ಯೋಜನೆಯಡಿ ರಸ್ತೆ ಕಾಮಗಾರಿ ನಡೆಸಿದರೆ 5 ವರ್ಷ ನಿರ್ವಹಣೆ ಗುತ್ತಿಗೆದಾರರ ಜವಾಬ್ದಾರಿ. ಆದರೆ ಅದು ಪಾಲನೆಯಾಗುತ್ತಿಲ್ಲ. ಆದರೂ ಅಂತಹವರನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸದೆ ಮತ್ತೆ ಟೆಂಡರ್ ನೀಡಲಾಗುತ್ತಿದೆ. ಮತ್ತೆ ಆತ ಕಳಪೆ ಕಾಮಗಾರಿ ನಡೆಸುತ್ತಾನೆ. ಈ ಹಿಂದೆ ಕಾಮಗಾರಿಗೆ ಬಳಸಬೇಕಾದ ಜಲ್ಲಿ, ಡಾಂಬರು ಇತರೆ ವಸ್ತುಗಳ ಪ್ರಮಾಣವನ್ನು ಪರಿಶೀಲಿಸಲಾಗುತ್ತಿತ್ತು. ಆದರೆ ಈಗಿನ ಹಲವು ಇಂಜಿನಿಯರ್‌ಗಳು ಸುಳ್ಳು ಬಿಲ್ ನೀಡಿ, ಹಣ ಪಡೆಯುತ್ತಿದ್ದಾರೆ. ಲೋಕೋಪಯೋಗಿ ಇಲಾಖೆ ಮಾತ್ರವಲ್ಲ ಸಣ್ಣ ನೀರಾವರಿ ಇಲಾಖೆಯಲ್ಲೂ ಅವ್ಯವಸ್ಥೆ ಇದೆ. 5 ಲಕ್ಷ ರೂ. ಕೆಲಸಕ್ಕೆ 10 ಲಕ್ಷ ರೂ. ಬಿಲ್ಲು ಪಡೆಯುತ್ತಿದ್ದಾರೆ. ಇದಕ್ಕೆಲ್ಲಾ ಸರ್ಕಾರ ಕಡಿವಾಣ ಹಾಕಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರು ಆಗ್ರಹಪಡಿಸಿದರು.

ಮೈಸೂರಿನ ಹಲವೆಡೆ ದಾಖಲೆ ಮಳೆಯಾಗಿದೆ. ಜಯಪುರದ ಬಳಿ ನೀರಿನ ರಭಸಕ್ಕೆ ದ್ವಿಚಕ್ರ ವಾಹನ ಸಮೇತ ವ್ಯಕ್ತಿಯೊಬ್ಬರು ಕೊಚ್ಚಿಹೋಗಿ, ಮೃತಪಟ್ಟರು. ಅವರ ಕುಟುಂಬದವರಿಗೆ ಸರ್ಕಾರದ ವತಿಯಿಂದ 5 ಲಕ್ಷ ರೂ. ತುರ್ತು ಪರಿಹಾರ ನೀಡಲಾಗಿದೆ. ಹಾಗೆಯೇ ಮಳೆಯಿಂದ ಸಾವಿರಾರು ಎಕರೆ ಬೆಳೆ ನಷ್ಟವಾಗಿದ್ದು, ಪರಿಹಾರ ನೀಡಬೇಕಿದೆ. ಕ್ಷೇತ್ರದ 92 ಶಾಲಾ ಕಟ್ಟಡಕ್ಕೆ ಹಾನಿಯಾಗಿದ್ದು, ಶಿಕ್ಷಣ ಸಚಿವರು ಘೋಷಿಸಿರುವ ಅನುದಾನ ಯಾವುದಕ್ಕೂ ಸಾಲುವುದಿಲ್ಲ. ಹಾನಿಯಾಗಿರುವ ಸೇತುವೆಗಳ ದುರಸ್ತಿಗೆ ಕನಿಷ್ಠ ತಲಾ 50 ಲಕ್ಷದಿಂದ ಕೋಟಿ ರೂ. ಬೇಕಾಗಿದೆ. ಹಾಗಾಗಿ ಕ್ಷೇತ್ರದ ಹಾನಿ ಬಗ್ಗೆ ಸಮೀಕ್ಷೆ ಮಾಡಿ ಪರಿಹಾರ ಕಾರ್ಯಕ್ಕೆ ತುರ್ತಾಗಿ ಅನುದಾನ ಬಿಡುಗಡೆ ಮಾಡುವಂತೆ ಕೋರಿದರು.

ಹಾಜರಾತಿ ಕೊರತೆ ಹಿನ್ನೆಲೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನಿರಾಕರಣೆ: ವಿದ್ಯಾರ್ಥಿಗಳ ಪ್ರತಿಭಟನೆ

ಮೈಸೂರು, ಸೆ.15– ಪರೀಕ್ಷೆ ಬರೆಯಲು ಅವಕಾಶ ನೀಡಿಲ್ಲ ಎಂದು ಆರೋಪಿಸಿ ಯುವರಾಜ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜಿನ ಮುಂಭಾಗ ಗುರುವಾರ ಮಧ್ಯಾಹ್ನ ಪ್ರತಿಭಟನೆ ನಡೆಸಿದರು. 2ನೇ ವರ್ಷದ ಬಿ.ಎಸ್ಸಿ, ಬಿ.ಸಿಎ ವಿದ್ಯಾರ್ಥಿಗಳಿಗೆ ಇಂದು ಪರೀಕ್ಷೆ ಇತ್ತು. 200ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಕನಿಷ್ಠ ಹಾಜರಾತಿ ಇಲ್ಲವೆಂದು ಕಾಲೇಜಿನ ಆಡಳಿತ ಮಂಡಳಿಯು ಪರೀಕ್ಷೆ ಬರೆಯಲು ಅವಕಾಶ ನೀಡಿರಲಿಲ್ಲ.

ಈ ವೇಳೆ ಕಾಲೇಜಿನ ಮುಂಭಾಗ ಜಮಾಯಿಸಿದ ಇಂತಹ ವಿದ್ಯಾರ್ಥಿಗಳು ಆಡಳಿತ ಮಂಡಳಿ ವಿರುದ್ಧ ಘೋಷಣೆ ಕೂಗಿ, ಪ್ರತಿಭಟನೆ ನಡೆಸಿದರು. ನಂತರ ಈ ಎಲ್ಲಾ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಕಾಲೇಜಿನ ಆಡಳಿತ ಮಂಡಳಿ ಅವಕಾಶ ಕಲ್ಪಿಸಿದೆ. ಈ ವೇಳೆ ಪ್ರತಿಭಟನಾನಿರತ ವಿದ್ಯಾರ್ಥಿ ಮಾತನಾಡಿ, ಇಂದು ನಮಗೆ ಬೆಳಗ್ಗೆ ಇಂಗ್ಲಿಷ್ ಮತ್ತು ಮಧ್ಯಾಹ್ನ ಭೌತಶಾಸ್ತ್ರ ವಿಷಯ ಪರೀಕ್ಷೆ ಇತ್ತು. ನಮಗೆ ಪರೀಕ್ಷೆ ಬರೆಯಲು ಅವಕಾಶ ನೀಡಿರಲಿಲ್ಲ. ಪ್ರತಿಭಟನೆ ನಂತರ ಅವಕಾಶ ಮಾಡಿಕೊಟ್ಟಿದ್ದಾರೆ ಎಂದರು.

ಸರ್ಕಾರದ ನಿಯಮದಂತೆ ವಿದ್ಯಾರ್ಥಿಗಳು ಎಲ್ಲಾ ವಿಷಯದಲ್ಲಿ ಶೇ.75ರಷ್ಟು ಹಾಜರಾತಿ ಹೊಂದಿದ್ದರೆ ಮಾತ್ರ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು. ಪ್ರತಿಭಟನೆ ಮಾಡುತ್ತಿರುವ ವಿದ್ಯಾರ್ಥಿಗಳು ಕೆಲ ವಿಷಯ ಮತ್ತು ಪ್ರಾಕ್ಟಿಕಲ್‌ನಲ್ಲಿ ಹಾಜರಾತಿ ಹೊಂದಿದ್ದಾರೆ. ಆದರೆ, ಇಂಗ್ಲಿಷ್,ಭೌತಶಾಸ್ತ್ರ ವಿಷಯಗಳಲ್ಲಿ ನಿಗದಿತ ಪ್ರಮಾಣದ ಹಾಜರಾತಿ ಹೊಂದಿಲ್ಲದ ಕಾರಣ ಅವರಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಿಲ್ಲ ಎಂದು ಕಾಲೇಜಿನ ಆಡಳಿತ ಮಂಡಳಿ ತಿಳಿಸಿದೆ.

ಸೆ.18, ಸಹಕಾರ ಸಂಘದ ಸಭೆ

ಮೈಸೂರು,ಸೆ.15–ಶ್ರೀ ಗುರುಮಲ್ಲೇಶ್ವರ ಪದವೀಧರರ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಸೆ.18ರಂದು ಬೆಳಗ್ಗೆ 11 ಗಂಟೆಗೆ ಚನ್ನಮ್ಮ ಚನ್ನಬಸವಪ್ಪ ಕಲ್ಯಾಣ ಮಂಟಪದ ಪಕ್ಕದಲ್ಲಿ ಸಂಘದ ಅಧ್ಯಕ್ಷ ಅಶ್ವಿನ್ ಆರ್. ಪಾಳೇಗಾರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಲಾರಿಗೆ ಡಿಕ್ಕಿ ಹೊಡೆದು ಸ್ಕೂಟರ್ ಸವಾರ ಸಾವು

ಮೈಸೂರು, ಸೆ.15(ಎಂಕೆ)– ರಸ್ತೆಬದಿಯಲ್ಲಿ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.



ಮೈಸೂರಿನ ಹೆಬ್ಬಾಳ ಕಾಲೋನಿ ನಿವಾಸಿ ಮುರುಗೇಶ(42) ಮೃತ ವ್ಯಕ್ತಿ. ಇವರು ನಿನ್ನೆ(ಸೆ.14) ಸಂಜೆ 7.30ರ ಸುಮಾರಿಗೆ ಸ್ಕೂಟರ್(ಕೆಎ.09.ಹೆಚ್.ಡಬ್ಲ್ಯೂ.9302)ನಲ್ಲಿ ಹಿನಕಲ್ ಕಡೆಯಿಂದ ಹೆಬ್ಬಾಳ ಕಡೆಗೆ ರಿಂಗ್‌ರಸ್ತೆಯಲ್ಲಿ ಬರುತ್ತಿದ್ದ ವೇಳೆ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಲಾರಿ(ಕೆಎ.17.ಸಿ.7113)ಗೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಮುರುಗೇಶನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ಅಸುನೀಗಿದ್ದಾರೆ. ನೋ ಪಾರ್ಕಿಂಗ್ ಸ್ಥಳದಲ್ಲಿ ಲಾರಿ ನಿಲ್ಲಿಸಲಾಗಿತ್ತು ಎಂದು ವಿವಿ ಪುರಂ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ವಿವಿ ಪುರಂ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರ್ವಕಾಲಕ್ಕೂ ಸರ್ ಎಂ.ವಿಶ್ವೇಶ್ವರಯ್ಯ ಪ್ರಸ್ತುತ



ಮಂಡ್ಯ, ಸೆ.15– ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ ಅವರ ಅಚ್ಚುಕಟ್ಟುತನ, ಪ್ರಾಮಾಣಿಕತೆ, ಬದ್ಧತೆಯನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅವಶ್ಯಕ ಎಂದು ಮಾಜಿ ಸಚಿವ ಎಂ.ಎಸ್.ಆತ್ಮಾನಂದ ಪ್ರತಿಪಾದಿಸಿದರು.

ಡಾ.ರಾಜೇಂದ್ರಪ್ರಸಾದ್ ಸ್ಮಾರಕ ಶಿಕ್ಷಣ ಸಂಸ್ಥೆ, ಕಾಳೇಗೌಡ ಪ್ರೌಢಶಾಲೆ ವತಿಯಿಂದ ನಡೆದ ಸರ್ ಎಂ.ವಿಶ್ವೇಶ್ವರಯ್ಯ ಅವರ 161ನೇ ಜನ್ಮದಿನದ ಅಂಗವಾಗಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ವಿರುವ ವಿಶ್ವೇಶ್ವರಯ್ಯ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ವಿಶ್ವೇಶ್ವರಯ್ಯನವರು ಸರ್ವಕಾಲಕ್ಕೂ ಪ್ರಸ್ತುತರಾಗಿರುವವರು. ವಿಶ್ವ ಕಂಡ ಇಂಜಿನಿಯರ್ ಆಗಿ ಮೈಸೂರು ಸಂಸ್ಥಾನವನ್ನು ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಸರ್ವತೋಮುಖ ಅಭಿವೃದ್ಧಿಗೆ ನಾಂದಿ ಹಾಡಿದವರು ಎಂದು ಬಣ್ಣಿಸಿದರು.

ಕರ್ನಾಟಕ ಮಾತ್ರವಲ್ಲದೆ, ನೆರೆ ರಾಜ್ಯಗಳಾದ ಮಹಾರಾಷ್ಟ್ರ, ಹೈದರಾಬಾದ್ ಸೇರಿದಂತೆ ನೆರೆ ರಾಷ್ಟ್ರಗಳಲ್ಲೂ ಸಹ ತಮ್ಮ ಬುದ್ಧಿಮತ್ತೆಯನ್ನು ಮೆರೆದಿದ್ದಾರೆ. ಹಲವಾರು ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಅವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸಿದ್ದಾರೆ ಎಂದರು. ನಮ್ಮ ನಾಡಿನಲ್ಲಿ ಕಾವೇರಿ ತಾಯಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ವಿಶ್ವೇಶ್ವರಯ್ಯನವರ ಅನ್ನದಾತರ ಸಾಲಿನಲ್ಲಿ ನಿಲ್ಲುತ್ತಾರೆ. ಅವರನ್ನು ನಿತ್ಯ ಸ್ಮರಣೆ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದರು.

ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ನಾಗರತ್ನ, ಆಡಳಿತಾಧಿಕಾರಿ ಚಂದ್ರಪ್ರಭ, ಮುಖ್ಯ ಶಿಕ್ಷಕ ಗೋವಿಂದರಾಜು ಮತ್ತಿತರರಿದ್ದರು.

ಆಸರೆ ಸೇವಾ ಟ್ರಸ್ಟ್‌ನಿಂದ ಸರ್‌ಎಂವಿ ಜನ್ಮ ದಿನಾಚರಣೆ

ಭಾರತೀನಗರ, ಸೆ.15– ಭಾರತೀನಗರದ ಆಸರೆ ಸೇವಾ ಟ್ರಸ್ಟ್ ಕಚೇರಿಯಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಅವರ ಜನ್ಮದಿನ ಆಚರಿಸಲಾಯಿತು.

ಹಿರಿಯ ಗ್ರಂಥಪಾಲಕ ಚಂದೂಪುರದ ಸುರೇಂದ್ರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರ್.ಎಂ.ವಿಶ್ವೇಶ್ವರಯ್ಯನವರು ರಾಜ್ಯದ ಅಭಿವೃದ್ಧಿಗಾಗಿ, ಜನತೆ ಏಳಿಗೆಗೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಲ್ಲದೆ ಇಂದಿನ ಯುವ ಪೀಳಿಗೆಗೆ ದಾರಿದೀಪವಾಗಿದ್ದಾರೆ. ಸರ್‌ಎಂವಿ ಅವರು ಕೇವಲ ಕಟ್ಟಡ ಮತ್ತು ಅಣೆಕಟ್ಟೆಯನ್ನು ಕಟ್ಟಿಲ್ಲ. ಅದೆಷ್ಟೋ ಜನರ ಬದುಕನ್ನು ನಿರ್ಮಿಸಿಕೊಟ್ಟಿದ್ದಾರೆ ಎಂದರು.

ಇದೇ ವೇಳೆ ಆಸರೆ ಸೇವಾ ಟ್ರಸ್ಟ್ ಅಧ್ಯಕ್ಷ ರಘು, ರಂಗಭೂಮಿ ಕಲಾವಿದರ ಸಂಘದ ಹೋಬಳಿ ಅಧ್ಯಕ್ಷ ತೊರೆಚಾಕನಹಳ್ಳಿ ಶಂಕರೇಗೌಡ, ಶಶಿ, ಅಣ್ಣೂರು ಸತೀಶ್, ರಂಜಿತ್, ಕರಡಕೆರೆ ಯೋಗೇಶ್, ಗೌಡಯ್ಯನ ದೊಡ್ಡಿ ತಿಮ್ಮೇಗೌಡ, ಬೋರೇಗೌಡ, ತೊರೆಬೊಮ್ಮನಹಳ್ಳಿ ಸಂತೋಷ್, ಅಭಿಷೇಕ್, ದೇವೇಗೌಡನದೊಡ್ಡಿ ಸುನೀಲ್, ಮನು ಸೇರಿದಂತೆ ಹಲವರಿದ್ದರು. ಕಾರ್ಯಕ್ರಮದ ನಂತರ ಹಲಗೂರು ವೃತ್ತದ ವಿಶ್ವೇಶ್ವರಯ್ಯ ಪುತ್ಥಳಿಗೆ ಪುಷ್ಪನಮನ ಸಲ್ಲಿಸಲಾಯಿತು.

ನಾಳೆ ವಿಶ್ವಕರ್ಮ ಜಯಂತಿ

ಕೆ.ಆರ್.ಪೇಟೆ, ಸೆ.15– ತಾಲೂಕು ಆಡಳಿತದಿಂದ ಸೆ.17ರಂದು ಶನಿವಾರ ಬೆಳಗ್ಗೆ 10 ಗಂಟೆಗೆ ವಿಶ್ವಕರ್ಮ ಜಯಂತಿ ಹಮ್ಮಿಕೊಳ್ಳಲಾಗಿದೆ. ಸಚಿವ ನಾರಾಯಣಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ತಾಲೂಕು ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎನ್.ಕುಮಾರಸ್ವಾಮಿ ಸೇರಿದಂತೆ ತಾಲೂಕಿನ ವಿವಿಧ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವರು. ಹಾಗಾಗಿ ತಾಲೂಕಿನ ವಿಶ್ವಕರ್ಮ ಸಮುದಾಯದ ಹಾಗೂ ಇತರೆ ಸಮುದಾಯ ಎಲ್ಲಾ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ತಾಲೂಕು ವಿಶ್ವಕರ್ಮ ಸಮುದಾಯದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪ್ರೆಸ್ ಕುಮಾರಸ್ವಾಮಿ ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ನೀಟ್ ಪರೀಕ್ಷೆ; ಯತೀಂದ್ರಗೆ 7409ನೇ ರ್‍ಯಾಂಕ್

ಶ್ರೀರಂಗಪಟ್ಟಣ, ಸೆ.15– ತಾಲೂಕಿನ ಪಾಲಹಳ್ಳಿಯ ಪಿ.ಎಂ.ಯತೀಂದ್ರ ಅವರು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ(ನೀಟ್)ಯಲ್ಲಿ 7409ನೇ ರ್‍ಯಾಂಕ್ ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ.



ಯತೀಂದ್ರ ಅವರು 720 ಅಂಕಗಳಿಗೆ 637ಅಂಕ ಪಡೆದಿದ್ದಾರೆ. ಇವರು ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜಿನಲ್ಲಿ ಪಿಯುಸಿ ಮುಗಿಸಿದ್ದು, ಶೇ.94.2 ಅಂಕ ಪಡೆದಿದ್ದರು. ಅದೇ ಕಾಲೇಜಿನಲ್ಲಿ ನೀಟ್‌ಗೆ ತರಬೇತಿಯನ್ನು ಪಡೆದಿದ್ದರು.

ಪಾಂಡವಪುರದ ಬಡ್ಸ್ ಫೌಂಡೇಷನ್ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡಿ, ಶೇ.94ರಷ್ಟು ಅಂಕ ಗಳಿಸಿದ್ದರು. ಈತ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಕುಸ್ತಿಪಟು ಪೈಲ್ವಾನ್ ಮುಕುಂದ ಅವರ ಪುತ್ರರಾಗಿದ್ದಾರೆ. ಯತೀಂದ್ರ ಅವರನ್ನು ಪಾಲಹಳ್ಳಿ ಗ್ರಾಮಸ್ಥರು ಅಭಿನಂದಿಸಿದ್ದಾರೆ. ವೈದ್ಯನಾಗಿ ಬಡಜನರ ಸೇವೆ ಮಾಡಬೇಕು ಎಂದುಕೊಂಡಿದ್ದೇನೆ. ಉತ್ತಮ ರ್‍ಯಾಂಕ್ ಬಂದಿರುವುದರಿಂದ ಮೈಸೂರು ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಗುವ ವಿಶ್ವಾಸವಿದೆ ಎಂದು ಯತೀಂದ್ರ ಹೇಳಿದರು.

ಮಕ್ಕಳ ಪ್ರತಿಭೆ ಗುರುತಿಸಿ, ಪ್ರೋತ್ಸಾಹಿಸಲು ಸಲಹೆ

ನಾಗಮಂಗಲ, ಸೆ.15– ಶಿಕ್ಷಕರು ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಬೇಕು ಎಂದು ಲಾಳನಕೆರೆ ಗ್ರಾಪಂ ಅಧ್ಯಕ್ಷ ಚೇತನ್ ಸಲಹೆ ನೀಡಿದರು.



ತಾಲೂಕಿನ ಬಿಂಡಿಗನವಿಲೆ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಹೋಬಳಿ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಓದಿನ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ತಮ್ಮಲ್ಲಿರುವ ಪ್ರತಿಭೆಯ ಮೂಲಕ ಜೀವನವನ್ನು ವಿದ್ಯಾರ್ಥಿಗಳು ಉತ್ತಮವಾಗಿ ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಇದೇ ವೇಳೆ ವಿದ್ಯಾರ್ಥಿಗಳು ವೀರಗಾಸೆ, ರಂಗೋಲಿ ಬಿಡಿಸುವ ಸ್ಪರ್ಧೆ, ನಾಟಕ, ಮತ್ತು ನೃತ್ಯ ರೂಪಕಗಳನ್ನು ಪ್ರದರ್ಶಿಸಿದರು. ಯುವ ಮುಖಂಡ ಚೇತನ್, ಶಿವರಾಮೇಗೌಡ ಅವರು ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು. ಕಾರ್ಯಕ್ರಮದಲ್ಲಿ ಬಿ.ವಿ.ಸತ್ಯನ್, ನಾರಾಯಣಗೌಡ, ತಮ್ಮಣ್ಣಗೌಡ ಇದ್ದರು.

ಸೆ.18, ಮಾಜಿ ಶಾಸಕ ದಿ.ಕೆಂಪೇಗೌಡರ ನುಡಿನಮನ

ಪಾಂಡವಪುರ, ಸೆ.15– ಮಾಜಿ ಶಾಸಕ ದಿವಂಗತ ಕೆ.ಕೆಂಪೇಗೌಡರ 11ನೇ ದಿನದ ಕಾರ್ಯ ಹಾಗೂ ನುಡಿನಮನ ಕಾರ್ಯಕ್ರಮ ಸೆ.18ರಂದು ನಡೆಯಲಿದೆ ಎಂದು ಹೇಮಾವತಿ ಜಲಾಶಯ ಯೋಜನ ಮಟ್ಟದ ನೀರು ಬಳಕೆದಾರ ಸಹಕಾರ ಮಹಾಮಂಡಳಿ ಅಧ್ಯಕ್ಷ ಆರ್.ಸಿ.ನಾಗಣ್ಣ ತಿಳಿಸಿದರು.



ಪಟ್ಟಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಂಡವಪುರ ಕ್ಷೇತ್ರದಲ್ಲಿ 3 ಬಾರಿ ಶಾಸಕರಾಗಿ ಆಯ್ಕೆಯಾಗಿ ಕ್ಷೇತ್ರವನ್ನು ಮಾದರಿಯಾಗಿ ಅಭಿವೃದ್ಧಿಪಡಿಸಿದ್ದ ಕೆ.ಕೆಂಪೇಗೌಡರು ಸೆ.8ರಂದು ನಿಧನರಾಗಿದ್ದರು. ಅವರ 11ನೇ ದಿನದ ಕಾರ್ಯ ಹಾಗೂ ನುಡಿನಮನ ಮತ್ತು ಗೀತನಮನ ಸೆ.18ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದರು.

ಹಿಂದಿ ದಿವಸ್ ಆಚರಣೆಗೆ ವಿರೋಧ



ಮದ್ದೂರು, ಸೆ.15– ಕೇಂದ್ರ ಸರ್ಕಾರವು ಜಾರಿಗೊಳಿಸಲು ಮುಂದಾಗಿರುವ ಹಿಂದಿ ದಿವಸ್ ಆಚರಣೆಯನ್ನು ವಿರೋಧಿಸಿ ಪಟ್ಟಣದ ತಾಲೂಕು ಕಚೇರಿಯ ಮುಂಭಾಗ ತಾಲೂಕು ಜೆಡಿಎಸ್ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ದೇಶವು ಸಾವಿರಾರು ಭಾಷೆ ಹಾಗೂ ಉಪ ಭಾಷೆಗಳನ್ನು ಒಳಗೊಂಡಿದೆ. ಸುಮಾರು 560ಕ್ಕೂ ಹೆಚ್ಚು ಸಂಸ್ಥಾನಗಳು ಸೇರಿ ದೇಶವು ರಚನೆಯಾಗಿದೆ. ಹೀಗಾಗಿ ಸಾಮಾಜಿಕ, ಸಾಂಸ್ಕೃತಿಕವಾಗಿ ಭಿನ್ನ ಆಚರಣೆಗಳನ್ನು ಹೊಂದಿರುವ ನಮ್ಮ ದೇಶದಲ್ಲಿರುವ ಪ್ರತಿಯೊಂದು ರಾಜ್ಯಗಳಲ್ಲೂ ತನ್ನದೇ ಆದ ವಿಶೇಷತೆ ಹಾಗೂ ಭಾಷಾ ಪ್ರಾಧಾನ್ಯತೆ ಹೊಂದಿದ್ದರು, ಕೇಂದ್ರ ಸರ್ಕಾರ ಸೆ.14 ರಂದು ಹಿಂದಿ ದಿವಸ್ ಆಚರಣೆಗೆ ಎಲ್ಲಾ ರಾಜ್ಯಗಳ ಮೇಲೂ ಒತ್ತಡ ಹೇರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಪುರಸಭಾಧ್ಯಕ್ಷ ಸುರೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಸನ್ನ, ಸದಸ್ಯರಾದ ಆದಿಲ್, ವನಿತಾ, ತನುಜಾ, ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡ ವಾಹನ ಹಿಂಪಡೆಯಲು ಅವಕಾಶ

ಮೇಲುಕೋಟೆ, ಸೆ.15– ಇಲ್ಲಿನ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ವಿವಿಧ ಅಪರಾಧ ಪ್ರಕರಣಗಳಲ್ಲಿ ವಶಕ್ಕೆ ಪಡೆದಿರುವ ವಾಹನಗಳನ್ನು ಪಡೆಯಲು ಮಾಲೀಕರಿಗೆ ಅಂತಿಮ ಅವಕಾಶ ನೀಡಲಾಗಿದೆ ಎಂದು ಮೇಲುಕೋಟೆ ಠಾಣೆಯ ಇನ್‌ಸ್ಪೆಕ್ಟರ್ ಸುಮಾರಾಣಿ ತಿಳಿಸಿದ್ದಾರೆ. ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅಪಘಾತ ಪ್ರಕರಣಗಳಲ್ಲಿ ವಶಪಡಿಸಿಕೊಂಡಿರುವ ವಾಹನಗಳ ಮಾಲೀಕರು ಪತ್ತೆಯಾಗದ ಕಾರಣ ಮತ್ತೊಮ್ಮೆ ಅಂತಿಮ ಅವಕಾಶ ನೀಡಲಾಗಿದೆ.

ವಾಹನಗಳ ಮಾಲೀಕರು ತಕ್ಷಣ ಪೊಲೀಸ್ ಠಾಣೆ ಸಂಪರ್ಕಿಸಿ ವಶಪಡಿಸಿಕೊಂಡಿರುವ ತಮ್ಮ ವಾಹನ ಪಡೆದುಕೊಳ್ಳಬೇಕು. ಇಲ್ಲವಾದಲ್ಲಿ ಸ್ಕ್ರಾಪ್ ವಸ್ತುಗಳೆಂದು ಪರಿಗಣಿಸಿ ಹರಾಜು ಮಾಡಲು ಕ್ರಮವಹಿಸಲಾಗುತ್ತದೆ ಎಂದು ಸುಮಾರಾಣಿ ತಿಳಿಸಿದ್ದಾರೆ.

ಡೇರಿ ಅಭಿವೃದ್ಧಿಗೆ ಸಹಕರಿಸಲು ರೈತರಿಗೆ ಸಲಹೆ



ಕಿಕ್ಕೇರಿ, ಸೆ.15– ರೈತರು ಡೇರಿಗೆ ಶುದ್ಧ ಹಾಲು ನೀಡುವ ಮೂಲಕ ಡೇರಿಯ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನ್‌ಮುಲ್ ನಿರ್ದೇಶಕ ಡಾಲು ರವಿ ಸಲಹೆ ನೀಡಿದರು. ಹೋಬಳಿಯ ಗೂಡೆಹೊಸಹಳ್ಳಿ ಗ್ರಾಮದಲ್ಲಿ ನಡೆದ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯು ರಾಜ್ಯದಲ್ಲಿ ಹೆಚ್ಚು ಹಾಲು ಸರಬರಾಜು ಮಾಡುವ ಜಿಲ್ಲೆಯಾಗಿದೆ. ಪ್ರತಿ ಮನೆಯಲ್ಲಿ ರಾಸುಗಳು ಇರುವುದು ಸ್ವಾವಲಂಬಿಗಳಾಗಿ ಬದುಕಲು ಸಹಕಾರಿಯಾಗಿದೆ ಎಂದರು. ಇದೇ ವೇಳೆ ಡೇರಿಗೆ ಹೆಚ್ಚು ಹಾಲು ವಿತರಿಸಿದ ರೈತರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮನ್‌ಮುಲ್ ಮಾಜಿ ಅಧ್ಯಕ್ಷ ಚನ್ನಿಂಗೇಗೌಡ, ಸಂಘದ ಅಧ್ಯಕ್ಷ ಚಂದೇಗೌಡ, ಉಪಾಧ್ಯಕ್ಷ ಸುರೇಶ್, ನಿರ್ದೇಶಕರಾದ ಪುಟ್ಟೇಗೌಡ, ಕೃಷ್ಣೇಗೌಡ, ಮಂಜೇಗೌಡ, ಚನ್ನೇಗೌಡ, ಜಯರಾಂ, ಮಂಜಯ್ಯ, ವಿನೋದ್ ಇರರರಿದ್ದರು.

ಕೆಂಪೇಗೌಡರ ನಿರ್ಮಾಣದ ಬೆಂಗಳೂರು ಸುಭದ್ರ



ಶ್ರೀರಂಗಪಟ್ಟಣ, ಸೆ.15– ನಾಡಪ್ರಭು ಕೆಂಪೇಗೌಡ ಅವರು ನಿರ್ಮಿಸಿದ ಬೆಂಗಳೂರು ಸುಭದ್ರವಾಗಿದ್ದು, ಎಷ್ಟೇ ಮಳೆಯಾದರೂ ಕೆಂಪೇಗೌಡರ ಬೆಂಗಳೂರು ಮುಳುಗುವುದಿಲ್ಲ ಎಂದು ಕಾಂಗ್ರೆಸ್ ಮುಖಂಡ ಹಾಗೂ ಕೆಂಪೇಗೌಡ ಜಯಂತಿ ಆಚರಣೆ ಸಮಿತಿಯ ಗೌರವಾಧ್ಯಕ್ಷರೂ ಆದ ಪಾಲಹಳ್ಳಿ ಚಂದ್ರಶೇಖರ್ ಹೇಳಿದರು.

ಇತ್ತೀಚೆಗೆ ನಡೆದ ನಾಡಪ್ರಭು ಕೆಂಪೇಗೌಡ ಅವರ 513ನೇ ಜಯಂತಿ ಕಾರ್ಯಕ್ರಮದ ಖರ್ಚು ವೆಚ್ಚಗಳ ಕುರಿತು ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಲೆಕ್ಕ ಪರಿಶೋಧನಾ ಸಭೆಯಲ್ಲಿ ಮಾತನಾಡಿದ ಅವರು, ಹಲವು ದಿನಗಳಿಂದ ಬೆಂಗಳೂರಿನಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಗೆ ಬೆಂಗಳೂರು ಮುಳುಗುತ್ತಿದೆ ಎಂದು ಅನೇಕರು ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ, ನಾಡಪ್ರಭು ಕೆಂಪೇಗೌಡ ಅವರು ದೂರ ದೃಷ್ಟಿಯಿಂದ ನಿರ್ಮಿಸಿರುವ ಬೆಂಗಳೂರಿನಲ್ಲಿ ಇನ್ನೂ ಒಂದು ತಿಂಗಳು ನಿರಂತರವಾಗಿ ಮಳೆ ಬಿದ್ದರೂ ಯಾವುದೇ ಕಾರಣಕ್ಕೂ ಮುಳುಗುವುದಿಲ್ಲ ಎಂದರು.

ಕಾಲ ಬದಲಾದಂತೆ ಬೆಂಗಳೂರು ಅಭಿವೃದ್ಧಿ ಹೊಂದಿ ನೂರಾರು ಹಳ್ಳಿಗಳನ್ನು ಸೇರಿಸಿಕೊಂಡಿದೆ. ಈ ಹಳ್ಳಿಗಳಲ್ಲಿ ಮಾತ್ರ ಮಳೆಯ ನೀರು ತುಂಬಿಕೊಂಡು ಅವಾಂತರ ಸೃಷ್ಟಿಸುತ್ತಿರುವುದು. ಇದಕ್ಕೆ ಪ್ರಮುಖ ಕಾರಣ ಅವೈಜ್ಞಾನಿಕ ನಗರ ನಿರ್ಮಾಣ ಮಾಡಿರುವುದಾಗಿದೆ ಎಂದು ದೂರಿದರು.

ಪುರಸಭೆ ಸದಸ್ಯ ಎಂ.ನಂದೀಶ್ ಆಯವ್ಯಯ ಮಂಡಿಸಿದರು. ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ಪೈಲ್ವಾನ್ ಮುಕುಂದ ಮಾತನಾಡಿದರು. ಸಭೆಯಲ್ಲಿ ಒಕ್ಕಲಿಗರ ಸಂಘದ ತಾಲೂಕು ಅಧ್ಯಕ್ಷ ಚಂದ್ರಶೇಖರ್, ಸಂಘದ ಖಜಾಂಚಿ ಶಿವಸ್ವಾಮಿ, ನಿರ್ದೇಶಕರಾದ ಎಂ.ನಂದೀಶ್, ಪತ್ರಕರ್ತ ಮಂಜು, ಪುರಸಭೆ ಸದಸ್ಯ ಪ್ರಕಾಶ್, ಮುಖಂಡರಾದ ದೇವರಾಜು, ಸ್ವಾಮಿಗೌಡ, ಸುರೇಶ್, ಎಂ.ಎಲ್.ದಿನೇಶ್, ನಿಂಗೇಗೌಡ, ದರ್ಶನ್ ಲಿಂಗರಾಜು, ಗುರು, ಸಾಯಿಕುಮಾರ್, ಯೋಗಣ್ಣ, ಶಂಕರ್, ಶ್ರೀಧರ್, ಸುಕೇಶ್, ಸಂದೇಶ್, ಬೆಳಗೊಳ ಸುರೇಶ್, ಎಂ.ಬಿ.ಕುಮಾರ್ ಸೇರಿದಂತೆ ಹಲವರಿದ್ದರು.

ಮೈಸೂರು ದಸರಾ ಮಹೋತ್ಸವ-2022

ಮೈಸೂರಿನ ಪ್ರಮುಖ ರಸ್ತೆಗಳಿಗೆ ಡಾಂಬರೀಕರಣ ಆರಂಭ

4 ದಿನ ಮಳೆ ಬಿಡುವು ಮುನ್ಸೂಚನೆ, ಮತ್ತೆ ಮಳೆ ಆರಂಭವಾದಲ್ಲಿ ಕೇವಲ ಗುಂಡಿ ಮುಚ್ಚುವ ಕೆಲಸ ಮುಂದುವರಿಕೆ





ಮೈಸೂರು, ಸೆ.15(ಆರ್‌ಕೆ)–ಸದ್ಯಕ್ಕೆ ಮಳೆ ಬಿಡುವು ನೀಡಿರುವುದರಿಂದ ಮೈಸೂರಿನ ಪ್ರಮುಖ ರಸ್ತೆಗಳ ಡಾಂಬರೀಕರಣ ಕಾಮಗಾರಿಯನ್ನು ಮಹಾನಗರ ಪಾಲಿಕೆ, ಕಡೆಗೂ ಆರಂಭಿಸಿದೆ.

ಮೈಸೂರಿನ ಅರಮನೆ ಸುತ್ತಲ ಹಾಗೂ ಹೃದಯ ಭಾಗದ ಪ್ರಮುಖ ರಸ್ತೆಗಳೂ ಸೇರಿದಂತೆ ನಗರದಾದ್ಯಂತ ಬಹುತೇಕ ಎಲ್ಲಾ ರಸ್ತೆಗಳೂ ಗುಂಡಿ ಬಿದ್ದಿದ್ದವು. ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ಮತ್ತಷ್ಟು ಹಾಳಾಗಿ, ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗಿತ್ತು. ಇದೀಗ ದಸರಾ ಸಮೀಪಿಸುತ್ತಿದ್ದು, ಉದ್ಘಾಟನೆಗಾಗಿ ರಾಷ್ಟ್ರಪತಿಗಳೇ ಮೈಸೂರಿಗೆ ಬಂದು ವಾಸ್ತವ್ಯ ಹೂಡುತ್ತಿರುವುದರಿಂದ ಮೈಸೂರು ಮಹಾನಗರ ಪಾಲಿಕೆ, ಮುಡಾ ಹಾಗೂ ಲೋಕೋಪಯೋಗಿ ಇಲಾಖೆಯು, ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಏಕ ಕಾಲದಲ್ಲಿ ಕೈಗೆತ್ತಿಕೊಂಡಿವೆ.

ನಾಲ್ಕು ದಿನಗಳ ಕಾಲ ಮಳೆ ಇರುವುದಿಲ್ಲ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವುದರಿಂದ ಇಂದು ಏಳೆಂಟು ಪ್ರಮುಖ ರಸ್ತೆಗಳಲ್ಲಿ ಡಾಂಬರ್ ಹಾಕುವ ಕೆಲಸ ಆರಂಭವಾಗಿದೆ. ಕುವೆಂಪುನಗರದ ವಿಶ್ವ ಮಾನವ ಜೋಡಿ ರಸ್ತೆ, ಅಗ್ರಹಾರ ಸರ್ಕಲ್‌ನಿಂದ ಬಸವೇಶ್ವರ ರಸ್ತೆಗೆ ಕೂಡುವ ರಸ್ತೆ, ಎನ್.ಆರ್.ಮೊಹಲ್ಲಾದ ಫೋರಂ ಮಹಲ್ ಎದುರಿನ ರಸ್ತೆ ಸಬರ್ಬನ್ ಬಸ್ ನಿಲ್ದಾಣದ ಎದುರಿನ ರಸ್ತೆ, ಫೈವ್ ಲೈಟ್ ಸರ್ಕಲ್‌ನಿಂದ ಸಬರ್ಬನ್ ಬಸ್ ನಿಲ್ದಾಣದವರೆಗೆ, ಬಿ.ಎನ್.ರಸ್ತೆ ಸೇರಿದಂತೆ ಹಲವೆಡೆ ಮುಖ್ಯ ರಸ್ತೆಗಳಲ್ಲಿ ಡಾಂಬರ್ ಹಾಕುವ ಕೆಲಸ ಇಂದಿನಿಂದ ಆರಂಭವಾಗಿದೆ.

ನಾಲ್ಕು ದಿನಗಳವರೆಗೆ ಎಷ್ಟು ಸಾಧ್ಯವೋ ಅಷ್ಟು ರಸ್ತೆಗಳನ್ನು ಡಾಂಬರೀಕರಣ ಮಾಡುತ್ತೇವೆ. ಒಂದು ವೇಳೆ ಮತ್ತೆ ಮಳೆ ಆರಂಭವಾದಲ್ಲಿ ಡಾಂಬರೀಕರಣ ಸ್ಥಗಿತಗೊಳಿಸಿ, ಹೊಸ ತಂತ್ರಜ್ಞಾನ ಬಳಸಿ ರಸ್ತೆಗಳ ಗುಂಡಿ ಮುಚ್ಚುವ ಕೆಲಸವನ್ನು ಮುಂದುವರೆಸುತ್ತೇವೆ. ದಸರಾ ಒಳಗಾಗಿ ಮೈಸೂರಿನ ಎಲ್ಲಾ ರಸ್ತೆಗಳ ಗುಂಡಿ ಮುಚ್ಚಿ ಸಂಚಾರ ಸುಗಮಗೊಳಿಸಲಾಗುವುದು ಎಂದು ರಸ್ತೆ ಕಾಮಗಾರಿ ಪರಿಶೀಲಿಸಿದ ಮೇಯರ್ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.


ಕೆ.ಆರ್. ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ಹಾಗೂ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರು ರಸ್ತೆ, ಚರಂಡಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ತಲಾ 250 ಕೋಟಿ ರೂ. ಅನುದಾನ ತಂದಿದ್ದಾರೆ. ಎಲ್ಲಾ ಕಾಮಗಾರಿಗಳಿಗೂ ಕಾರ್ಯಾದೇಶ ನೀಡಲಾಗಿದ್ದು, ಕೆಲವು ಕೆಲಸಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಮಳೆಯಿಂದಾಗಿ ಕಾಮಗಾರಿಯನ್ನು ಆರಂಭಿಸಿರಲಿಲ್ಲ. ಈಗ ಎಲ್ಲವನ್ನೂ ಏಕ ಕಾಲದಲ್ಲಿ ಕೈಗೆತ್ತಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಪಾಲಿಕೆ ಕಮಿಷ್ನರ್ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು, ಪಾಲಿಕೆ, ಮುಡಾ ಮತ್ತು ಲೋಕೋಪಯೋಗಿ ಇಲಾಖೆಯಿಂದ ಇಂದು ಏಕ ಕಾಲದಲ್ಲಿ ರಸ್ತೆ ಕಾಮಗಾರಿಗಳನ್ನು ಆರಂಭಿಸಲಾಗಿದೆ. ಸುಮಾರು 200 ಕೋಟಿ ರೂಗಳ ಕೆಲಸಕ್ಕೆ ವರ್ಕ್ ಆರ್ಡರ್ ನೀಡಲಾಗಿದೆ. ಮಳೆ ಬಿಡುವು ಕೊಟ್ಟರೆ ದಸರಾ ಒಳಗಾಗಿ ಮೈಸೂರಿನ ಎಲ್ಲಾ ರಸ್ತೆಗಳ ಡಾಂಬರೀಕರಣ ಕೆಲಸವನ್ನು ಪೂರ್ಣಗೊಳಿಸುತ್ತೇವೆ ಎಂದರು. ಮೇಯರ್ ಹಾಗೂ ಕಮಿಷ್ನರ್ ಜಂಟಿಯಾಗಿ ಇಂದು ರಸ್ತೆ ಡಾಂಬರೀಕರಣ ಕಾಮಗಾರಿಗಳನ್ನು ಪರಿಶೀಲಿಸಿದರು.

ಅದೇ ರೀತಿ ಪಾಲಿಕೆಯಿಂದ ಜಂಬೂ ಸವಾರಿ ಮೆರವಣಿಗೆ ಸಾಗುವ ಸಯ್ಯಾಜಿರಾವ್ ರಸ್ತೆಯ ಬಂಬೂ ಬಜಾರ್ ಬಳಿ ಸ್ಲ್ಯಾಬ್‌ಗಳನ್ನು ಸ್ವಚ್ಛಗೊಳಿಸುವ ಕೆಲಸ ಭರದಿಂದ ಸಾಗಿದ್ದು, ವಿದ್ಯುದ್ದೀಪಾಲಂಕಾರ, ಹಸಿರು ಚಪ್ಪರಗಳಿಗೂ ಪೂರ್ವ ಸಿದ್ಧತಾ ಕೆಲಸ ಆರಂಭಿಸಲಾಗಿದೆ.

ದಸರಾ ಉತ್ಸವದ ಮೊದಲ ಯುವಜನಾಕರ್ಷಕ ಕಾರ್ಯಕ್ರಮ

ಇಂದಿನಿಂದ ಯುವ ಸಂಭ್ರಮ



ಮೈಸೂರು, ಸೆ.15(ಎಂಕೆ)– ಯುವ ಸಮೂಹದ ಕಾತುರ ಕೆರಳಿಸಿರುವ 'ಯುವ ಸಂಭ್ರಮ'ಕ್ಕೆ ಮಾನಸ ಗಂಗೋತ್ರಿ ಬಯಲು ರಂಗ ಮಂದಿರ ಸಜ್ಜಾಗಿದ್ದು, 9 ದಿನಗಳ ರಸದೌತಣಕ್ಕೆ ನಟ ಡಾಲಿ ಧನಂಜಯ ಶುಕ್ರವಾರ ಸಂಜೆ 5.30ಕ್ಕೆ ಚಾಲನೆ ನೀಡಲಿದ್ದಾರೆ.

'ಭಾರತ ಸ್ವಾತಂತ್ರ್ಯ ಚಳವಳಿ', 'ರಾಷ್ಟ್ರೀಯ ಭಾವೈಕ್ಯತೆ ಮತ್ತು ಪಾರಂಪರಿಕ ಅಸ್ಮಿತೆಗಳ ಸಂರಕ್ಷಣೆ', 'ಮಹಿಳಾ ಸಬಲೀಕರಣ ಮತ್ತು ಸಮಾನತೆ', 'ಕನ್ನಡ ಮತ್ತು ಸಂಸ್ಕೃತಿ, ಜಾನಪದ ಕಲೆ', 'ಪರಿಸರ ಸಂರಕ್ಷಣೆ ಮತ್ತು ಮಾನವ ನಿರ್ಮಿತ ಅಪತ್ತುಗಳು', 'ಸ್ವಚ್ಛ ಭಾರತ-ಸ್ವಚ್ಛ ಕರ್ನಾಟಕ, ಆರೋಗ್ಯ ಮತ್ತು ನೈರ್ಮಲ್ಯ ಸೇರಿದಂತೆ ಯುವಕ-ಯುವತಿಯರಲ್ಲಿ ಸಾಮಾಜಿಕ, ಧಾರ್ಮಿಕ ಪ್ರಜ್ಞೆ ಮೂಡಿಸುವ ನೃತ್ಯ ವೈಭವಕ್ಕೆ ಕ್ಷಣಗಣನೆ ಆರಂಭವಾಗಿದೆ.

ಸುಮಾರು 253 ಕಾಲೇಜು ತಂಡಗಳು ಭಾಗವಹಿಸಲಿದ್ದು, ವಿಶಿಷ್ಟ ಹಾಗೂ ವರ್ಣರಂಜಿತ ಧ್ವನಿ ಮತ್ತು ಬೆಳಕಿನ ವಿನ್ಯಾಸದ ನಡುವೆ ಪ್ರತಿಭೆ ಅನಾವರಣ ಮಾಡಲಿದ್ದಾರೆ. ಎರಡು ವರ್ಷದ ಬಳಿಕ ಗಂಗೋತ್ರಿ ವನಸಿರಿಯ ನಡುವೆ ಬೆಳಕಿನ ಚಿತ್ತಾರಗಳು ಮೂಡಲಿವೆ.

ಸ್ವಚ್ಛತೆ, ಸಿದ್ಧತೆ: 'ಯುವ ಸಂಭ್ರಮ'ಕ್ಕೆ ಮಾನಸ ಗಂಗೋತ್ರಿ ಬಯಲು ರಂಗಮಂದಿರದಲ್ಲಿ ಭರದ ಸಿದ್ಧತೆ ನಡೆದಿದೆ. ರಂಗ ಮಂದಿರದ ಸುತ್ತಲೂ ಶುಚಿಗೊಳಿಸಿದ್ದು, ಆಕರ್ಷಕ ಲೈಟಿಂಗ್‌ಗಳನ್ನು ಅಳವಡಿಸಲಾಗಿದೆ. ಅತಿಥಿ ಗಣ್ಯರು, ವಿಶೇಷ ಆಹ್ವಾನಿತರಿಗಾಗಿ ಪ್ರತ್ಯೇಕವಾಗಿ ಆಸನಗಳ ವ್ಯವಸ್ಥೆ ಮಾಡಲಾಗಿದೆ. ನೂಕು ನುಗ್ಗಲು ಉಂಟಾಗದಂತೆ ತಡೆಯಲು ವೇದಿಕೆ ಮುಂಭಾಗದಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಭದ್ರಗೊಳಿಸಲಾಗಿದೆ.

ಮೈಸೂರು ದಸರಾಗೆ ಪ್ರಧಾನಿ ಮೋದಿ ಭೇಟಿ ಇಲ್ಲ


ಸಿಎಂ ಕಚೇರಿಗೆ ಪ್ರಧಾನಮಂತ್ರಿಗಳ ಕಾರ್ಯಾಲಯದಿಂದ ಮಾಹಿತಿ



ಬೆಂಗಳೂರು: ವಿಶ್ವವಿಖ್ಯಾತ ಮೈಸೂರು ದಸರಾಗೆ ಪ್ರಧಾನಿ ನರೇಂದ್ರ ಮೋದಿ ಬರುವುದಿಲ್ಲ ಎಂದು ಮುಖ್ಯಮಂತ್ರಿ ಕಚೇರಿಗೆ ಪ್ರಧಾನಮಂತ್ರಿಗಳ ಕಾರ್ಯಾಲಯದಿಂದ ಮಾಹಿತಿ ನೀಡಲಾಗಿದೆ ಎಂದು ಖಾಸಗಿ ವಾಹಿನಿ ವರದಿ ಮಾಡಿದೆ. ಸಿಎಂ ಕಚೇರಿಯ ಉನ್ನತ ಮೂಲಗಳು ಮಾಹಿತಿ ನೀಡಿದ್ದು, ಪ್ರಧಾನಿ ನರೇಂದ್ರ ಮೋದಿ ಕಾರ್ಯಕ್ರಮದಲ್ಲಿ ಬದಲಾವಣೆ ಯಾಗಿದ್ದು, ಜಂಬೂ ಸವಾರಿಗೆ ಪ್ರಧಾನಿ ಮೋದಿ ಬರುವುದಿಲ್ಲವೆಂದು ಮಾಹಿತಿ ರವಾನೆ ಮಾಡಲಾಗಿದೆ. ಪ್ರಧಾನಿ ಮೋದಿ ಕಾರ್ಯಕ್ರಮದ ಬಗ್ಗೆ ಸಿಎಂ ಕಚೇರಿಗೆ PMO ಮಾಹಿತಿ ನೀಡಲಾಗಿದೆ. ಈ ಕುರಿತು ನಗರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯೆ ನೀಡಿದ್ದು, ಮೈಸೂರು ದಸರಾಗೆ ಪ್ರಧಾನಿ ನರೇಂದ್ರ ಮೋದಿ ಬರುವ ಬಗ್ಗೆ ಇನ್ನೂ ಖಚಿತವಾಗಿಲ್ಲ. ಹಲವು ಕಾರ್ಯಕ್ರಮಗಳ ಪಟ್ಟಿಯನ್ನು ಅವರು ಕೊಟ್ಟಿದ್ದಾರೆ. ಆದರೆ ಯಾವುದೇ ಕಾರ್ಯಕ್ರಮಕ್ಕೆ ಬರುವ ಬಗ್ಗೆ ಖಚಿತಪಡಿಸಿಲ್ಲ ಎಂದು ಹೇಳಿದರು.

ಇದಕ್ಕೂ ಮುನ್ನ ಈ ಬಾರಿ ದಸರಾದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಲಾದ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ನೆರವೇರಿಸುವ ಸಾಧ್ಯತೆ ಇದೆ ಎಂದು ಪ್ರತಾಪ್ ಸಿಂಹ ಮೈಸೂರಿನಲ್ಲಿ ತಿಳಿಸಿದ್ದರು. ದೆಹಲಿಯ ಪ್ರಧಾನಮಂತ್ರಿಗಳ ಕಚೇರಿಯಿಂದ ನನಗೆ ಕರೆ ಬಂದಿತ್ತು. ಈ ಬಾರಿಯ ದಸರಾ ಮಹೋತ್ಸವದ ಕಾರ್ಯಕ್ರಮಗಳ ಬಗ್ಗೆ ವಿಚಾರಣೆ ಮಾಡಿದ ಅಧಿಕಾರಿಗಳು, ದಸರಾ ಉದ್ಘಾಟನೆ, ವಿಜಯ ದಶಮಿ ಮೆರವಣಿಗೆ, ಪುಷ್ಪಾರ್ಚನೆ ಬಗ್ಗೆಯೂ ಮಾಹಿತಿ ಪಡೆದರು ಎಂದಿದ್ದರು. ಪ್ರಧಾನಿಗಳು ಪುಷ್ಪಾರ್ಚನೆ ಮಾಡುವ ಇಂಗಿತ ವ್ಯಕ್ತಪಡಿಸಿರುವುದರಿಂದ ಅವರ ಕಚೇರಿ ಅಧಿಕಾರಿಗಳು ವಿಚಾರಣೆ ಮಾಡಿ ಮಾಹಿತಿ ಕಲೆ ಹಾಕಿರಬಹುದೆಂದು ಭಾವಿಸಿದ್ದೇನೆ. ಚಾಮುಂಡೇಶ್ವರಿ ದೇವಿಯ ದರ್ಶನ ಮಾಡಿದ್ದ ಸಂದರ್ಭ ಮತ್ತೆ ಬಂದು ದರ್ಶನ ಮಾಡುವುದಾಗಿ ನರೇಂದ್ರ ಮೋದಿ ಅವರು ಸಂಕಲ್ಪ ಮಾಡಿದ್ದರಿಂದ ಪುಷ್ಪಾರ್ಚನೆಗೆ ಆಗಮಿಸಲು ಆಸಕ್ತಿ ತೋರಿರಬಹುದೆಂದು ಭಾವಿಸಿದ್ದೇನೆ ಎಂದು ಪ್ರತಾಪ್ ಸಿಂಹ ತಿಳಿಸಿದ್ದರು.

ಉತ್ತಮ ನಿರ್ವಹಣೆಯಲ್ಲಿ ಮೈಸೂರು ಮೃಗಾಲಯಕ್ಕೆ ದೇಶದಲ್ಲೇ 2ನೇ ಸ್ಥಾನ



ಮೈಸೂರು, ಸೆ.15(ಎಂಕೆ)– ಭಾರತದಲ್ಲಿನ ಮೃಗಾಲಯಗಳ ನಿರ್ವಹಣೆಯ ಪರಿಣಾಮಕಾರಿತ್ವದ ಮೌಲ್ಯಮಾಪನದಲ್ಲಿ (Management Effectiveness Evaluation of Zoos in India 2022-MEE-ZOO)ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯಕ್ಕೆ ದೇಶದಲ್ಲಿಯೇ 2ನೇ ಸ್ಥಾನ ಲಭಿಸಿದೆ.

ನಿರ್ವಹಣೆ, ಸ್ವಚ್ಛತೆ, ಪ್ರಾಣಿಗಳ ಎರವಲು, ಪ್ರವಾಸಿಗರ ಆಕರ್ಷಣೆ ಸೇರಿದಂತೆ ವಿವಿಧ ಆಯಾಮಗಳಲ್ಲಿ ನಡೆದಿರುವ ಮೌಲ್ಯಮಾಪದಲ್ಲಿ ದೊಡ್ಡ ಮೃಗಾಲಯಗಳ ವಿಭಾಗದಲ್ಲಿ ತಮಿಳುನಾಡಿನ ಅರಿಗ್ನಾರ್ ಅಣ್ಣ ಜಿಯಾಲಾಜಿಕಲ್ ಪಾರ್ಕ್ ಶೇ.82 ರಷ್ಟು ಅಂಕಗಳನ್ನು ಪಡೆಯುವ ಮೂಲಕ ಮೊದಲ ಸ್ಥಾನದಲ್ಲಿದ್ದರೆ, ಶೇ.80 ರಷ್ಟು ಅಂಕಗಳನ್ನು ಪಡೆದ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ 2ನೇ ಸ್ಥಾನ ಪಡೆದಿದೆ. ಗುಜರಾತ್‌ನ ಸಕ್ಕರ್‌ಬಾಗ್ ಜಿಲಾಜಿಕಲ್ ಪಾರ್ಕ್ ಶೇ.76 ರಷ್ಟು ಅಂಕಗಳನ್ನು ಪಡೆಯುವ ಮೂಲಕ 3ನೇ ಸ್ಥಾನ ಪಡೆದಿದೆ.

ಹಾಗೆಯೇ ಮಧ್ಯಮ ವರ್ಗ ಮೃಗಾಲಯಗಳ ವಿಭಾಗದಲ್ಲಿ ಪಶ್ಚಿಮ ಬಂಗಾಳದ ಪದ್ಮಜನಾಯ್ಡು ಹಿಮಾಲಯನ್ ಜಿಯಾಲಾಜಿಕಲ್ ಪಾರ್ಕ್ ಶೇ.83ರಷ್ಟು ಅಂಕಗಳನ್ನು ಪಡೆಯುವ ಮೂಲಕ ಪ್ರಥಮ ಸ್ಥಾನ ಪಡೆದರೆ, ಶೇ.78 ರಷ್ಟು ಅಂಕಗಳನ್ನು ಪಡೆದ ಅಲಿಪೋರ್ ಜಿಯಾಲಾಜಿಕಲ್ ಪಾರ್ಕ್ ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ಮೊದಲ ಸ್ಥಾನ ಪಡೆಯುವ ಗುರಿ: ಸ್ವಚ್ಛತೆ, ನಿರ್ವಹಣೆಯಲ್ಲಿ ಮೈಸೂರು ಶ್ರೀ ಚಾಮರಾಜೇಂದ್ರ ಮೃಗಾಲಯಕ್ಕೆ 2ನೇ ಸ್ಥಾನ ದೊರೆತಿರುವುದು ಸಂತಸ ತಂದಿದೆ. ಈಗಾಗಲೇ ಇನ್‌ಫೋಸಿಸ್, ಆರ್‌ಬಿಐ ಮೃಗಾಲಯದಲ್ಲಿ ಪ್ರಾಣಿಗಳ ಮನೆ ನಿರ್ಮಾಣಕ್ಕೆ ಸಹಕಾರ ನೀಡುತ್ತಿವೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಸೌಲಭ್ಯಗಳನ್ನು ನೀಡುವ ಜೊತೆಗೆ ಸ್ವಚ್ಛತೆ ಹಾಗೂ ನಿರ್ವಹಣೆಗೆ ಹೆಚ್ಚಿನ ಗಮನ ನೀಡುವ ಮೂಲಕ ದೇಶದಲ್ಲಿಯೇ ಅತ್ಯುನ್ನತ ಮೃಗಾಲಯ ಎಂಬ ಖ್ಯಾತಿ ಪಡೆಯುವ ನಿಟ್ಟಿನಲ್ಲಿ ಶ್ರಮಿಸಲಾಗುವುದು ಎಂದು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಶಿವಮೊಗ್ಗ ಮೃಗಾಲಯಕ್ಕೆ ಒಂದು ಮಿನಿ ಬಸ್ ನೀಡುವುದಕ್ಕೆ ನಿರ್ಧರಿಸಲಾಗಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿನ ನೌಕರರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಹೊಸ ಯೋಜನೆ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ದೇಶಕ್ಕೆ ವಿಶ್ವೇಶ್ವರಯ್ಯರಂತಹ ಇಂಜಿನಿಯರ್‌ಗಳ ಅಗತ್ಯ ಹೆಚ್ಚಾಗಿದೆ

ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ರಂಗಪ್ಪ ಅಭಿಮತ



ಮೈಸೂರು, ಸೆ.15(ಎಂಕೆ)– ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರ ಕೊಡುಗೆಗಳಲ್ಲಿಯೇ ಪ್ರಮುಖವಾದ ಕೆಆರ್‌ಎಸ್ ಅಣೆಕಟ್ಟೆ ಇಂದಿಗೂ ಪ್ರಸ್ತುತವಾಗಿದ್ದು, ದೇಶಕ್ಕೆ ಅವರಂತಹ ಇಂಜಿನಿಯರ್‌ಗಳ ಅಗತ್ಯವಿದೆ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ನಡೆದ ಇಂಜಿನಿಯರ್ ಡೇ ಹಾಗೂ ಸರ್.ಎಂ.ವಿಶ್ವೇಶ್ವರಯ್ಯ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್‌ಎಂವಿ ಅವರ ಕೊಡುಗೆ ಪ್ರಪಂಚಕ್ಕೆ ತಿಳಿದಿದೆ. ಅವರ ಕೊಡುಗೆಗಳಲ್ಲಿ ಪ್ರಮುಖವಾದ ಕೆಆರ್‌ಎಸ್ ಅಣೆಕಟ್ಟೆ ಲಕ್ಷಾಂತರ ಜನರ ಬದುಕಿಗೆ ಬೆಳಕಾಗಿದೆ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನದ ಕಾರ್ಯ ಒಂದೇ ಆಗಿದ್ದು, ದೇಶದ ಅಭಿವೃದಿಗೆ ದೊಡ್ಡ ದೊಡ್ಡ ಇಂಜಿನಿಯರ್ಸ್‌ಗಳು, ವಿಜ್ಞಾನಿಗಳು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಜೆನೆಟಿಕ್ಸ್ ಇಂಜಿನಿಯರ್ಸ್‌ಗಳು, ಬಯೋಟೆಕ್ಸ್ ಮತ್ತು ಆರೋಗ್ಯ ವಿಜ್ಞಾನ ಇಂಜಿನಿಯರ್ಸ್‌ಗಳಿಗೆ ದೇಶದಲ್ಲಿ ಬೇಡಿಕೆ ಹೆಚ್ಚಾಗಿದೆ ಎಂದು ತಿಳಿಸಿದರು.

ಸನ್ಮಾನ: ಇದೇ ವೇಳೆ ಅತ್ಯುತ್ತಮ ಸೇವೆ ಸಲ್ಲಿಸಿದ ಇಂಜಿನಿಯರ್‌ಗಳಾದ ಸಿ.ಆರ್.ನಾಗರಾಜ್, ಮೋಹನ್ ಶಂಕರ್, ಆರ್.ಸತೀಶ್, ರಘುನಾಥ್ ಹಾಗೂ ಹೆಚ್.ಎನ್.ಸಂತೋಷ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿದ ಬಳಿಕ ಮಾತನಾಡಿದ ಮೋಹನ್ ಶಂಕರ್, ಭ್ರಷ್ಟಾಚಾರ ಮುಕ್ತರಾಗಿ, ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ ಸರ್‌ಎಂವಿ ಇಂಜಿನಿಯರ್ಸ್‌ಗಳಿಗೆ ರೋಲ್ ಮಾಡೆಲ್ ಆಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇಂಜಿನಿಯರ್ಸ್‌ಗಳಲ್ಲಿ ಪ್ರಾಮಾಣಿಕತೆ ಕಡಿಮೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ ಅಧ್ಯಕ್ಷ ಬಿ.ಎಸ್.ಪ್ರಭಾಕರ, ಕೆ.ವಿ.ಬಾಸ್ಕರ್, ಸತೀಶ್, ಚಿನ್ನಸ್ವಾಮಿ, ಸುರೇಶ್ ಬಾಬು ಮತ್ತಿತರರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

'ಬೊಟಾನಿಕಲ್ ಗಾರ್ಡನ್' ದಸರೆಗೆ ಮುಕ್ತ

ಪೊದೆ ವುಳ್ಳ ಈ ಜಾಗ ಸಸ್ಯ ಕಾಶಿಯಂತಿದೆ. 2012ರಿಂದ ಹಂತ ಹಂತವಾಗಿ ಕೆಲಸ ಆರಂಭಿಸಿದ ತೋಟಗಾರಿಕಾ ಇಲಾಖೆ ಇದೀಗ ಒಂದು ದಶಕದ ಶ್ರಮದಿಂದ ಸುಂದರ ಉದ್ಯಾನವನ್ನು ನಿರ್ಮಿಸಿದ್ದು, ಸಸ್ಯಶಾಸ್ತ್ರೀಯ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಅಪರೂಪದ ಮಾಹಿತಿಯೂ ಲಭ್ಯವಾಗಲಿದೆ. ಬೆಂಗಳೂರಿನ ಲಾಲ್‌ಬಾಗ್ ಸಸ್ಯೋದ್ಯಾನ ಮತ್ತು ಊಟಿಯಲ್ಲಿರುವ ಬೊಟಾನಿಕಲ್ ಗಾರ್ಡನ್ ಮಾದರಿಯಲ್ಲಿ ಮೈಸೂರಿನ ಲಿಂಗಾಂಬುದಿ ಕೆರೆ ಆವರಣದಲ್ಲಿ 4 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಈ ಗಾರ್ಡನ್ ಅನ್ನು ಕುಪ್ಪಣ್ಣ ಪಾರ್ಕ್‌ನಲ್ಲಿ ನಡೆಯಲಿರು ದಸರಾ ಫಲಪುಷ್ಪ ಪ್ರದರ್ಶನದ ಸಂದರ್ಭ ದಲ್ಲಿಯೇ ಸೆ26ರಂದು ಉದ್ಘಾಟಿ ಸಲು ಉದ್ದೇಶಿಸಲಾಗಿದೆ. ಸೆ.27ರಂದು ತೋಟಗಾರಿಕೆ ಸಚಿವ ಎನ್.ಮುನಿರತ್ನ, ಲಿಂಗಾಂಬುದಿ ಕೆರೆ ಆವರಣದ ಈ ಬೊಟಾನಿಕಲ್ ಗಾರ್ಡನ್‌ಗೆ ಭೇಟಿ ನೀಡಿ, ವೀಕ್ಷಿಸಲಿದ್ದಾರೆ.

300 ಸಸ್ಯಗಳ ಸಂರಕ್ಷಣೆ: ಲಿಂಗಾಂಬುದಿ ಕೆರೆ ಆವರಣದಲ್ಲಿ ನಿರ್ಮಿಸಿರುವ ಈ ಗಾರ್ಡನ್‌ನಲ್ಲಿ ಸ್ಥಳೀಯವಾಗಿ ಬೆಳೆಯುವ, ಅಳಿವಿನಂಚಿನಲ್ಲಿರುವ ಗಿಡ–ಮರ ಸೇರಿದಂತೆ ಒಟ್ಟು 300 ಬಗೆಯ ಸಸ್ಯಗಳನ್ನು ಬೆಳೆಸಲಾಗಿದೆ. ಇದರಿಂದ ಸಸ್ಯಶಾಸ್ತ್ರಜ್ಞರು ಹಾಗೂ ಸಸ್ಯಶಾಸ್ತ್ರ ವಿದ್ಯಾರ್ಥಿಗಳಿಗೆ ಸಸ್ಯ ಅತ್ಯುತ್ತಮ ಅಧ್ಯಯನ ಕೇಂದ್ರವಾಗಲಿದೆ. ಅಲ್ಲದೆ ನೈಸರ್ಗಿಕವಾಗಿ ಉತ್ತಮ ಪರಿಸರ ಇರುವುದರಿಂದ ಭವಿಷ್ಯದಲ್ಲಿ ಮೈಸೂರು ಭಾಗದ ಪ್ರವಾಸಿ ತಾಣವೂ ಆಗಲಿದೆ.

26 ಬಗೆಯ ಸ್ಥಳೀಯ ಮರ: ಈ ಗಾರ್ಡನ್ ನಲ್ಲಿ ಬೇವು, ಆಲ, ಅರಳಿ ಮರ, ಅಲ್ಬಿಜಿಯಾ, ದೊಡ್ಡ ಹೂವಿನ ಬಾಗೆ, ಕೃಷ್ಣ ಸಿರಿಸ್, ಕಪ್ಪು ವಾರ್ನಿಷ್ ಮರ, ಕರೆನ್ ವುಡ್, ಮಾರ್ಕಿಂಗ್ ಅಡಿಕೆ ಮರ, ಹಿಪ್ಟೇಜ್, ವೀಪಿಂಗ್ ಬಾಟಲ್ ಬ್ರಷ್, ರೆಡ್ ಬಾಟಲ್ ಬ್ರಷ್, ಆರೆಂಜ್ ಬಳ್ಳಿ ಸೇರಿದಂತೆ 26 ಬಗೆಯ ಸ್ಥಳೀಯ ಮರಗಳನ್ನು ಬೆಳೆಸಲಾಗಿದೆ. ಅಳಿವಿನಂಚಿನಲ್ಲಿರುವ ಅಲ್ಬಿಜಿಯಾ, ಬೇ ಮರ, ಬಿಲ್ವ ಮರ, ರಕ್ತಚಂದನ ಸೇರಿದಂತೆ ಇನ್ನಿತರ ಮರಗಳ ಸಂತತಿಗೂ ಕ್ರಮ ಕೈಗೊಳ್ಳಲಾಗಿದೆ.

ವಿದೇಶಿ ಮರ: ಪ್ರವಾಸಿಗರಿಗೆ ಉತ್ತಮ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಲಿಂಗಾಂಬುದಿ ಕೆರೆ ಆವರಣದ ಈ ಬೊಟಾನಿಕಲ್ ಗಾರ್ಡನ್‌ನಲ್ಲಿ ವಿದೇಶಿ ಮರಗಳಾದ ಅಗಾಥಿಸ್, ರೋಬಸ್ಟಾ, ಸೈಫೋಲೋಬಿಯಂ, ಪ್ಯಾರಾಹೈಬಾ,



ಬ್ರಾಚಿಚಿಟಾನ್, ಅಡಾನ್ಸೋನಿಯಂ ಸೇರಿದಂತೆ ಇನ್ನಿತರ ತಳಿಯ ಮರಗಳನ್ನು ಬೆಳೆಸಲಾಗುತ್ತಿದೆ.

ವಿವಿಧ ಗಾರ್ಡನ್‌ಗಳು: ಈ ಗಾರ್ಡನ್ ನಲ್ಲಿ ಪ್ರವಾಸಿಗರು ಹಾಗೂ ಸಸ್ಯಪ್ರಿಯರಿಗೆ ಮುದ ನೀಡಲು ವಿವಿಧ ವನ ನಿರ್ಮಿ ಸಲಾಗುತ್ತಿದೆ. ಅದರಲ್ಲಿ ಔಷಧೀಯ ಸಸ್ಯಗಳ ಉದ್ಯಾನ, ಆರೊಮ್ಯಾಟಿಕ್ ಗಾರ್ಡನ್, ರೋಸ್ ಗಾರ್ಡನ್, ಟೋಪಿಯರಿ ಗಾರ್ಡನ್, ಚಿಟ್ಟೆ ಪಾರ್ಕ್, ಬಿದಿರಿನ ಬ್ಲಾಕ್, ಫಿಕಸ್ ಬ್ಲಾಕ್, ರಾಕರಿ, ಅರ್ಬೊ ರೇಟಂ, ಫ್ರಾಗ್ರೆನ್ಸ್ ಬ್ಲಾಕ್, ಪಾಲ್ಮೇಟಮ್, ಮೈನರ್ ಫ್ರೂಟ್ಸ್ ಬ್ಲಾಕ್ ಮತ್ತು ಉತ್ತಮವಾಗಿ ನಿರ್ವಹಿಸಲಾದ ನೀರಿನ ಪೂಲ್‌ಗಳು ಸೇರಿದಂತೆ ಥೀಮ್‌ಗಳೊಂದಿಗೆ ಹಾಕಲಾಗಿದೆ. ಆಕ್ವಾ ಪಕ್ಷಿಗಳ ಪಾರ್ಕ್ ಕೂಡ ನಿರ್ಮಿಸಲಾಗುತ್ತಿದೆ.

ಗುಲಾಬಿ ಪಾರ್ಕ್: ಗುಲಾಬಿ ಪಾರ್ಕ್‌ನಲ್ಲಿ 80 ಬಗೆಯ ಗುಲಾಬಿ ಗಿಡವನ್ನು ಬೆಳೆಸಲಾಗಿದೆ. ಮಿನಿಯೇಚರ್ ರೋಸ್, ಸ್ಟ್ಯಾಂಡರ್ಡ್ ರೋಸ್, ಹೈಬ್ರೀಡ್ ರೋಸ್ ಸೇರಿದಂತೆ ಎಲ್ಲಾ ಬಗೆಯ ಗುಲಾಬಿ ಗಿಡಗಳನ್ನು ಬೆಳೆಸಲಾಗಿದೆ.

ಟೋಪಿಯರಿ ಉದ್ಯಾನ: ಸಸ್ಯಾಲಂಕಾರ ಉದ್ಯಾನವಾದ ಟೋಪಿಯರಿ ಗಾರ್ಡನ್‌ನಲ್ಲಿ ಇಸಾನ್ ಪಾತ್ರಿ, ಡ್ಯುರಾಂತಾ, ಡ್ಯುರಾಂತಾ ಹೆಡ್ಜ್, ಡ್ಯುರಾಂತಾ ಗೋಲ್ಡ್, ಥುಜಾ, ಯುಜೀನಿಯಾ ಸೇರಿದಂತೆ ಇನ್ನಿತರ ಸಸ್ಯಗಳನ್ನು ಬೆಳೆಸಲಾಗಿದೆ.

ಚಿಟ್ಟೆ ಪಾರ್ಕ್: ಭಾರತದಲ್ಲಿ 1300 ಬಗೆಯ ಚಿಟ್ಟೆಗಳಿದ್ದು, ಅವುಗಳಲ್ಲಿ ಈಗಾಗಲೇ 100ಕ್ಕೂ ಹೆಚ್ಚು ಪ್ರಬೇಧದ ಚಿಟ್ಟೆಗಳು ಅಳಿವಿನಂಚಿಗೆ ದೂಡಲ್ಪಟ್ಟಿವೆ. ಚಿಟ್ಟೆ ಪಾರ್ಕ್ ನಲ್ಲಿ ಚಿಟ್ಟೆಗಳನ್ನು ಆಕರ್ಷಿಸುವ ಗಿಡ–ಮರ ಬೆಳೆಸಲಾಗಿದೆ. ಮೆಕ್ಸಿಕನ್ ಬಟರ್‌ಫ್ಲೈ, ಮೆಕ್ಸಿಕನ್ ಬಟರ್‌ಫ್ಲೈ ವೀಡ್, ಚೈನೀಸ್ ವೈಲೆಟ್, ಮುಳ್ಳುಹಂದಿ ಹೂವು, ಹಳದಿ ಬೆಲ್ ಆರ್ಕಿಡ್ ಟ್ರೀ, ಏಷ್ಯಾ ಬಟರ್‌ಫ್ಲೈ ಬುಷ್, ಮಡಾಗ್ಸ್ಕರ್ ಬಟರ್‌ಫ್ಲೈ ಬುಷ್, ನವಿಲು ಹೂವು, ಕ್ರೌನ್ ಫ್ಲವರ್, ಕ್ಯಾಂಡಲ್ ಬುಷ್ ಮತ್ತು ಇನ್ನೂ ಅನೇಕ ಬಗೆಯ ಬಣ್ಣಬಣ್ಣದ ಹೂವಿನ ಗಿಡಗಳನ್ನು ಬೆಳೆಸಲಾಗಿದ್ದು ಚಿಟ್ಟೆಗಳನ್ನು ಆಕರ್ಷಿಸಲಾಗುತ್ತಿದೆ.

ಬಿದಿರು ಪಾರ್ಕ್: ವಾತಾವರಣದಲ್ಲಿರುವ ಇಂಗಾಲವನ್ನು ತಡೆಹಿಡಿದಿಟ್ಟುಕೊಂಡು ಹವಾಮಾನ ಬದಲಾವಣೆಯನ್ನು ತಗ್ಗಿಸುವಲ್ಲಿ ಪ್ರಮುಖ ಪಾತ್ರವಹಿಸುವ 17 ವಿವಿಧ ಜಾತಿಯ ಬಿದಿರುಗಳನ್ನು ಒಳಗೊಂಡಿರುವ ಪ್ರತ್ಯೇಕ ಬಿದಿರಿನ ಬ್ಲಾಕ್ ನಿರ್ಮಿಸಲಾಗಿದೆ. ಪ್ರತಿಯೊಂದೂ ತನ್ನದೇ ಆದ ವಿಶಿಷ್ಟ ಗುಣಲಕ್ಷಣಗಳನ್ನು ಹೊಂದಿವೆ. ಅವುಗಳಲ್ಲಿ ಬುದ್ಧ ಬಿದಿರು, ಅಂಬ್ರೆಲಾ ಬಿದಿರು, ಗ್ವಾಡುವ ಬಿದಿರು, ಜಪಾನೀಸ್ ಬಾಣ ಬಿದಿರು, ಹೆಡ್ಜ್ ಬಿದಿರು, ಹಸಿರು ಗ್ಲಾಕಸ್ ಬಿದಿರು, ಕಪ್ಪು ಬಿದಿರು ಮತ್ತು ಇತರ ಸ್ಥಳೀಯ ಜಾತಿಯ ಬಿದಿರುಗಳನ್ನು ಇಲ್ಲಿ ಕಾಣಬಹುದಾಗಿದೆ.

ಫೈಕಸ್ ಬ್ಲಾಕ್: ಬೊಟಾನಿಕಲ್ ಗಾರ್ಡನ್‌ನಲ್ಲಿ 25ಕ್ಕೂ ಹೆಚ್ಚು ಜಾತಿಯ ಫೈಕಸ್ ಮರಗಳನ್ನು ಬೆಳೆಸಲಾಗಿದೆ. ಸ್ಥಳೀಯ ಫೈಕಸ್ ಮರಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಲಾಗಿದೆ. ಫೈಕಸ್ ಮರಗಳು ಸಸ್ಯೋದ್ಯಾನಕ್ಕೆ ವಿಶೇಷ ಸೌಂದರ್ಯವನ್ನು ಕಲ್ಪಿಸಿವೆ. ಶೋವಿ ಸಿಲ್ಕ್ ಕಾಟನ್ ಟ್ರೀ, ಆಫ್ರಿಕನ್ ಲೊಕಸ್ಟ್ ಬೀನ್, ಟ್ರೀ ಆಫ್ ಸ್ಯಾಡ್‌ನೆಸ್, ಒಂಟಿ ಫಿಶ್‌ಟೈಲ್ ಪಾಮ್, ಕೃಷ್ಣ ಫಿಗ್, ಬೇಲದ ಹಣ್ಣು, ಬರ್ಫ್ಲವರ್ ಟ್ರೀ, ಅಶ್ವಥ ಮರ, ಹಲಸಿನ ಮರ, ಛತ್ರಿ ಮರ, ನೇರಳೆ ಮರ, ಆಲದ ಮರ ಮತ್ತು ಮೈಸೂರು ಅಂಜೂರ ಮರಗಳನ್ನು ಬೆಳೆಸಲಾಗಿದೆ.

ಕೊಳಗಳು: ಲಿಂಗಾಂಬುದಿ ಕೆರೆಯ ಬೊಟಾನಿಕಲ್ ಗಾರ್ಡನ್‌ನಲ್ಲಿರುವ ಕೊಳಗಳು ಪಕ್ಷಿಗಳ ಆಕರ್ಷಣೆಗೆ ಸಹಕಾರಿಯಾಗಲಿದೆ. ಅಲ್ಲದೇ ಪ್ರವಾಸಿಗರಿಗೂ ಮುದ ನೀಡಲಿದೆ.

ಪರ್ಗೋಲಾ: ಲಿಂಗಾಂಬುದಿ ಗಾರ್ಡನ್‌ನಲ್ಲಿ 150 ಅಡಿ ಉದ್ದ ಮತ್ತು 12 ಅಡಿ ಅಗಲದ ಪರ್ಗೋಲಾ ನಿರ್ಮಿಸಲಾಗಿದೆ. ಗಾರ್ಡನ್‌ಗೆ ಬರುವ ಪ್ರವಾಸಿಗರು ವಿಹರಿಸಲು ಉತ್ತಮ ವಾತಾವರಣ ಕಲ್ಪಿಸಲಿದೆ. ಪರ್ಗೋ ಲಾದ ಮೇಲೆ ರೆಡ್ ಜೇಡ್ ವೈನ್ ಬಳ್ಳಿ ಬೆಳೆಸಲಾಗಿದ್ದು, ಇದು ವರ್ಷದಲ್ಲಿ ಎರಡು ಬಾರಿ ಅರಳಿ ಕೆಂಪು ಬಣ್ಣದ ಹೂವು ಬಿಡುತ್ತವೆ. ಇದರಿಂದ ಬೊಟಾನಿಕಲ್ ಗಾರ್ಡನ್‌ಗೆ ಮೆರುಗು ಹೆಚ್ಚಿಸುತ್ತದೆ.

124 ಕಿಲೋಮೀಟರ್ ದೀಪಾಲಂಕಾರ

ಸಭಾಂಗಣದಲ್ಲಿ ಗುರುವಾರ ಸಂಸದ ಪ್ರತಾಪ ಸಿಂಹ ನಡೆಸಿದ ಸಭೆಯಲ್ಲಿ ದೀಪಾಲಂಕಾರ ಸಮಿತಿ ಉಪ ವಿಶೇಷಾಧಿ ಕಾರಿ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಜಯವಿಭವ ಸ್ವಾಮಿ, ಮೈಸೂರಲ್ಲಿ ದೀಪಾಲಂಕಾರದ ಮಾಹಿತಿ ನೀಡಿದರು. ಕಳೆದ ವರ್ಷ 100 ಕಿ.ಮೀ. ದೀಪಾಲಂಕಾರ ಮಾಡಲಾಗಿತ್ತು. ಈ ವರ್ಷ 124 ಕಿಮೀ ರಸ್ತೆ, ವೃತ್ತಗಳಿಗೆ ದೀಪಾಲಂಕಾರ ಮಾಡಲಾಗುತ್ತಿದೆ. ಸೂರ್ಯಾಸ್ತದಿಂದ ರಾತ್ರಿ 10.30ರ ತನಕ ದೀಪಾಲಂಕಾರ ಇರಲಿದೆ. ಈಗಾಗಲೇ ಸಿದ್ಧತೆ ಆರಂಭಿಸಲಾಗಿದೆ. ಈ ಬಾರಿ ವಿವಿಧೆಡೆ ಸಂಸತ್ ಭವನದ ಮಾದರಿ, ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಆಕೃತಿ, ಎಲ್‌ಐಸಿ ವೃತ್ತದಲ್ಲಿ ರಾಷ್ಟ್ರ ಲಾಂಛನ, ರಾಷ್ಟ್ರ ಧ್ವಜ, ಪ್ರಾಣಿ, ಪಕ್ಷಿಗಳ ಮಾದರಿ ಅಳವಡಿಸಲಾಗುತ್ತಿದೆ. ಕನ್ನಡದ ಜ್ಞಾನಪೀಠ ಪುರಸ್ಕೃತರ ಪ್ರತಿಕೃತಿಗಳು, ಮೈಸೂರು ಮಹಾರಾಜರು, ಕೆಂಪುಕೋಟೆ ಮತ್ತು ಸುಭಾಷ್ ಚಂದ್ರ ಬೋಸ್ ಪ್ರತಿಕೃತಿ ಸೇರಿದಂತೆ ಇನ್ನಿತರ ಆಕೃತಿಗಳನ್ನು ತ್ರಿಡಿ ವ್ಯವಸ್ಥೆಯೊಳಗೆ ಪ್ರತಿಷ್ಠಾಪಿಸಲಾಗುತ್ತಿದೆ. ನವರಾತ್ರಿ ವೇಳೆ ಮೈಸೂರಿನ 96 ವೃತ್ತಗಳಲ್ಲಿ ದೀಪಾಲಂಕಾರ ಮಾಡಲಾಗುತ್ತಿದೆ ಈಗಾಗಲೇ 35 ವೃತ್ತಗಳ ಅಲಂಕಾರಕ್ಕೆ ಪ್ರಾಯೋಜಕರು ಬಂದಿದ್ದಾರೆ. ಉಳಿದ ವೃತ್ತಗಳಿಗೆ ಪ್ರಾಯೋಜ ಕರನ್ನು ಹುಡುಕುತ್ತಿದ್ದೇವೆ ಎಂದರು.

ಈ ಬಾರಿ ಜಂಬೂಸವಾರಿ ಮೆರವಣಿಗೆ ಸಂಜೆ 5.30ಕ್ಕೆ ಆರಂಭವಾಗಲಿದೆ. ಗಜಪಡೆ ದೀಪದ ಬೆಳಕಿನಲ್ಲಿ ಸಂಚರಿಸ ಬೇಕಿದೆ. ಅಂಬಾರಿ ಹೊತ್ತ ಆನೆ 16 ಅಡಿ ಇರುತ್ತದೆ. ಹಾಗಾಗಿ ಮೆರವಣಿಗೆ ಸಾಗುವ ಮಾರ್ಗದಲ್ಲಿ 22 ಅಡಿ ಎತ್ತರದ ಕಂಬ ಬಳಸಿ ದೀಪಾಲಂಕಾರದ ವ್ಯವಸ್ಥೆ ಮಾಡು ತ್ತೇವೆ. ಜಂಬೂಸವಾರಿ ಮಾರ್ಗದುದ್ದಕ್ಕೂ



ಅಂಬಾರಿಗೆ ದೀಪಾಲಂಕಾರದಿಂದ ಅಡಚಣೆಯಾಗದಂತೆ ಕಟ್ಟೆಚ್ಚರ ವಹಿಸಲಾಗಿದೆ ಎಂದು ತಿಳಿಸಿದರು.

ಮೂರು ದಿನ ಮುನ್ನವೇ: ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ಜಂಬೂಸವಾರಿ ಮೆರವಣಿಗೆ ಸಾಗುವ ಮಾರ್ಗದಲ್ಲಿ ಮೂರು ದಿನ ಮುನ್ನವೇ ದೀಪಾಲಂಕಾರದ ವ್ಯವಸ್ಥೆ ಮಾಡಲಾಗುತ್ತಿದೆ. ಈ ಬಾರಿ ಅಂಬಾರಿಗೆ ಪುಷ್ಪಾರ್ಚನೆ ಮಾಡುವುದು ಸಂಜೆಯಾಗು ವುದರಿಂದ ಮೆರವಣಿಗೆ ಅರಮನೆಯಿಂದ ಹೊರ ಬಂದ ಅರ್ಧ ಗಂಟೆಯಲ್ಲೇ ಕತ್ತಲು ಆವರಿಸುತ್ತಿದೆ. ಜಂಬೂಸವಾರಿ ಮೆರವಣಿಗೆ ದೀಪಾಲಂಕಾರದ ವ್ಯವಸ್ಥೆಯಲ್ಲೇ ಸಾಗಬೇಕಾ ಗುತ್ತದೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಕೋರಿಕೆ ಮೇರೆಗೆ ಸೆ.23ರಿಂದಲೇ ಜಂಬೂ ಸವಾರಿ ಮಾರ್ಗದಲ್ಲಿ ದೀಪಾಲಂಕಾರವನ್ನು ಮಾಡಲಾಗುತ್ತದೆ. ಇದರ ಬೆಳಕಿನಲ್ಲಿ ಮರದ ಅಂಬಾರಿ ಹೊತ್ತು ಆನೆ ತಾಲೀಮಿನಲ್ಲಿ ಪಾಲ್ಗೊಳ್ಳುತ್ತದೆ. ಇದರಿಂದ ಜಂಬೂಸವಾರಿ ಮೆರವಣಿಗೆಯಲ್ಲಿ ಆನೆಗಳು ಸರಾಗವಾಗಿ ಸಾಗಲು ಸಾಧ್ಯವಾಗಲಿದೆ ಎಂದರು.

ನಾಲ್ವಡಿ ಪ್ರತಿಕೃತಿ: ಇದೇ ವೇಳೆ ಸಂಸದ ಪ್ರತಾಪ ಸಿಂಹ ಮಾತನಾಡಿ, ಮಂಡಕಳ್ಳಿ ವಿಮಾನ ನಿಲ್ದಾಣದಿಂದ ದೀಪಾಲಂಕಾರ ಮಾಡಲಾಗುತ್ತಿದೆ. ವಿಮಾನ ನಿಲ್ದಾಣದ ದ್ವಾರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮಾದರಿ ನಿರ್ಮಿಸಿ, ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ ಫಲಕ ಅಳವಡಿಸಬೇಕೆಂದು ಸಲಹೆ ನೀಡಿದರು.

ಈಗಾಗಲೇ ರಾಜ್ಯ ಸರ್ಕಾರ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣಕ್ಕೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಕೇಂದ್ರದಿಂದಲೂ ಒಪ್ಪಿಗೆ ದೊರೆಯಲಿದೆ ಎಂದು ತಿಳಿಸಿದರು.

ಮೈಸೂರಿಗೆ ಪ್ರವೇಶಿಸುವ ಎಲ್ಲಾ ರಸ್ತೆಗಳ ಜಂಕ್ಷನ್‌ನಲ್ಲೂ ದೀಪಾಲಂಕಾರ ಮಾಡಬೇಕು. ಬನ್ನೂರು, ತಿ.ನರಸೀಪುರ ಹಾಗೂ ಹೆಚ್.ಡಿ.ಕೋಟೆ ರಸ್ತೆಯ ಜಂಕ್ಷನ್‌ನಲ್ಲೂ ದೀಪಾಲಂಕಾರ ಮಾಡಬೇಕು. ಸುಭಾಷ್ ಚಂದ್ರ ಬೋಸ್ ಆಕೃತಿಯನ್ನು ಪ್ರಮುಖ ರಸ್ತೆಯಲ್ಲಿ ಅಳವಡಿಸಬೇಕು. ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮಹಿಷಮರ್ಧಿನಿಯ ತ್ರಿಡಿ ಆಕೃತಿ ನಿರ್ಮಿಸಬೇಕು ಎಂದು ಸೂಚಿಸಿದರು. ಚಾಮುಂಡಿ ಬೆಟ್ಟದ ಮಳಿಗೆಗಳಿಗೆ ಶೀಘ್ರ ವಿದ್ಯುತ್ ಸಂಪರ್ಕ ನೀಡಬೇಕು. ಪ್ರಪ್ರಥಮ ಬಾರಿಗೆ ದಸರಾ ಉದ್ಘಾಟಿಸಲು ರಾಷ್ಟ್ರಪತಿಗಳು ಆಗಮಿಸುತ್ತಿದ್ದಾರೆ. ಹಾಗಾಗಿ ಬೆಟ್ಟದಲ್ಲಿ ಯಾವುದೇ ಅನಾನುಕೂಲವಾಗದಂತೆ ಎಚ್ಚರಿಕೆ ವಹಿಸಬೇಕೆಂದು ಅಭಿಪ್ರಾಯಪಟ್ಟರು. ಮೈಸೂರು ವರ್ತುಲ ರಸ್ತೆಯಲ್ಲಿ ಬೀದಿ ದೀಪ ಅಳವಡಿಕೆ ನಮ್ಮ ಆದ್ಯತೆಯಾಗಿದೆ. ಹಾಗಾಗಿ ಕಾಮಗಾರಿಗೆ ಚಾಲನೆ ಕೊಟ್ಟಿದ್ದೇವೆ. ಟೆಂಡರ್ ಕರೆಯಲಾಗಿದೆ. ಕೆಲಸ ಆರಂಭ ವಾಗಬೇಕು. ತಾಂತ್ರಿಕ ಸಮಸ್ಯೆಯಿಂದ ವಿಳಂಬವಾಗಿದೆ. ವರ್ಷಾಂತ್ಯಕ್ಕೆ ವರ್ತುಲ ರಸ್ತೆ ಕತ್ತಲೆಯಿಂದ ಮುಕ್ತವಾಗಲಿದೆ. ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಇದ್ದರು.

ಲಕ್ಷ್ಮಿಪುತ್ರನಿಗೆ 'ಶ್ರೀ ದತ್ತಾತ್ರೇಯ' ನಾಮಕರಣ

ತಾಯ್ತನದ ಆನಂದಲ್ಲಿರುವ ಲಕ್ಷ್ಮಿ ತನ್ನ ಕರುಳಕುಡಿಗೆ ಹಾಲುಣಿಸಿ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿದ್ದಾಳೆ. 'ಶ್ರೀ ದತ್ತಾತ್ರೇಯ'ನೂ ಕೂಡ ಅಮ್ಮನ ನೆರಳಲ್ಲೇ ಅತ್ತಿತ್ತ ಪುಟ್ಟ ಹೆಜ್ಜೆಗಳನ್ನಿಟ್ಟು ನಲಿಯುತ್ತಿದ್ದಾನೆ. ಪುಟ್ಟ ಮರಿಯೊಂದಿಗೆ ತಾಯಿಯನ್ನು ಕ್ಯಾಂಪ್‌ಗೆ ಸಾಗಿಸುವುದು ಸೂಕ್ತವಲ್ಲ ಎಂದು ಅಧಿಕಾರಿಗಳು ಅಭಿಪ್ರಾಯಿಸಿದ್ದು, ಇನ್ನೂ ಮೂರ್ನಾಲ್ಕು ತಿಂಗಳು 'ಲಕ್ಷ್ಮಿ' ಹಾಗೂ 'ಶ್ರೀ ದತ್ತಾತ್ರೇಯ' ಅರಮನೆ ಅಂಗಳದಲ್ಲೇ ಇರಲಿದ್ದಾರೆ. ಸದ್ಯ ಸುರಕ್ಷಿತ ಸ್ಥಳದಲ್ಲಿರುವ 'ತಾಯಿ–ಮಗ'ನ ಬಳಿ ಮಾವುತ, ವೈದ್ಯರು ಸೇರಿದಂತೆ ಕೆಲವರು ಮಾತ್ರ ಹೋಗಿ ಆರೈಕೆ ಮಾಡುತ್ತಿದ್ದಾರೆ. ಹೆಚ್ಚು ಜನರನ್ನು ನೋಡಿದರೆ ಆನೆ ಗಾಬರಿಯಿಂದ ವಿಚಲಿತಗೊಳ್ಳಬಹುದು ಎನ್ನುವ ಕಾರಣಕ್ಕೆ ಅತ್ತ ಯಾರೂ ಸುಳಿಯದಂತೆ ಎಚ್ಚರ ವಹಿಸಲಾಗಿದೆ. ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸಹೋದರಿ ವಿಶಾಲಾಕ್ಷಿ ದೇವಿಯವರು ಅರಣ್ಯ ಇಲಾಖೆ ಒಪ್ಪಿಗೆ ಪಡೆದು ಬಂಡೀಪುರ ಕಾಡಂಚಿನ ತಮ್ಮ ರೆಸಾರ್ಟ್‌ನಲ್ಲಿ 'ಲಕ್ಷ್ಮಿ'ಯನ್ನು ಸಾಕಿ ಸಲಹುತ್ತಿದ್ದರು. ನಂತರ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಅರಣ್ಯ ಇಲಾಖೆ ವಶಕ್ಕೆ ಒಪ್ಪಿಸಲಾಗಿದ್ದ 'ಲಕ್ಷ್ಮಿ'ಯನ್ನು ರಾಂಪುರ ಕ್ಯಾಂಪ್‌ನಲ್ಲಿ ಡಲಾಯಿತು. ದಸರಾ ಮೆರವಣಿಗೆಗೆಂದು ಆ.7ರಂದು ಆಗಮಿಸಿದ ಮೊದಲ ತಂಡದಲ್ಲೇ 'ಲಕ್ಷ್ಮಿ'ಯನ್ನೂ ಕರೆತರಲಾಗಿತ್ತು. ಆದರೆ ಸೆ.13ರ ಮಧ್ಯಾಹ್ನ ವರ್ತನೆಯಲ್ಲಿ ಬದಲಾವಣೆ ಗಮನಿಸಿ ಪರೀಕ್ಷೆ ನಡೆಸಿದಾಗ 'ಲಕ್ಷ್ಮಿ' ಗರ್ಭಿಣಿ ಎನ್ನುವುದು ಖಚಿತವಾಗಿತ್ತು. ತಕ್ಷಣ ಪ್ರತ್ಯೇಕವಾಗಿಟ್ಟು ನಿಗಾ ವಹಿಸಲಾಗಿತ್ತು. ಆವರೆಗೂ ಅರಣ್ಯ ಇಲಾಖೆ ಅಧಿಕಾರಿಗಳಿಗೂ ಈ ಬಗ್ಗೆ ಮಾಹಿತಿ ಇರಲಿಲ್ಲ. ಲಕ್ಷ್ಮಿ ಗರ್ಭಿಣಿ ಎನ್ನುವುದು ತಿಳಿದಿದ್ದರೆ ಕ್ಯಾಂಪ್‌ನಿಂದಲೇ ಕರೆತರುತ್ತಿರಲಿಲ್ಲ ಎಂದು ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ.

2017ರ ದಸರಾ ಮಹೋತ್ಸವಕ್ಕಾಗಿ ಮೊದಲ ಬಾರಿ ಲಕ್ಷ್ಮಿಯನ್ನು ಕರೆತರಲಾ ಗಿತ್ತು. ಆದರೆ ಸಿಡಿಮದ್ದು ತಾಲೀಮು ವೇಳೆ ಹೆಚ್ಚು ಬೆದರಿದ ಕಾರಣದಿಂದ ಮುಂಜಾಗ್ರತಾ ಕ್ರಮವಾಗಿ 'ಲಕ್ಷ್ಮಿ'ಯನ್ನು ಮೆರವಣಿಗೆಯಿಂದ ಕೈಬಿಡಲಾಗಿತ್ತು. ಇದೀಗ 2ನೇ ಬಾರಿ ದಸರೆಗೆ ಆಗಮಿಸಿರುವ 'ಲಕ್ಷ್ಮಿ' ಮರಿಗೆ ಜನ್ಮ ನೀಡಿದ್ದು, ಈ ಬಾರಿಯೂ ಮೆರವಣಿಗೆಯಲ್ಲಿ ಭಾಗಿಯಾಗುವುದಿಲ್ಲ. 'ಲಕ್ಷ್ಮಿ' 2 ಬಾರಿ ಅರಮನೆ ಅಂಗಳಕ್ಕೆ ಬಂದರೂ ಮೆರವಣಿಗೆಯಿಂದ ವಂಚಿತಳಾಗಿದ್ದಾಳೆ.

ಮೈಸೂರು ಮಿತ್ರ ಶುಕ್ರವಾರ 16 ಸೆಪ್ಟೆಂಬರ್ 2022

ಪ್ರಧಾನಿ ಮೋದಿ ಜನ್ಮ ದಿನದ ಅಂಗವಾಗಿ ನಾಳೆಯಿಂದ ಜಿಲ್ಲೆಯಲ್ಲಿ

ಸೇವಾ ಪಾಕ್ಷಿಕ ಕಾರ್ಯಕ್ರಮ

ಮಡಿಕೇರಿ,ಸೆ.15– ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜನ್ಮ ದಿನಾಚರಣೆ ದಿನವಾದ ಸೆ.17ರಿಂದ ಅ.2ರವರೆಗೆ ಭಾರತೀಯ ಜನತಾ ಪಾರ್ಟಿಯಿಂದ 'ಸೇವಾ ಪಾಕ್ಷಿಕ' ಕಾರ್ಯಕ್ರಮವನ್ನು ಜಿಲ್ಲೆಯಾದ್ಯಂತ ಆಯೋಜಿಸಲಾಗುತ್ತಿದೆ ಎಂದು ಜಿಲ್ಲಾ ಬಿಜೆಪಿ ಮಾಧ್ಯಮ ವಕ್ತಾರ ಸುಬ್ರಮಣ್ಯ ಉಪಾಧ್ಯಾಯ ಮಾಹಿತಿ ನೀಡಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಸಾಧನೆಯ ಮೂಲಕ ಇಡೀ ಜಗತ್ತು ಭಾರತದತ್ತ ತಿರುಗಿ ನೋಡುವಂತೆ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟಿದ ದಿನದಂದು ಅವರ ಉತ್ತಮ ಆರೋಗ್ಯಕ್ಕಾಗಿ, ಉತ್ತಮ ಭವಿಷ್ಯಕ್ಕಾಗಿ ಹಾರೈಸಿ ಪಕ್ಷದಿಂದ ಸೇವಾ ಕಾರ್ಯಗಳನ್ನು ನಡೆಸಲಾಗುತ್ತದೆ. ಅಂದು ಯುವ ಮೋರ್ಚಾ ವತಿಯಿಂದ ದೇಶದಾದ್ಯಂತ ರಕ್ತದಾನ ಶಿಬಿರಗಳು ನಡೆಯಲಿರುವುದಾಗಿ ತಿಳಿಸಿದರು.

ಸೇವಾ ಪಾಕ್ಷಿಕದ ಪ್ರಯುಕ್ತ ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದ ದೀನ್‌ದಯಾಳ್ ಉಪಾಧ್ಯಾಯರ ಜನ್ಮದಿನವಾದ ಸೆ.25 ರಂದು ಹಾಗೂ ಅ.2ರಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮ ದಿನವನ್ನು, ಹಿರಿಯ ಚೇತನಗಳಿಗೆ ಪುಷ್ಪಾರ್ಚನೆಯ ಮೂಲಕ ಗೌರವ ಸಲ್ಲಿಸುವುದರೊಂದಿಗೆ ಆಚರಿಸಲಾಗುತ್ತದೆ ಮತ್ತು ಸಂವಾದ ಕಾರ್ಯಕ್ರಮಗಳನ್ನು ಇದೇ ಸಂದರ್ಭ ಆಯೋಜಿಸಲಾಗುತ್ತದೆ ಎಂದು ಹೇಳಿದರು.

ಸೇವಾ ಪಾಕ್ಷಿಕದ ಅವಧಿಯಲ್ಲಿ ತಾಲೂಕು, ಬೂತ್, ಶಕ್ತಿ ಕೇಂದ್ರ ಮತ್ತು ಜಿಲ್ಲಾ ಮಟ್ಟದಲ್ಲಿ ಉಚಿತ ಆರೋಗ್ಯ ಶಿಬಿರಗಳನ್ನು, ರಕ್ತದಾನ ಶಿಬಿರ, ಸ್ವಚ್ಛ ಭಾರತ್ ಪರಿಕಲ್ಪನೆಯಡಿ ನದಿ, ಕೆರೆ, ಬಾವಿಗಳ ಸ್ವಚ್ಛತಾ ಕಾರ್ಯ, ದಿವ್ಯಾಂಗಿಗಳಿಗೆ ಕೃತಕ ಕಾಲುಗಳ ವಿತರಣೆಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ ಎಂದು ವಿವರಿಸಿದರು.

ಹೃದ್ರೋಗ ತಪಾಸಣೆ: ಸೇವಾ ಪಾಕ್ಷಿಕದಡಿ ಜಿಲ್ಲಾ ಮಟ್ಟದಲ್ಲಿ ಪತ್ರಕರ್ತರು, ಪತ್ರಿಕಾ ವಿತರಕರಿಗೆ ಹೃದ್ರೋಗ ತಪಾಸಣಾ ಶಿಬಿರವನ್ನು ಆಯೋಜಿಸುವ ಉದ್ದೇಶವಿದ್ದು, ಇದನ್ನು ಪಕ್ಷದ ವೈದ್ಯಕೀಯ ಪ್ರಕೋಷ್ಠದ ಮೂಲಕ ಆಯೋಜಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ದತ್ತು ಸ್ವೀಕಾರ: ಜಿಲ್ಲಾ ಬಿಜೆಪಿ ವಕ್ತಾರ ಮಹೇಶ್ ಜೈನಿ ಮಾತನಾಡಿ, 2025ರ ಒಳಗಾಗಿ ಭಾರತವನ್ನು ಕ್ಷಯರೋಗದಿಂದ ಮುಕ್ತಗೊಳಿಸಬೇಕೆಂದು ಪ್ರಧಾನಿಗಳು ಪಣತೊಟ್ಟಿದ್ದಾರೆ ಈ ಹಿನ್ನೆಲೆ ಬಿಜೆಪಿ ಪಕ್ಷದ ಕಾರ್ಯಕರ್ತರು ಮಂಡಲ ಮತ್ತು ಬೂತ್ ಮಟ್ಟದಲ್ಲಿ ಕ್ಷಯರೋಗಿಗಳನ್ನು ದತ್ತು ಪಡೆದು ಒಂದು ವರ್ಷಗಳ ಕಾಲ ಅವರ ಚಿಕಿತ್ಸೆ ಮತ್ತು ಪೌಷ್ಟಿಕತೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ ಎಂದು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಪ್ರಮುಖರಾದ ಸುವಿನ್ ಗಣಪತಿ, ಅರುಣ್ ಕುಮಾರ್ ಉಪಸ್ಥಿತರಿದ್ದರು.

ಫೋನ್ ಸಂಪರ್ಕಕ್ಕೆ ಸಿಗದ ಮಹಿಳೆಯನ್ನು ಚಾಕುವಿನಿಂದ ಇರಿದು ಕೊಂದ ಆರೋಪಿ

ಸೋಮವಾರಪೇಟೆ ಪೊಲೀಸರಿಂದ ಆರೋಪಿ ಬಂಧನ

ಸೋಮವಾರಪೇಟೆ, ಸೆ.15– ತನ್ನ ಜೊತೆ ಸ್ನೇಹ ಹೊಂದಿದ್ದ ಮಹಿಳೆ ಫೋನ್ ಸಂಪರ್ಕಕ್ಕೆ ಸಿಗದ ಹಿನ್ನೆಲೆಯಲ್ಲಿ ಆಕೆಯನ್ನು ಚೂರಿಯಿಂದ ಇರಿದು ಕೊಲೆ ಮಾಡಿರುವ ಘಟನೆ ಮಾದಾಪುರ ಸಮೀಪದ ಜಂಬೂರು ಬಾಣೆಯಲ್ಲಿ ಗುರುವಾರ ಸಂಭವಿಸಿದೆ.

ಜಂಬೂರು ನಿವಾಸಿ ಹಂಸ ಎಂಬುವರ ಪತ್ನಿ ಸಾಹಿರಾ(35) ಕೊಲೆಯಾದ ಮಹಿಳೆ. ಅದೇ ಗ್ರಾಮದ ನಿವಾಸಿ 50 ವರ್ಷದ ಪೂವಯ್ಯ (ಬೊಳ್ಳು) ಕೊಲೆ ಆರೋಪಿ. ಕಳೆದ 5 ವರ್ಷದ ಹಿಂದೆ ಹಂಸ ಪತ್ನಿಯನ್ನು ಬಿಟ್ಟು ಹೋಗಿದ್ದ. ನಂತರ ಪೂವಯ್ಯ ಹಾಗೂ ಸಾಹಿರಾ ಇಬ್ಬರೂ ಪರಸ್ಪರ ಸ್ನೇಹ ಹೊಂದಿದ್ದರು ಎನ್ನಲಾಗಿದೆ.

ಕಳೆದ ಎರಡು ದಿನದಿಂದ ಸಾಹಿರಾ ದೂರವಾಣಿ ಸಂಪರ್ಕಕ್ಕೆ ಸಿಗದ ಹಿನ್ನೆಲೆಯಲ್ಲಿ ಪೂವಯ್ಯ ಕುಪಿತಗೊಂಡಿದ್ದ. ಗುರುವಾರ ಬೆಳಗ್ಗೆ 9.30ರಲ್ಲಿ ಸಾಹಿರಾ ಮನೆಗೆ ತೆರಳಿ ಫೋನ್ ಸಂಪರ್ಕಕ್ಕೆ ಸಿಗದಿರುವ ಬಗ್ಗೆ ವಿಚಾರಿಸಿದ್ದಾನೆ. ಮನೆಯಲ್ಲಿ ಇನ್ನೊಬ್ಬ ಗಂಡಸು ಇದ್ದ ಹಿನ್ನೆಲೆಯಲ್ಲಿ ರೋಷಗೊಂಡು ಮನೆಗೆ ಬಂದು ಚಾಕು ಹಿಡಿದು ತೆರಳಿದ್ದಾನೆ. ಅಷ್ಟೊತ್ತಿಗಾಗಲೇ ಮನೆಯಲ್ಲಿದ್ದ ವ್ಯಕ್ತಿ ಹೊರ ಹೋಗಿದ್ದ. ಈ ಬಗ್ಗೆ ಸಾಹಿರಾಳೊಂದಿಗೆ ಜಗಳ ಮಾಡಿದ ಆರೋಪಿ ಪೂವಯ್ಯ ಕುತ್ತಿಗೆ ಮತ್ತು ಕಂಕುಳ ಭಾಗಕ್ಕೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾನೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ತಾಯಿಯನ್ನು ಮಕ್ಕಳು ಮಡಿಕೇರಿ ಜಿಲ್ಲಾಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮಧ್ಯಾಹ್ನದ ವೇಳೆಗೆ ಸಾಹಿರಾ ಮೃತಪಟ್ಟಿದ್ದಾರೆ.



ಸೋಮವಾರಪೇಟೆ ತಾಲೂಕಿನ ಜಂಬೂರು ಗ್ರಾಮದಲ್ಲಿ ಕೊಲೆಯಾದ ಮಹಿಳೆಯ ಮನೆಗೆ ಜಿಲ್ಲಾ ಎಸ್ಪಿ ಅಯ್ಯಪ್ಪ ಭೇಟಿ ನೀಡಿ ಪರಿಶೀಲಿಸುತ್ತಿರುವುದು. ಡಿವೈಎಸ್‌ಪಿ ಗಂಗಾಧರಪ್ಪ, ಇನ್ಸ್‌ಪೆಕ್ಟರ್ ರಾಮಚಂದ್ರನಾಯಕ್ ಇದ್ದರು.

ಘಟನಾ ಸ್ಥಳಕ್ಕೆ ಪೊಲೀಸ್ ಜಿಲ್ಲಾ ವರಿಷ್ಠಾಧಿಕಾರಿ ಅಯ್ಯಪ್ಪ, ಡಿವೈಎಸ್‌ಪಿ ಗಂಗಾಧರಪ್ಪ, ಇನ್ಸ್‌ಪೆಕ್ಟರ್ ರಾಮಚಂದ್ರನಾಯಕ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಸೋಮವಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿ ಪೂವಯ್ಯ ವಿವಾಹಿತನಾಗಿದ್ದು, ಆತನಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ.

ಕೊಡಗು ವಿಪತ್ತು ನಿರ್ವಹಣೆಯಲ್ಲಿ ಭಾರತೀಯ ವಿದ್ಯಾಭವನ ಸಹಾಯಹಸ್ತ

ಸಂತ್ರಸ್ತರಿಗೆ ಸ್ವಾವಲಂಬಿ ಬದುಕು ಕಲ್ಪಿಸುವ ಸ್ತುತ್ಯಾರ್ಹ ಕಾರ್ಯಕ್ಕೆ ನಾಲ್ಕು ವರ್ಷ....

ಕೆ.ಬಿ.ಗಣಪತಿ
ಛೇರ್ಮನ್, ಬಿವಿಬಿ ಮೈಸೂರು



ಮಡಿಕೇರಿ, ಸೆ.15– ಕೊಡಗಿನ ಪಾಲಿಗೆ 2018 ಕರಾಳ ವರ್ಷವೆಂದೇ ಹೇಳಬಹುದು. ಆಗ ಸುರಿದ ಧಾರಾಕಾರ ಮಳೆಯ ಪರಿಣಾಮ ಉತ್ತರ ಕೊಡಗು ಮತ್ತು ಸೋಮವಾರಪೇಟೆ ತಾಲೂಕಿನಲ್ಲಿ ಸಂಭವಿಸಿದ ಪ್ರಾಕೃತಿಕ ವಿಪತ್ತು, ಭೂ ಕುಸಿತ, ಪ್ರವಾಹ, ಆಸ್ತಿ–ಪಾಸ್ತಿಗಳ ಹಾನಿ, ಜನ–ಜಾನುವಾರುಗಳು ಅನುಭವಿಸಿದ ಯಾತನೆ ಹಿಂದೆಂದೂ ಕಂಡಿಲ್ಲ, ಕೇಳಿಲ್ಲ.

ಆಗ ಸಂಭವಿಸಿದ ಪ್ರಾಕೃತಿಕ ವಿಪತ್ತಿನಿಂದಾಗಿ ಸಾವಿರಾರು ಜನ ಮನೆ–ಮಠ, ಆಸ್ತಿ–ಪಾಸ್ತಿ ಕಳೆದುಕೊಂಡು, ಉಚಿತ ಆಹಾರ ಕಲ್ಪಿಸಲಾಗುತ್ತಿದ್ದಂತಹ ಶಾಲೆ ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿನ ಆಶ್ರಯ ಕೇಂದ್ರಗಳಲ್ಲಿ ತಂಗಬೇಕಾಯಿತು. ಶೋಚನೀಯ ಸ್ಥಿತಿಯೆಂದರೆ ಕಾಫಿ ಎಸ್ಟೇಟ್‌ಗಳೇ ಭೂ ಕುಸಿತಕ್ಕೆ ತುತ್ತಾಗಿದ್ದರಿಂದ ಸ್ಥಿತಿವಂತರೂ ಇಂತಹ ಆಶ್ರಯ ಕೇಂದ್ರಗಳಲ್ಲಿ ಆಶ್ರಯ ಪಡೆಯಬೇಕಾಗಿ ಬಂತು.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಸರ್ಕಾರ ಮತ್ತು ಹಲವಾರು ಎನ್‌ಜಿಓಗಳು ಹಾಗೂ ಸಾಮಾಜಿಕ ಸಂಘಟನೆಗಳು ನಿರಾಶ್ರಿತರ ನೆರವಿಗೆ ಧಾವಿಸಿದವು. ಅವುಗಳಲ್ಲಿ **ಭಾರತೀಯ ವಿದ್ಯಾಭವನ (ಬಿವಿಬಿ) ಮಡಿಕೇರಿ ಕೇಂದ್ರವೂ** ಒಂದು. ನಿರಾಶ್ರಿತರ ನೆರವಿಗಾಗಿ ಬಿವಿಬಿ 2018ರ ಸೆಪ್ಟೆಂಬರ್ ತಿಂಗಳಿನಲ್ಲಿ **'ಬಿವಿಬಿ ಭವನ್ಸ್ ಪ್ರಾಜೆಕ್ಟ್ ಕೂರ್ಗ್'** ಆರಂಭಿಸಿತು. ಯೋಜನಾಬದ್ಧವಾಗಿ ನಿರಾಶ್ರಿತರನ್ನು ಸ್ವಾವಲಂಬಿಗಳಾಗಿಸುವ ಹಾಗೂ ಅವರ ಬದುಕಿಗೆ ಭರವಸೆ ತುಂಬುವಂತಹ ಯಶಸ್ವಿ ಕಾರ್ಯಗಳನ್ನು ಬಿವಿಬಿ ಆರಂಭಿಸಿ, ಈ ತಿಂಗಳಿಗೆ ನಾಲ್ಕು ವರ್ಷ ಪೂರ್ಣಗೊಳ್ಳಲಿದೆ.

ಭೂ ಕುಸಿತದಿಂದ ಮನೆ–ಮಠ, ಜಮೀನು, ಕಾಫಿ ಎಸ್ಟೇಟ್, ಭತ್ತದ ಗದ್ದೆಗಳನ್ನು ಕಳೆದುಕೊಂಡು ಅಕ್ಷರಶಃ ಭೌಗೋಳಿಕ ಚಿತ್ರಣವೇ ಬದಲಾಗಿದ್ದ ಕಾಲೂರು ಗ್ರಾಮವನ್ನು ಪ್ರಾಜೆಕ್ಟ್ ಕೂರ್ಗ್‌ಗಾಗಿ ಬಿವಿಬಿ ಆಯ್ಕೆ ಮಾಡಿಕೊಂಡಿತು.

ಸ್ವಾಭಾವಿಕವಾಗಿ ಈ ಗ್ರಾಮದಲ್ಲಿ ಹಲವಾರು ಕುಟುಂಬಗಳು ಸಂಪೂರ್ಣವಾಗಿ ದುಸ್ಥಿತಿಗೆ ತಲುಪಿದ್ದವು. ಜೀವನೋಪಾಯಕ್ಕೂ ದಾರಿಕಾಣದೆ ಅಲ್ಲಿನ ಜನರ ಭವಿಷ್ಯ ಕಗ್ಗತ್ತಲಾಗಿತ್ತು. ಈ ಜನರು ಎಷ್ಟು ದಿನ ತಾನೆ ಆಶ್ರಯ ಕೇಂದ್ರಗಳಲ್ಲಿ ನೆಲೆಸಲು ಸಾಧ್ಯ?



ಇಂತಹ ಹೀನಾಯ ಪರಿಸ್ಥಿತಿಯನ್ನು ಮನಗಂಡ ಬಿವಿಬಿ ಭವನ್ಸ್ ಪ್ರಾಜೆಕ್ಟ್ ಕೂರ್ಗ್‌ನ ಸಂರಕ್ಷಣಾ ವಿಭಾಗವು ಕಾಲೂರು ಗ್ರಾಮದ ಮಹಿಳೆಯರಿಗೆ ಸಹಾಯಹಸ್ತ ನೀಡಲು ಮುಂದಾಯಿತು. ಈ ಮಹಿಳೆಯರಿಗೆ ಮಾನಸಿಕ ಸ್ಥೈರ್ಯ ಹಾಗೂ ಆರ್ಥಿಕ ಸ್ವಾವಲಂಬನೆ ಎರಡನ್ನೂ ಕಲ್ಪಿಸಿತು.

ಆರಂಭಿಕ ಹಂತದಲ್ಲಿ ಬಿವಿಬಿ 'ಯಶಸ್ವಿ' ಯೋಜನೆಯಡಿ ಗ್ರಾಮದ 65 ಮಹಿಳೆಯರಿಗೆ ಆಹಾರ ಸಂಸ್ಕರಣೆ ಮತ್ತು ಹೊಲಿಗೆ ತರಬೇತಿ ನೀಡುವ ಮೂಲಕ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ ಆರಂಭಿಸಿತು. ಕೇವಲ ತರಬೇತಿ ನೀಡುವುದಕ್ಕಷ್ಟೇ ಸೀಮಿತಗೊಳ್ಳದ ಬಿವಿಬಿ ಈ ಮಹಿಳೆಯರಿಗೆ ನಿಯಮಿತವಾಗಿ ಉದ್ಯೋಗವನ್ನು ಒದಗಿಸಿತು. 'ಕೂರ್ಗ್ ಫ್ಲೇವರ್ಸ್' ಬ್ರಾಂಡ್‌ನಡಿ ಉತ್ತಮ ಗುಣಮಟ್ಟದಲ್ಲಿ ಪ್ಯಾಕ್ ಮಾಡಲಾದ ಉತ್ತಮ ಗುಣಮಟ್ಟದ ಮಸಾಲೆಗಳ ಉತ್ಪಾದನೆಯಲ್ಲಿ ಈ ಮಹಿಳೆಯರು ತೊಡಗಿಸಿಕೊಳ್ಳುವಂತೆ ಮಾಡಿತು. ಅದೇ ವೇಳೆ ಹೊಲಿಗೆ ಯಂತ್ರಗಳು ಹಾಗೂ ಅಗತ್ಯ ಸೌಲಭ್ಯಗಳೊಂದಿಗೆ ಟೈಲರಿಂಗ್ ಘಟಕವನ್ನು ಸ್ಥಾಪಿಸಿತು.



ಆಗ ಸ್ಥಾಪಿಸಲ್ಪಟ್ಟ ಈ ಘಟಕವು ಈಗ ಶಾಲಾ ಮಕ್ಕಳಿಗೆ ಸಮವಸ್ತ್ರ, ಎನ್‌ಸಿಸಿ ಸಮವಸ್ತ್ರ, ಸರ್ಕಾರಿ ಇಲಾಖೆಗಳು ಹಾಗೂ ಖಾಸಗಿ ಸಂಘ ಸಂಸ್ಥೆಗಳಿಗೆ ಅಗತ್ಯವಿರುವ ಸಮವಸ್ತ್ರವನ್ನು ಸಿದ್ಧಪಡಿಸಿ, ಪೂರೈಸುವ ಕಾರ್ಯವನ್ನು ಯಶಸ್ವಿಯಾಗಿ ಮಾಡುತ್ತಿದೆ. ಈ ಮೂಲಕ ಕಾಲೂರು ಗ್ರಾಮದ ಪ್ರತಿಯೊಬ್ಬ ಮಹಿಳೆಯೂ ಸಾಕಷ್ಟು ಆದಾಯ ಗಳಿಸಿ, ಆರ್ಥಿಕ ಸ್ವಾವಲಂಬನೆ ಹೊಂದುವಂತಾಗಿದೆ.

ಆಹಾರ ಸಂಸ್ಕರಣೆ ಘಟಕವು ಈಗ ಹೋಂ ಮೇಡ್ ಚಾಕೊಲೇಟ್, ಮಸಾಲ ಪದಾರ್ಥಗಳು ಸೇರಿದಂತೆ ವಿವಿಧ ಆಹಾರ ಉತ್ಪನ್ನಗಳನ್ನು ತಯಾರಿಸುತ್ತಿದೆ. ಬಿವಿಬಿ ಭವನ್ಸ್ ಪ್ರಾಜೆಕ್ಟ್ ಕೂರ್ಗ್ ಕೊಡಗು ಜಿಲ್ಲಾ ಕೇಂದ್ರವಾದ ಮಡಿಕೇರಿಯಲ್ಲಿ 2 ಮಳಿಗೆಗಳನ್ನು ಹೊಂದಿದ್ದು, ಇವು ಯೋಜನೆಯ ಸಮರ್ಪಕ ನಿರ್ವಹಣೆಗೆ ಸಹಕಾರಿಯಾಗಿದೆ. ಈ ಮೂಲಕ ಬಿವಿಬಿ ಅಸಹಾಯಕ ಮಹಿಳೆಯರನ್ನು ಸ್ವಾವಲಂಬಿಗಳಾಗಿಸಿದೆ. ಈ ಒಂದು ಉದ್ಯಮಶೀಲತೆ ಬೆಳೆದು, ಸುಸ್ಥಿರ ಗೊಳ್ಳಬೇಕಾದರೆ ಜನತೆಯ ಬೆಂಬಲವೂ ಬೇಕಿದೆ.

ಹೆಚ್ಚಿನ ಮಾಹಿತಿಗಾಗಿ **ಬಿವಿಬಿ ಮಡಿಕೇರಿ ಕೇಂದ್ರದ ಗೌರವ ಕಾರ್ಯದರ್ಶಿ ಬಾಲಾಜಿ ಕಶ್ಯಪ್** ಅವರನ್ನು ಮೊಬೈಲ್ ಸಂಖ್ಯೆ 9845831683 ಮೂಲಕ ಸಂಪರ್ಕಿಸಬಹುದಾಗಿದೆ.

ತಾಲೂಕು ಒಕ್ಕಲಿಗರ ಸಂಘಕ್ಕೆ ಕೆಪಿಸಿಸಿ ಅಧ್ಯಕ್ಷ ಡಿಕೆಶಿ 1.02 ಎಕರೆ ಜಮೀನು ದಾನ

ಚಾ.ನಗರ ಉಪನೋಂದಣಿ ಕಛೇರಿಗೆ ಆಗಮಿಸಿ ಪ್ರಕ್ರಿಯೆ ಪೂರ್ಣಗೊಳಿಸಿದ ಡಿ.ಕೆ.ಶಿವಕುಮಾರ್



ಚಾಮರಾಜನಗರ, ಸೆ.15– ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇಂದು ಚಾಮರಾಜನಗರ ಉಪ ನೋಂದಣಿ ಅಧಿಕಾರಿಗಳ ಕಚೇರಿಗೆ ಆಗಮಿಸಿ ತಾಲೂಕು ಒಕ್ಕಲಿಗರ ಸಂಘಕ್ಕೆ ನಗರದ ಹೊರ ವಲಯದಲ್ಲಿರುವ ಮರಿಯಾಲದ ರೈಲ್ವೆ ಗೇಟ್ ಹತ್ತಿರ 1.02 ಎಕರೆ ಜಮೀನನ್ನು ಖರೀದಿ ಮಾಡಿ ತಾಲೂಕು ಒಕ್ಕಲಿಗರ ಸಂಘಕ್ಕೆ ದಾನವಾಗಿ ನೀಡಿದರು.

ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಕೆ.ಪುಟ್ಟಸ್ವಾಮಿಗೌಡರು ಸಂಘಕ್ಕೆ ನಿವೇಶನ ನೀಡುವಂತೆ ಮನವಿ ಮಾಡಿಕೊಂಡಿದ್ದ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು 1.02 ಎಕರೆ ಜಮೀನನ್ನು ತಾವು ಖರೀದಿ ಮಾಡಿ, ಚಾ.ನಗರ ಕಚೇರಿಗೆ ತಮ್ಮ ಪಕ್ಷದ ಕಾರ್ಯಕ್ರಮದ ನಿಮಿತ್ತ ಆಗಮಿಸಿದ್ದ ಸಂದರ್ಭದಲ್ಲಿ ಬಿಡುವು ಮಾಡಿಕೊಂಡು ಮಧ್ಯಾಹ್ನ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಉಪ ನೋಂದಣಿ ಕಚೇರಿಗೆ ಆಗಮಿಸಿ, ತಮ್ಮ ಹೆಸರಿಗೆ ಜಮೀನು ಕ್ರಮ ಮಾಡಿಸಿಕೊಂಡರು. ಬಳಿಕ ಇದರ ಸಂಪೂರ್ಣ ವಾರಸುದಾರಿಕೆಯನ್ನು (ಜಿಪಿಎ ಓಲ್ಡರ್) ಅನ್ನು ತಾಲೂಕು ಅಧ್ಯಕ್ಷ ಕೆ.ಪುಟ್ಟಸ್ವಾಮಿಗೌಡರಿಗೆ ನೀಡಿದರು.

ಬಳಿಕ ಕಚೇರಿಯಿಂದ ಡಿ.ಕೆ. ಶಿವಕುಮಾರ್ ಹೊರ ಬರುತ್ತಿದ್ದಂತೆ ಅಭಿಮಾನಿಗಳು ಹಾಗೂ ಒಕ್ಕಲಿಗರ ಸಂಘದ ಪದಾಧಿಕಾರಿಗಳು ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಂದು ಜೈಕಾರ ಹಾಕಿ ಸಂಭ್ರಮಿಸಿದರು. ಚಾಮರಾಜನಗರ ಉಪನೋಂದಣಾಧಿಕಾರಿ ಕಚೇರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಆಗಮಿಸುತ್ತಿದ್ದಂತೆ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಕೆ. ಪುಟ್ಟಸ್ವಾಮಿಗೌಡ, ಉಪಾಧ್ಯಕ್ಷ ಪಣ್ಯದಹುಂಡಿರಾಜು, ಕರಿಯನಕಟ್ಟೆ ಚಿನ್ನಮುತ್ತು, ಪದಾಧಿಕಾರಿಗಳಾದ ಸೋಮಣ್ಣ, ಜಯಪ್ರಕಾಶ್, ರಘು, ನಾಗರಾಜು, ಗೋವಿಂದೇಗೌಡ, ಎಲ್ ಐಸಿ ರಾಜು, ಬೋರೇಗೌಡ, ಭೈರೇಗೌಡ, ಮನೋಜ್, ಡಿ.ನಾಗರಾಜು, ಹೊಮ್ಮ ಶೇಖರ್, ಲೋಕೇಶ್ ಅನೇಕರು ಶಾಲು ಹೊದಿಸಿ ಹಾರ ಹಾಕಿ ಅಭಿನಂದಿದರು.

ಚಾ.ನಗರ ದಸರಾ ಸಿದ್ಧತೆ ಪರಿಶೀಲಿಸಿದ ಡಿಸಿ

ಮಹದೇಶ್ವರ ಬೆಟ್ಟದಲ್ಲಿ ಮಹಾಲಯ ಅಮಾವಾಸ್ಯೆ, ದೀಪಾವಳಿ ಜಾತ್ರಾ ಮಹೋತ್ಸವದ ಬಗ್ಗೆಯೂ ಮಾಹಿತಿ ಸಂಗ್ರಹ

ಚಾಮರಾಜನಗರ, ಸೆ.15– ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಚಾಮರಾಜನಗರ ದಸರಾ ಮಹೋತ್ಸವ ಆಚರಣೆ ಸಂಬಂಧ ಕೈಗೊಂಡಿರುವ ಸಿದ್ಧತೆಗಳನ್ನು ಇಂದು ಪರಿಶೀಲಿಸಿದರು.



ನಗರದ ತಮ್ಮ ಕಚೇರಿ ಸಭಾಂಗಣದಲ್ಲಿ ದಸರಾ ಮಹೋತ್ಸವ ಆಚರಣೆ ಹಿನ್ನೆಲೆಯಲ್ಲಿ ಕರೆಯಲಾಗಿದ್ದ ಅಧಿಕಾರಿಗಳ ಸಭೆಯಲ್ಲಿ ವಿವಿಧ ಸಮಿತಿಗಳು ನಡೆಸಿರುವ ಸಿದ್ಧತೆಗಳ ಸಂಬಂಧ ಮಾಹಿತಿ ಪಡೆದುಕೊಂಡರು.

ಈಗಾಗಲೇ ನಿಗದಿಪಡಿಸಿರುವಂತೆ ದಸರಾ ಮುಖ್ಯ ಕಾರ್ಯಕ್ರಮಗಳು, ಪೂಜಾ ಕೈಂಕರ್ಯ, ವೇದಿಕೆ ಸಿದ್ಧತೆ, ಕಲಾತಂಡಗಳ ಮೆರವಣಿಗೆ ಸೇರಿದಂತೆ ಇತರೆ ಕಾರ್ಯಕ್ರಮಗಳಿಗೆ ಪೂರ್ವ ಸಿದ್ಧತೆಯನ್ನು ತ್ವರಿತವಾಗಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕು ಮಟ್ಟದ ದಸರಾ ಕಾರ್ಯಕ್ರಮಗಳಿಗೂ ಸೂಕ್ತ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಚಾಮರಾಜನಗರ ಪಟ್ಟಣದಲ್ಲಿ ಆಕರ್ಷಕ ದೀಪಾಲಂಕಾರ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ತ್ವರಿತವಾಗಿ ಪ್ರಕ್ರಿಯೆ ಆರಂಭಿಸಬೇಕು ಎಂದರು.

ಫಲಪುಷ್ಪ ಪ್ರದರ್ಶನ ಸಹ ಜಿಲ್ಲಾಡಳಿತ ಭವನದ ಆವರಣದಲ್ಲಿ ಏರ್ಪಾಡಾಗುತ್ತಿದ್ದು, ಇದರಲ್ಲಿ ವಿವಿಧ ಇಲಾಖೆಗಳು ಜಾಗೃತಿ ಹಾಗೂ ಇಲಾಖೆಯ ಯೋಜನೆಯ ಬಗ್ಗೆ ತಿಳಿಸಿಕೊಡುವ ಕೆಲಸವೂ ಆಗಬೇಕು ಎಂದರು.

ರೈತ ದಸರಾ, ಮಹಿಳಾ ದಸರಾ, ಮ್ಯಾರಥಾನ್ ಸೇರಿದಂತೆ ಇನ್ನಿತರ ದಸರಾ ಅಂಗವಾಗಿ ಈಗಾಗಲೇ ಸೂಚಿಸಿರುವ ಎಲ್ಲಾ ಕಾರ್ಯಕ್ರಮಗಳಿಗೆ ಕೂಡಲೇ ಪ್ರಕ್ರಿಯೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಸೂಚಿಸಿದರು.

ಇದಾದ ಬಳಿಕ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯಲಿರುವ ಮಹಾಲಯ ಅಮಾವಾಸ್ಯೆ, ದಸರಾ ದೀಪಾವಳಿ, ಕಾರ್ತಿಕ ಮಾಸ ಜಾತ್ರಾ ಮಹೋತ್ಸವದ ಸಿದ್ಧತೆಗಳನ್ನು ಜಿಲ್ಲಾಧಿಕಾರಿಯವರು ಪರಿಶೀಲಿಸಿದರು.

ಭಕ್ತಾದಿಗಳ ಸೌಲಭ್ಯಕ್ಕಾಗಿ ಕೈಗೊಳ್ಳಲಾಗಿರುವ ಕುಡಿಯುವ ನೀರು, ವಾಸ್ತವ್ಯ, ದಾಸೋಹ, ಬಸ್ಸುಗಳ ನಿಯೋಜನೆ, ಶೌಚಾಲಯ, ಸ್ನಾನ ಗೃಹಗಳ ವ್ಯವಸ್ಥೆಯ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಜಾತ್ರಾ ಸಂದರ್ಭದಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ, ಸುಗಮ ಸಂಚಾರ, ವಾಹನಗಳ ನಿಲುಗಡೆ, ಮಾಹಿತಿ ಕೇಂದ್ರಗಳು ಸೇರಿದಂತೆ ಇನ್ನಿತರ ಸಿದ್ಧತೆಗಳನ್ನು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಪರಿಶೀಲಿಸಿದರು.

ಜಿಪಂ ಸಿಇಓ ಕೆ.ಎಂ. ಗಾಯಿತ್ರಿ, ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಸ್. ಕಾತ್ಯಾಯಿನಿ ದೇವಿ, ಉಪಕಾರ್ಯದರ್ಶಿ ಬಸವರಾಜು, ಎಎಸ್‌ಪಿ ಕೆ.ಎಸ್. ಸುಂದರ್‌ರಾಜ್, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ತಹಸೀಲ್ದಾರ್ ಬಸವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಗುರುಲಿಂಗಯ್ಯ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ರಾಷ್ಟ್ರೀಯ ಹೆದ್ದಾರಿ ಗುಂಡಿ ಮುಚ್ಚಿ ಜನರ ಜೀವ ಉಳಿಸಲು ಆಗ್ರಹ

ಚಾಮರಾಜನಗರ, ಸೆ.15– ನಗರದ ರಾಷ್ಟ್ರೀಯ ಹೆದ್ದಾರಿ 209ರಲ್ಲಿ ಬೈಪಾಸ್ ರಸ್ತೆ ಹತ್ತಿರ ಬಿದ್ದಿರುವ ಗುಂಡಿಗಳನ್ನು ಮುಚ್ಚಿ ಪ್ರಯಾಣಿಕರ ಜೀವ ಉಳಿಸಬೇಕು ಎಂದು ಅಂಬೇಡ್ಕರ್ ಸೇನೆಯ ಜಿಲ್ಲಾಧ್ಯಕ್ಷ ಗಣೇಶ್ ಪ್ರಸಾದ್ ಸರ್ಕಾರವನ್ನು ಆಗ್ರಹಿಸಿದ್ದಾರೆ.



ಚಾಮರಾಜನಗರದಿಂದ ಸತ್ಯಮಂಗಲದವರೆಗೆ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 209 ರಲ್ಲಿ ಬೈಪಾಸ್ ರಸ್ತೆ ಹತ್ತಿರ ಇಳಿಜಾರಿನಲ್ಲಿ ಚರಂಡಿ ಕೊಳಚೆ ನೀರು ಹರಿದು ರಸ್ತೆ ಗುಂಡಿಮಯವಾಗಿದ್ದು, ಈ ರಸ್ತೆಯಲ್ಲಿ ನಿತ್ಯ ವಾಹನಗಳ ನಿರಂತರ ಓಡಾಟವಿದ್ದು, ಗುಂಡಿಯ ಬದಲಿಗೆ ರಸ್ತೆಯನ್ನೇ ಹುಡುಕುವಂತಾಗಿದೆ ಎಂದಿದ್ದಾರೆ.

ಇಲ್ಲಿ ಅಪಘಾತಗಳು ಸಂಭವಿಸಿ ಸಾವು, ನೋವುಗಳಾಗಿರುವ ಅನೇಕ ನಿದರ್ಶನಗಳಿವೆ. ಕೂಡಲೇ ರಸ್ತೆಗುಂಡಿಗಳನ್ನು ಮುಚ್ಚಿ ಮುಂದೆ ಯಾವುದೇ ಅನಾಹುತಗಳ ನಡೆಯದಂತೆ ಸಂಸದರು, ಸರ್ಕಾರ, ಜಿಲ್ಲಾಡಳಿತ ಇತ್ತ ಕಡೆ ಗಮನ ಹರಿಸಿ ರಸ್ತೆ ಅಭಿವೃದ್ಧಿಗೆ ಕ್ರಮಕೈಗೊಂಡು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು. ಇಲ್ಲದಿದ್ದರೆ ತಮ್ಮ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ಗಣೇಶ್‌ಪ್ರಸಾದ್ ಎಚ್ಚರಿಸಿದ್ದಾರೆ.

ಪಾಳು ಬಾವಿಗೆ ಬಿದ್ದಿದ್ದ ಜಿಂಕೆ ರಕ್ಷಣೆ

ಗುಂಡ್ಲುಪೇಟೆ, ಸೆ.15– ಕಾಡಿನಿಂದ ನಾಡಿಗೆ ಆಹಾರವನ್ನರಸಿ ಬಂದು ತಾಲೂಕಿನ ಕಬ್ಬಹಳ್ಳಿ ಗ್ರಾಮದ ಪಾಳು ಬಾವಿಗೆ ಬಿದ್ದಿದ್ದ ಜಿಂಕೆಯನ್ನು ಅರಣ್ಯಾಧಿಕಾರಿಗಳು ರಕ್ಷಿಸಿರುವ ಘಟನೆ ಬುಧವಾರ ನಡೆದಿದೆ.

ಗ್ರಾಮದ ಮಹೇಶ್ ಎಂಬುವರ ಜಮೀನಿನಲ್ಲಿ ನೀರಿಲ್ಲದ ಬಾವಿಗೆ ಗಂಡು ಜಿಂಕೆ ಬಿದ್ದಿರುವ ಮಾಹಿತಿ ಮೇರೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿ ಬಲೆ ಹಾಕಿ 20 ಅಡಿ ಆಳದ ಬಾವಿಯಿಂದ ಮೇಲೆತ್ತಲಾಯಿತು. ಅರಣ್ಯ ಇಲಾಖೆಯ ಪಶುವೈದ್ಯ ಡಾ.ವಾಸಿಂ ಜಿಂಕೆಯ ಗಾಯಗಳಿಗೆ ಚಿಕಿತ್ಸೆ ನೀಡಿದ ನಂತರ ಅರಣ್ಯಕ್ಕೆ ಬಿಡಲಾಯಿತು.



ಕಾರ್ಯಾಚರಣೆಯಲ್ಲಿ ಗುಂಡ್ಲುಪೇಟೆ ಉಪವಿಭಾಗದ ಎಸಿಎಫ್ ರವೀಂದ್ರ ಆರ್‌ಎಫ್‌ಓ ಡಾ.ಲೋಕೇಶ್, ಡಿಆರ್‌ಎಫ್‌ಓ ಮುದ್ದುರಾಜ್ ಹಾಗೂ ಇತರರು ಇದ್ದರು.

ಗರ್ಭಿಣಿ ಪತ್ನಿ ಕೊಲೆ ಮಾಡಿದ್ದ ಪತಿಗೆ ಜೀವಾವಧಿ ಶಿಕ್ಷೆ

ಚಾಮರಾಜನಗರ,ಸೆ.15– ಪ್ರೀತಿಸಿ ಮದುವೆಯಾಗಿದ್ದ ಪತ್ನಿಯನ್ನು ಉಸಿರು ಕಟ್ಟಿಸಿ ಕೊಲೆ ಮಾಡಿದ ಪತಿಗೆ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.

ಕೊಳ್ಳೇಗಾಲ ತಾಲ್ಲೂಕು ರಾಚಪ್ಪಾಜಿ ನಗರದ ಮುತ್ತುರಾಜು ಅಲಿಯಾಸ್ ಚಿನಕಯ್ಯ ಶಿಕ್ಷೆಗೆ ಗುರಿಯಾದ ಅಪರಾಧಿ. 2013ರ ಸೆಪ್ಟೆಂಬರ್ 25ರಂದು ಕೊಲೆ ಪ್ರಕರಣ ದಾಖಲಾಗಿತ್ತು.

ವೃತ್ತಿಯಲ್ಲಿ ಟ್ರ್ಯಾಕ್ಟರ್ ಚಾಲಕನಾಗಿದ್ದ ಮುತ್ತುರಾಜು ಜ್ಯೋತಿ ಎಂಬಾಕೆಯನ್ನು ಪ್ರೀತಿಸಿದ್ದ. ಆಕೆಯ ಮನೆಯವರ ವಿರೋಧದ ನಡುವೆಯೂ ಆಕೆಯನ್ನೇ ಮದುವೆಯಾಗುವುದಾಗಿ ಪಟ್ಟು ಹಿಡಿದು ಮದುವೆಯಾಗಿದ್ದ. ಸ್ವಲ್ಪ ದಿನಗಳವರೆಗೆ ಜ್ಯೋತಿಯನ್ನು ಮುತ್ತುರಾಜು ಚೆನ್ನಾಗಿ ನೋಡಿಕೊಂಡಿದ್ದ. ಆಕೆ ಗರ್ಭಿಣಿಯೂ ಆಗಿದ್ದಳು. ಆದರೆ, ನಂತರ ಜ್ಯೋತಿಯೊಂದಿಗೆ ಜಗಳವಾಡಲು ಆರಂಭಿಸಿದ್ದ. 'ನಾನು ಗೊಲ್ಲ ಜನಾಂಗದವನು. ನೀನು ಕೀಳು ಜಾತಿಗೆ ಸೇರಿದ ಸೋಲಿಗಳಾಗಿದ್ದು, ನಿನ್ನನ್ನು ಪ್ರೀತಿಸಿ ಮದುವೆಯಾಗಿ ನಮ್ಮ ಮನೆಯವರನ್ನೆಲ್ಲ ದೂರ ಮಾಡಿಕೊಂಡು ದೊಡ್ಡ ತಪ್ಪು ಮಾಡಿದೆ. ಈಗಲೂ ನಿನ್ನನ್ನು ಯಾರಿಗೂ ತಿಳಿಯದ ಹಾಗೆ ಕೊಲೆ ಮಾಡಿ ನಮ್ಮ ಜಾತಿಯ ಹುಡುಗಿಯನ್ನು ಮದುವೆ ಮಾಡಿಕೊಳ್ಳುತ್ತೇನೆ' ಎಂದು ಹೇಳಿ ಮಾನಸಿಕ ಕಿರುಕುಳ ನೀಡುತ್ತಿದ್ದನೆನ್ನಲಾಗಿದೆ.

ಜ್ಯೋತಿ 3 ತಿಂಗಳ ಗರ್ಭಿಣಿಯಾಗಿದ್ದಾಗ ಆಕೆಯನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ. 2013ರ ಸೆ.24ರಂದು ಮುತ್ತುರಾಜು, ಜ್ಯೋತಿಯನ್ನು ಕರೆದು, 'ನೀನು ನಿನ್ನ ತವರು ಮನೆಗೆ ಹೋಗಿ ತುಂಬಾ ತಿಂಗಳಾಗಿವೆ. ಗರ್ಭಿಣಿಯಾಗಿರುವುದರಿಂದ ಸ್ವಲ್ಪ ದಿನ ನಿಮ್ಮ ತಾಯಿಯ ಮನೆಯಲ್ಲಿ ಇರು' ಎಂದು ಹೇಳಿದ್ದ. ಆ ದಿನ ರಾತ್ರಿ ಆಕೆಯನ್ನು ಬೈಕಿನಲ್ಲಿ ಕೂರಿಸಿಕೊಂಡು ಸತ್ತೇಗಾಲ ಉಗನಿಯಾ ಮುಖ್ಯ ರಸ್ತೆಯ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಆಕೆಯನ್ನು ಕೆಳಗಡೆ ಇಳಿಸಿದ್ದ ಮುತ್ತುರಾಜು, ಆಕೆಗೆ ಮದ್ಯ ಬೆರೆಸಿದ ಜ್ಯೂಸ್ ಕುಡಿಸಿದ್ದ. ಇನ್ನಿಬ್ಬರು ಆರೋಪಿಗಳ ನೆರವಿನಿಂದ, ವೇಲಿನಿಂದ ಆಕೆಯ ಕುತ್ತಿಗೆಯನ್ನು ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿದ್ದ. ಶವವನ್ನು ಪಕ್ಕದ ಪಾಳು ಬಿದ್ದಿದ್ದ ಸ್ಥಳದಲ್ಲಿ ಕುರುಚಲು ಗಿಡಗಳ ನಡುವೆ ಹಾಕಿ ಗುರುತು ಪತ್ತೆಯಾಗದಂತೆ ಆಕೆಯ ಎಡ ಕೆನ್ನೆಯನ್ನು ಸುಟ್ಟು ಹಾಕಿದ್ದ.

ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಮುತ್ತುರಾಜು ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ್ದರು. ಆರೋಪ ರುಜುವಾತಾಗಿದ್ದರಿಂದ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಅವರು ಮುತ್ತುರಾಜು ಅವರನ್ನು ಅಪರಾಧಿ ಎಂದು ಘೋಷಿಸಿ, ಜೀವಾವಧಿ ಶಿಕ್ಷೆ ವಿಧಿಸಿ ಮಂಗಳವಾರ ಆದೇಶ ಹೊರಡಿಸಿದ್ದಾರೆ. ಜೊತೆಗೆ 2.10 ಲಕ್ಷ ದಂಡವನ್ನು ವಿಧಿಸಿದ್ದಾರೆ. ಪ್ರಾಸಿಕ್ಯೂಷನ್ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಲೋಲಾಕ್ಷಿ ವಾದ ಮಂಡಿಸಿದ್ದರು.

ನಾಳೆಯಿಂದ ಸೇವಾ ಪಾಕ್ಷಿಕ ಕಾರ್ಯಕ್ರಮ

ಚಾಮರಾಜನಗರ, ಸೆ.15– ಬಿಜೆಪಿ ವತಿಯಿಂದ ಸೆ.17 ರಿಂದ ಅ.2ರವರೆಗೆ ಜಿಲ್ಲೆಯಲ್ಲಿ ಸೇವಾ ಪಾಕ್ಷಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಸುಂದರ್ ಹೇಳಿದರು. ಸೆ.17 ರಂದು ಪ್ರಧಾನಿ ನರೇಂದ್ರಮೋದಿ, ಸೆ.25 ರಂದು ಬಿಜೆಪಿ ಪಕ್ಷದ ಸಂಸ್ಥಾಪಕ ದೀನದಯಾಳ್ ಉಪಾಧ್ಯಾಯ, ಅ.2ರಂದು ಮಹಾತ್ಮಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀ ಅವರ ಜನ್ಮದಿನದ ಪ್ರಯುಕ್ತ 15 ದಿನಗಳ ಕಾಲ ವಿವಿಧ ಸೇವಾ ಕಾರ್ಯಗಳನ್ನು ಆಯೋಜನೆ ಮಾಡಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸೆ.17 ರಂದು ಯುವ ಮೋರ್ಚಾ ವತಿಯಿಂದ ರಕ್ತದಾನ ಶಿಬಿರ ಆಯೋಜನೆ ಮಾಡಲಾಗಿದೆ. ಸೆ.25 ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ದಿವ್ಯಾಂಗಿಗಳಿಗೆ ಕೃತಕ ಕಾಲುಗಳನ್ನು ಹಂಚಲಾಗುವುದು. ಜನ ಕಲ್ಯಾಣ ಯೋಜನೆಗಳ ಕುರಿತಾದ ಪುಸ್ತಕ ಪ್ರದರ್ಶನ ಇರಲಿದೆ. ಪ್ರಧಾನಮಂತ್ರಿಗಳ ಜೀವನ ಮತ್ತು ಗುರಿಯ ಕುರಿತಾಗಿ ಒಂದು ಪ್ರದರ್ಶನವನ್ನು ಜಿಲ್ಲಾ ಮತ್ತು ಮಂಡಲ ಮಟ್ಟದಲ್ಲಿ ಆಯೋಜಿಸಲಾಗುವುದು. ಪ್ರತಿ ಬೂತ್‌ನಲ್ಲಿಯೂ ನಿರ್ದಿಷ್ಟ ಗುರಿ ಹೊಂದಿರುವ ಸಸಿ ನೆಡುವ ಕಾರ್ಯಕ್ರಮ ಏರ್ಪಡಿಸಲಾಗುವುದು ಎಂದರು. ಸೆ.25 ರಂದು ಪಂಡಿತ್ ದೀನ್ ದಯಾಳ್ ಜೀ ಅವರ ಜನ್ಮದಿನದ ಪ್ರಯುಕ್ತ ಜಿಲ್ಲೆಯ 985 ಬೂತ್‌ಗಳಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಗುವುದು. ಅಲ್ಲದೇ ದೀನ್ ದಯಾಳ್ ಜೀ ಅವರ ಕುರಿತು ಚರ್ಚೆ, ಸಂವಾದ ಕಾರ್ಯಕ್ರಮ ನಡೆಯಲಿದೆ. ಅಲ್ಲದೇ ನರೇಂದ್ರಮೋದಿ ಅವರ ಮನ್ ಕೀ ಬಾತ್ ಕಾರ್ಯಕ್ರಮವನ್ನು ಪ್ರತಿ ಬೂತ್‌ನಲ್ಲಿ ಸಾಮೂಹಿಕವಾಗಿ ಆಲಿಸುವ ಕಾರ್ಯ ನಡೆಯಲಿದೆ ಎಂದು ತಿಳಿಸಿದರು.

ಇಂದು ಜನಸಂಪರ್ಕ ಸಭೆ

ಹನೂರು, ಸೆ.15– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಹನೂರು ಉಪ ವಿಭಾಗದ ಕಚೇರಿ ವತಿಯಿಂದ ಕಚೇರಿ ಆವರಣದಲ್ಲಿ ನಾಳೆ (ಸೆ.16) ಮಧ್ಯಾಹ್ನ 3.30 ರಿಂದ 4.30ರವರೆಗೆ ಜನಸಂಪರ್ಕ ಸಭೆಯನ್ನು ಆಯೋಜಿಸಲಾಗಿದೆ. ಗ್ರಾಹಕರು ತಮ್ಮ ವ್ಯಾಪ್ತಿಯ ವಿದ್ಯುತ್ ಸಂಬಂಧಿತ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಭೆಗೆ ಹಾಜರಾಗುವಂತೆ ಕೋರಲಾಗಿದೆ.

ಕಣ್ಣಿನ ತಪಾಸಣಾ ಶಿಬಿರ

ಗುಂಡ್ಲುಪೇಟೆ, ಸೆ.15– ತಾಲೂಕು ಕುಂಬಾರರ ಸಂಘ ಮತ್ತು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಸೆ.18ರಂದು ಪಟ್ಟಣದ ಕುಂಬಾರರ ಭವನದಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ.

ಮುಖ್ಯಮಂತ್ರಿಗಳ ಮಾಧ್ಯಮ ಸಂಯೋಜಕರಾಗಿ ಶಂಕರ್ ಪಾಗೋಜಿ ನೇಮಕ



ಬೆಂಗಳೂರು, ಸೆ.15– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮಾಧ್ಯಮ ಸಂಯೋಜಕರಾಗಿ ಪತ್ರಕರ್ತ ಶಂಕರ್ ಪಾಗೋಜಿ ನೇಮಕವಾಗಿದ್ದಾರೆ.

ಮುಂದಿನ ಆದೇಶದವರೆಗೆ ಗುತ್ತಿಗೆ ಆಧಾರ ಮೇಲೆ ಮುಖ್ಯಮಂತ್ರಿಯವರ ಮಾಧ್ಯಮ ಸಂಯೋಜಕರಾಗಿ ಶಂಕರ್ ಪಾಗೋಜಿಯವರನ್ನು ನೇಮಕ ಮಾಡಲಾಗುವುದು ಎಂದು ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶದಲ್ಲಿ ತಿಳಿಸಿದೆ. ಮುಖ್ಯಮಂತ್ರಿಗಳ ಮಾಧ್ಯಮ ಸಂಯೋಜಕರಾಗಿ ಈ ಹಿಂದೆ ಕೆಲಸ ಮಾಡುತ್ತಿದ್ದ ಗುರುಲಿಂಗ ಸ್ವಾಮಿ ಹೊಳಿಮಠ ತೀವ್ರ ಹೃದಯಾಘಾತದಿಂದ ಇತ್ತೀಚೆಗೆ ನಿಧನರಾಗಿದ್ದರು. ಈ ಹಿನ್ನೆಲೆಯಲ್ಲಿ ಅವರ ಸ್ಥಾನಕ್ಕೆ ಶಂಕರ್ ಪಾಗೋಜಿಯವರನ್ನು ನೇಮಕ ಮಾಡಲಾಗಿದೆ.

ಮೂರನೇ ಪುಟದಿಂದ

ಕಾಂಗ್ರೆಸ್ ಉಪಾಧ್ಯಕ್ಷ ರಾಜಾರಾಂ ಬಂಧನ

ಟ್ರೈನರ್ ಆಗಿರುವ ರಾಜೀವ್ ನಗರದ ಮೊಹಮ್ಮದ್ ಶಹಭಾಜ್ ಮಲ್ಲಿಕ್ ಮತ್ತು ಪತ್ರ ಬರಹಗಾರ ಗಾಂಧಿನಗರ ನಿವಾಸಿ ಭಾಸ್ಕರ್ ಎಂಬುವರನ್ನು ಬಂಧಿಸಿತ್ತು.

ನಕಲಿ ದಾಖಲೆಗಳನ್ನು ಬಳಸಿ ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್ ಅವರ ತಂದೆ ಆರ್.ಕ್ಯೂ.ಅರ್ಷದ್ ಅವರ ಆಸ್ತಿಯನ್ನು ಮಾರಾಟ ಮಾಡಿದ ಹಾಗೂ ಯಾದವಗಿರಿಯಲ್ಲಿರುವ 80X100 ಅಡಿ ವಿಸ್ತೀರ್ಣದ ಮುಡಾಗೆ ಸೇರಿದ ನಿವೇಶನಕ್ಕೆ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಬ್ಯಾಂಕ್‌ನಲ್ಲಿ ಸಾಲ ಪಡೆಯಲು ಪ್ರಯತ್ನಿಸಿದ ಪ್ರಕರಣಗಳ ತನಿಖೆ ನಡೆಸುತ್ತಿದ್ದ ಪೊಲೀಸರಿಗೆ ಗೋಲ್ಡನ್ ಬೆಲ್ಸ್ ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗುತ್ತಿದೆ ಎಂದು ದೊರೆತ ಖಚಿತ ಮಾಹಿತಿ ಮೇರೆಗೆ ಈ ದಾಳಿ ನಡೆಸಲಾಗಿತ್ತು.

ಪ್ರಕರಣದ ತನಿಖಾಧಿಕಾರಿ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಷಣ್ಮುಗ ವರ್ಮಾ ಅವರು ಆರೋಪಿಗಳನ್ನು ತೀವ್ರವಾಗಿ ವಿಚಾರಣೆಗೊಳಪಡಿಸಿದಾಗ ಈ ಪ್ರಕರಣದ ಕಿಂಗ್‌ಪಿನ್ ಕಾಂಗ್ರೆಸ್ ಮುಖಂಡ ರಾಜಾರಾಂ ಎಂಬುದು ಬಯಲಾಗಿದೆ. ರಾಜಾರಾಂ ನೇತೃತ್ವದ ಈ ತಂಡ ಮೈಸೂರಿನ ರಾಜೀವ್‌ನಗರದಲ್ಲೇ ನಾಲ್ಕೈದು ಆಸ್ತಿಗಳನ್ನು ನಕಲಿ ದಾಖಲೆ ಸೃಷ್ಟಿಸಿ ಮಾರಾಟ ಮಾಡಿದೆ ಎಂಬುದೂ ವಿಚಾರಣೆ ವೇಳೆ ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ಬುಧವಾರ ಪೊಲೀಸರು ರಾಜಾರಾಂನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ನಕಲಿ ದಾಖಲೆ ಸೃಷ್ಟಿಸಿ ಯಾರದೋ ಆಸ್ತಿಯನ್ನು ಬೇರೆ ಯಾರಿಗೋ ಮಾರಾಟ ಮಾಡುವುದು ಹಾಗೂ ಸರ್ಕಾರಿ ಆಸ್ತಿಗಳಿಗೆ ನಕಲಿ ದಾಖಲೆ ಸೃಷ್ಟಿಸುವ ಜಾಲ ಬಹಳಷ್ಟು ವಿಸ್ತಾರವಾಗಿರುವುದರಿಂದ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ರಾಜಾರಾಂನನ್ನು ಹೆಚ್ಚಿನ ವಿಚಾರಣೆಗಾಗಿ ತಮ್ಮ ವಶಕ್ಕೆ ಪಡೆಯುವ ಸಾಧ್ಯತೆಗಳಿವೆ ಎಂದು ನಂಬಲರ್ಹ ಮೂಲಗಳಿಂದ ತಿಳಿದು ಬಂದಿದೆ.

ಗನ್‌ಮ್ಯಾನ್ ಭದ್ರತೆ: ಈಗ ಬಂಧಿಸಲ್ಪಟ್ಟಿರುವ ರಾಜಾರಾಂ ವಿರುದ್ಧ ಕೊಲೆ ಆರೋಪದ ಮೇರೆಗೆ ವಿಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಖಾಸಗಿ ಗನ್‌ಮ್ಯಾನ್ ನೇಮಿಸಿಕೊಂಡಿದ್ದಾನೆ. ಈತ ಸರ್ಕಾರಿ ಇಲಾಖೆಗಳು ಮತ್ತು ಅಧಿಕಾರಿಗಳ ಸೀಲ್‌ಗಳು, ಇ–ಸ್ಟಾಂಪ್ ಪೇಪರ್, ಇಂಕ್ ಮುಂತಾದವುಗಳನ್ನು ಬೆಂಗಳೂರಿನಿಂದ ತರುತ್ತಿದ್ದ ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ. ಸದ್ಯಕ್ಕೆ ಮೈಸೂರಿನಲ್ಲಿ ಅಕ್ರಮ ದಾಖಲೆ ಮೂಲಕ ಆಸ್ತಿಗಳನ್ನು ಮಾರಾಟ ಮಾಡಿರುವುದು ಬೆಳಕಿಗೆ ಬಂದಿದ್ದು, ಬೇರೆ ನಗರಗಳಲ್ಲೂ ಇದೇ ರೀತಿ ಕೃತ್ಯ ಎಸಗಲಾಗಿದೆಯೇ ಎಂಬುದರ ಬಗ್ಗೆ ಕೂಡ ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎನ್ನಲಾಗಿದೆ.

ಪ್ರಭಾವಿ: ಕಾಂಗ್ರೆಸ್ ಮುಖಂಡ ರಾಜಾರಾಂ ಪ್ರಭಾವಿ ವ್ಯಕ್ತಿಯಾಗಿದ್ದು, ಹಿರಿಯ ರಾಜಕಾರಣಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾನೆ ಎನ್ನಲಾಗಿದೆ. ಈತ ಕಾಂಗ್ರೆಸ್‌ಗೆ ಸೇರ್ಪಡೆಯಾದ ವರ್ಷದೊಳಗಾಗಿ ಮೈಸೂರು ನಗರ ಕಾಂಗ್ರೆಸ್ ಉಪಾಧ್ಯಕ್ಷ ಸ್ಥಾನವನ್ನು ಈತನಿಗೆ ನೀಡಲಾಗಿದೆ ಎಂಬ ಮಾತುಗಳು ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿವೆ.

ಈ ಸಂಬಂಧ 'ಮೈಸೂರು ಮಿತ್ರ' ಸೆ.6ರ ಸಂಚಿಕೆಯಲ್ಲಿ 'ಅಸಲಿ ತಲೆ ಮೇಲೆ ಹೊಡೆದಂತೆ ನಕಲಿ ದಾಖಲೆ ಸೃಷ್ಟಿಸಿ ಕಂಡ ಕಂಡವರ ಆಸ್ತಿ ಮಾರಾಟ ಮಾಡುತ್ತಿದ್ದ, ಬ್ಯಾಂಕ್‌ಗಳಲ್ಲಿ ಸಾಲ ಪಡೆಯುತ್ತಿದ್ದ ಭಾರೀ ವಂಚಕರ ಜಾಲ ಬಯಲು: ಮೂವರ ಬಂಧನ' ಶೀರ್ಷಿಕೆಯಡಿ ವರದಿ ಪ್ರಕಟವಾಗಿದ್ದನ್ನು ಸ್ಮರಿಸಬಹುದಾಗಿದೆ.

ಮರಕ್ಕೆ ಕಟ್ಟಿ ಹಾಕಿ ಥಳಿಸಿದ ಗ್ರಾಮಸ್ಥರು

ಇವರನ್ನು ಕಾರಿನಲ್ಲಿ ಹಿಂಬಾಲಿಸಿಕೊಂಡು ಬಂದ ನಾಲ್ವರು ದರೋಡೆಕೋರರ ತಂಡ ಪಾಂಡವಪುರ ತಾಲೂಕಿನ ಬನ್ನಘಟ್ಟ ಬಳಿಯ ನಿರ್ಜನ ಪ್ರದೇಶದಲ್ಲಿ ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ದೋಚಲು ಯತ್ನಿಸಿದ್ದಾರೆ. ಈ ವೇಳೆ ಬಾಲಾಜಿ ಅವರು ಪ್ರಯಾಣಿಸುತ್ತಿದ್ದ ಕಾರಿನ ಚಾಲಕ ಶಿವರಾಜ್ ಜೋರಾಗಿ ಕೂಗಿಕೊಂಡಿದ್ದಾನೆ. ಈತನ ಕಿರುಚಾಟ ಕೇಳಿ ಪಕ್ಕದಲ್ಲೇ ಇರುವ ಬನ್ನಘಟ್ಟ ಗ್ರಾಮಸ್ಥರು ಸಹಾಯಕ್ಕೆ ಧಾವಿಸಿ ಬಂದಿದ್ದಾರೆ. ದರೋಡೆಕೋರರ ಮೇಲೆ ಕಲ್ಲುಗಳನ್ನು ತೂರಿದ್ದಾರೆ. ಇದರಿಂದ ದರೋಡೆಕೋರರಲ್ಲಿ ಇಬ್ಬರು ಕಾರಿನಲ್ಲಿ ಪರಾರಿಯಾದರೆ, ಮತ್ತಿಬ್ಬರು ಗ್ರಾಮಸ್ಥರಿಗೆ ಸಿಕ್ಕಿ ಬಿದ್ದರು. ಇವರನ್ನು ಗ್ರಾಮಸ್ಥರು ಮರಕ್ಕೆ ಕಟ್ಟಿ, ಹಿಗ್ಗಾಮುಗ್ಗಾ ಥಳಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ವಿವೇಕ್, ಸಬ್ ಇನ್ಸ್‌ಪೆಕ್ಟರ್ ಮಂಜುನಾಥ್ ಭೇಟಿ ನೀಡಿ, ಅವರನ್ನು ಬಂಧಿಸಿ, ಅವರಿಂದ ರಿವಾಲ್ವರ್ ಸೇರಿದಂತೆ ವಿವಿಧ ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಗ್ರಾಮಸ್ಥರು ಥಳಿಸಿದ್ದರಿಂದ ಗಾಯಗಳಾಗಿದ್ದ ದರೋಡೆಕೋರರು ಹಾಗೂ ಚಿನ್ನದ ವ್ಯಾಪಾರಿ ಬಾಲಾಜಿ, ಅವರ ಚಾಲಕ ಶಿವರಾಜ್ ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ.

ಎಸ್‌ಪಿ ಭೇಟಿ: ವಿಷಯ ತಿಳಿದು ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಎಎಸ್‌ಪಿ ವೇಣುಗೋಪಾಲ್, ಡಿವೈಎಸ್‌ಪಿ ಸಂದೇಶ್‌ಕುಮಾರ್ ಭೇಟಿ ನೀಡಿ, ಪರಿಶೀಲಿಸಿದರು.

ಘಟನೆ ಸಂಬಂಧವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ದರೋಡೆಕೋರರು ಹಾಗೂ ಚಿನ್ನದ ವ್ಯಾಪಾರಿಗಳಿಂದ ಮಾಹಿತಿ ಪಡೆದುಕೊಂಡರು. ಸೆರೆ ಸಿಕ್ಕಿರುವ ದರೋಡೆಕೋರರನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದ್ದು, ಪರಾರಿಯಾದವರ ಪತ್ತೆಗಾಗಿ ಹುಡುಕಾಟ ನಡೆಸಿದ್ದಾರೆ. ಈ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನೇಮಕಾತಿ ಅಕ್ರಮಗಳ ತನಿಖೆ

ಕೊಡಿ ಎಂದು ಸಭಾಧ್ಯಕ್ಷ ರಿಗೆ ಮನವಿ ಮಾಡಿದರು. ಈ ಹಿಂದೆ ಬೇರೆ ಬೇರೆ ಪ್ರಕರಣಗಳಿಗೆ ಸದನದಲ್ಲಿ ಚರ್ಚೆಗೆ ಅವಕಾಶ ಕೊಟ್ಟಿರುವ ನಿದರ್ಶನಗಳಿವೆ. ಐಎಎಸ್ ಅಧಿಕಾರಿ ಡಿ.ಕೆ.ರವಿ, ಡಿವೈಎಸ್ಪಿ ಗಣಪತಿ ಭಟ್ ಸೇರಿದಂತೆ ಅನೇಕ ಪ್ರಕರಣ ಗಳನ್ನು ಸದನದಲ್ಲಿ ಚರ್ಚೆ ಮಾಡಲಾಗಿದೆ. ತನಿಖೆ ನಡೆಯುತ್ತಿದೆ ಎಂಬ ಒಂದೇ ಕಾರಣಕ್ಕೆ ಚರ್ಚೆಗೆ ಅವಕಾಶ ಕೊಡದಿದ್ದರೆ ಹೇಗೆ ಎಂದು ಪ್ರಶ್ನಿಸಿದರು.

ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಚರ್ಚೆ ನಡೆದರೆ ಕೆಲವರು ಸಿಟ್ಟಿಗೇಳಬಹುದೆಂಬ ಆತಂಕದಿಂದ ಸರ್ಕಾರ ಪಲಾಯನ ಮಾಡುತ್ತಿದೆ ಎಂದು ಪ್ರತಿಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಬಿಜೆಪಿ ಸದಸ್ಯರು ಕೂಡ ಆಕ್ಷೇಪಿಸಿ, ಹಗರಣವನ್ನು ಹೊರತಂದಿದ್ದೇ ನಮ್ಮ ಸರ್ಕಾರ. ನೀವು ಎಲ್ಲವನ್ನು ಮುಚ್ಚಿ ಹಾಕಿದ್ದೀರಿ. ಇದರ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ತಿರುಗೇಟು ನೀಡಿದರು. ಆದರೆ, ಅನೇಕ ಮಾಧ್ಯಮಗಳಲ್ಲಿ ಸರಣಿ ವರದಿ ಮಾಡಿವೆ. ಕುಂಟುನೆಪ ಇಟ್ಟುಕೊಂಡು ಪಲಾಯನ ಮಾಡಬೇಡಿ. ಮೊದಲು ಚರ್ಚೆಗೆ ಅವಕಾಶ ಕೊಡಬೇಕು ಎಂದು ವಿಪಕ್ಷ ಸದಸ್ಯರು ಮನವಿ ಮಾಡಿಕೊಂಡರು.

ಆಗ ಮಾಧುಸ್ವಾಮಿ, ನಿಯಮ 60ರಡಿ ಚರ್ಚೆ ಮಾಡಬೇಕಾದರೆ ಇತ್ತೀಚಿನ ಘಟನೆ ಯಾಗಿರಬೇಕು. ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿದಂತೆ ಅನೇಕರು ಬಂಧನ ಕ್ಕೊಳಪಟ್ಟಿದ್ದಾರೆ. ಜಾಮೀನು ಅರ್ಜಿಗಳು ತಿರಸ್ಕೃತಗೊಂಡಿವೆ. ಸಿಐಡಿ ತನಿಖೆ ನಡೆಸುತ್ತಿರು ವಾಗ ಚರ್ಚೆಗೆ ಅವಕಾಶ ಕೊಡುವುದು ಸೂಕ್ತವೇ ಎಂದು ಸಭಾಧ್ಯಕ್ಷರನ್ನು ಪ್ರಶ್ನಿಸಿದರು.

ಇತಿಹಾಸದಲ್ಲೇ ಮೊದಲ ಬಾರಿಗೆ ನಮ್ಮ ಸರ್ಕಾರ ಎಡಿಜಿಪಿ ದರ್ಜೆಯ ಅಧಿಕಾರಿಯನ್ನು ಬಂಧಿಸಿ, ಜೈಲಿಗೆ ಹಾಕಿದೆ. ಸಿಐಡಿ ತನಿಖಾ ತಂಡಕ್ಕೆ ಮುಕ್ತವಾಗಿ ತನಿಖೆ ನಡೆಸಲು ಬಿಟ್ಟಿದ್ದೇವೆ. ಈ ಹಗರಣ ಹೊರಬಂದಿದ್ದೆ, ನಮ್ಮ ಸರ್ಕಾರದಿಂದಾಗಿ, ಇದರಲ್ಲಿ ಇವರೇನು ಶಹಭಾಷ್‌ಗಿರಿ ಪಡೆಯುವುದು ಎಂದು ತಿರುಗೇಟು ನೀಡಿದರು.

ಇದಕ್ಕೆ ತಿರುಗೇಟು ನೀಡಿದ ಸಿದ್ದರಾಮಯ್ಯ, ಇದಕ್ಕೆ ನಾವು ಹೆದರುವುದಿಲ್ಲ. 40 ವರ್ಷದಿಂದ ಈ ಸದನದಲ್ಲಿ ನಾನೂ ಇದ್ದೇನೆ. ರಾಜಕೀಯ ಭಾಷಣ ಮಾಡಲು ನನಗೂ ಬರುತ್ತದೆ. 2006ರಿಂದ ಹಿಡಿದು ಇಲ್ಲಿಯವರೆಗೆ ಯಾವ್ಯಾವ ಇಲಾಖೆಯಲ್ಲಿ ಏನೇನು ಆಗಿದೆಯೋ ಎಲ್ಲವನ್ನೂ ತನಿಖೆ ನಡೆಸಿ. ಅಗತ್ಯವಿದ್ದರೆ ಹೈಕೋರ್ಟ್ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಿ. ನಾವು ಹೆದರುವುದಿಲ್ಲ ಎಂದು ಗುಡುಗಿದರು.

ಅಂತಿಮವಾಗಿ ವಾದ–ಪ್ರತಿವಾದ ಆಲಿಸಿದ ಸಭಾಧ್ಯಕ್ಷರು, ನಿಯಮ 60ರ ಬದಲು 69ರಡಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎಂದಾಗ ಕಾವೇರಿದ ಚರ್ಚೆಗೆ ತೆರೆಬಿದ್ದಿತು.

15 ಸಾವಿರ ಶಿಕ್ಷಕರ ನೇಮಕಾತಿ

ಶಿಕ್ಷಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿರ್ಧರಿಸ ಲಾಗಿದೆ. ರಾಜ್ಯದ ಆರ್ಥಿಕ ಸಂಪನ್ಮೂಲ ಗಳನ್ನು ಆಧರಿಸಿ ಖಾಲಿ ಇರುವ ಮತ್ತು ಖಾಲಿಯಾಗುವ ಶಿಕ್ಷಕರ ಹುದ್ದೆ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಕಳೆದ ಮೂರ್ನಾಲ್ಕು ವರ್ಷಗಳಿಂದ ನಿರಂತರವಾಗಿ ಮಳೆಯಾಗುತ್ತಿದ್ದು, ಶಾಲಾ ಕೊಠಡಿಗಳು ಕುಸಿದುಬಿದ್ದಿವೆ. ಹೀಗಾಗಿ 8100 ಕೊಠಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಆಯಾ ಸರ್ಕಾರಗಳು ಅಗತ್ಯಕ್ಕೆ ತಕ್ಕಂತೆ ಶಾಲಾ ಕೊಠಡಿಗಳನ್ನು ನಿರ್ಮಿಸಿದ್ದರೆ ಈ ಸಮಸ್ಯೆ ಉಂಟಾಗುತ್ತಿರಲಿಲ್ಲ. ಮುಂದಿನ ಮೂರು ವರ್ಷಗಳಲ್ಲಿ ಅಗತ್ಯವಿರುವ ಶಾಲಾ ಕೊಠಡಿಗಳನ್ನು ರಾಜ್ಯಾದ್ಯಂತ ನಿರ್ಮಿಸಲಾಗುವುದು ಎಂದು ಭರವಸೆ ನೀಡಿದರು.

ವಿಶ್ವೇಶ್ವರಯ್ಯ ಜನ್ಮದಿನ ಸ್ಮರಣಾರ್ಥ ಇಂಜಿನಿಯರ್ ದಿನಾಚರಣೆ

ಸರ್ ಎಂ.ವಿಶ್ವೇಶ್ವರಯ್ಯ ದೇಶ ಕಂಡ ಅಪ್ರತಿಮ ಇಂಜಿನಿಯರ್

ಮೇಯರ್ ಶಿವಕುಮಾರ್ ಸ್ಮರಣೆ



ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ವೃತ್ತದಲ್ಲಿ ಗುರುವಾರ ಸರ್ ಎಂ.ವಿಶ್ವೇಶ್ವರಯ್ಯ ಜನ್ಮದಿನದ ಅಂಗವಾಗಿ ವಿಶ್ವೇಶ್ವರಯ್ಯನವರ ಭಾವಚಿತ್ರಕ್ಕೆ ಮೇಯರ್ ಶಿವಕುಮಾರ್ ಪುಷ್ಪ ನಮನ ಸಲ್ಲಿಸಿದರು.

ಮೈಸೂರು,ಸೆ.15(ಪಿಎಂ)– ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಅವರು ದೇಶ ಕಂಡ ಅಪ್ರತಿಮ ಇಂಜಿನಿಯರ್. ಮೈಸೂರು ಯೋಜನಾಬದ್ಧ ನಗರ ಎಂದು ಕರೆಸಿಕೊಳ್ಳುವಲ್ಲಿ ವಿಶ್ವೇಶ್ವರಯ್ಯನವರ ದೂರದೃಷ್ಟಿಯ ಪರಿಶ್ರಮವಿದೆ ಎಂದು ಮೇಯರ್ ಶಿವಕುಮಾರ್ ಸ್ಮರಿಸಿದರು.

ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ವೃತ್ತದಲ್ಲಿ (ವಿಶ್ವೇಶ್ವರಯ್ಯ ವೃತ್ತ) ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಡಾ.ಸರ್.ಎಂ.ವಿಶ್ವೇಶ್ವರಯ್ಯ ಜನ್ಮದಿನ ಹಾಗೂ ಇಂಜಿನಿಯರ್‌ಗಳ ದಿನಾಚರಣೆ ಯಲ್ಲಿ ವಿಶ್ವೇಶ್ವರಯ್ಯನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ವಿಶ್ವೇಶ್ವರಯ್ಯನವರು ಅಂದಿನ ಮೈಸೂರು ಸಂಸ್ಥಾನದ ದಿವಾನರಾಗಿಯೂ ಅಪಾರ ಕೊಡುಗೆ ನೀಡಿದ್ದಾರೆ. 'ಮೈಸೂರು' ರಸ್ತೆ ಗಳಾದಿಯಾಗಿ ಹಲವು ಅಂಶಗಳಲ್ಲಿ ಹಿರಿಮೆ ಹೊಂದಿದ್ದರೆ ಅದಕ್ಕೆ ವಿಶ್ವೇಶ್ವರಯ್ಯನವರೇ ಮೂಲ ಕಾರಣ. ಕೆಆರ್‌ಎಸ್ ಅಣೆಕಟ್ಟೆ ನಿರ್ಮಾಣದಲ್ಲಿ ಇವರ ಕೊಡುಗೆ ಮಹತ್ವ ದಾಗಿದೆ. ಈ ಅಣೆಕಟ್ಟೆ ನಿರ್ಮಾಣದಿಂದ ಮೈಸೂರು ಮತ್ತು ಬೆಂಗಳೂರು ನಗರ ಗಳಿಗೆ ಕುಡಿಯುವ ನೀರಿಗೆ ಅನುಕೂಲ ವಾಗಿದೆ. ಅಲ್ಲದೆ, ಮಂಡ್ಯ ಜಿಲ್ಲೆಯಲ್ಲಿ ಕೃಷಿ ಭೂಮಿಗೆ ನೀರುಣಿಸಲು ಸಾಧ್ಯವಾಗಿದೆ. ಇದೆಲ್ಲಾ ವಿಶ್ವೇಶ್ವರಯ್ಯ ಅವರ ದೂರದೃಷ್ಟಿ ಫಲವಾಗಿದೆ ಎಂದು ಬಣ್ಣಿಸಿದರು.

ಪ್ರತಿಮೆ ನಿರ್ಮಾಣ: ಮೈಸೂರಿನ ವಿಶ್ವೇಶ್ವರಯ್ಯ ವೃತ್ತದಲ್ಲಿ ಈ ಹಿಂದೆ ವಿಶ್ವೇಶ್ವರಯ್ಯನವರ ಪ್ರತಿಮೆ ನಿರ್ಮಿಸಲು ನಿರ್ಧರಿಸಲಾಗಿತ್ತು ಆದರೆ ಕಾರಣಾಂತರಗಳಿಂದ ಅದು ನೆನೆಗುದಿಗೆ ಬಿದ್ದಿದೆ. ಹಾಗಾಗಿ ಇಲ್ಲಿ ವಿಶ್ವೇಶ್ವರಯ್ಯರ ಪ್ರತಿಮೆ ಅಥವಾ ಪುತ್ಥಳಿ ನಿರ್ಮಾಣಕ್ಕೆ ಕ್ರಮ ವಹಿಸಬೇಕೆಂದು ಮೇಯರ್ ಅವರಲ್ಲಿ ಕಾರ್ಯಕ್ರಮದಲ್ಲಿ ನೆರೆದಿದ್ದ ಮುಖಂಡರು ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಮೇಯರ್ ಶಿವ ಕುಮಾರ್, ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಮೆ ನಿರ್ಮಾಣ ಸಂಬಂಧ ಸುಪ್ರೀಂಕೋರ್ಟ್ ಹೊರಡಿಸಿರುವ ಆದೇಶ ಸೇರಿದಂತೆ ಇತರ ಅಂಶಗಳನ್ನು ಅವಲೋಕಿಸಿ ಮುಂದಿನ ನಿರ್ಧಾರ ಕೈಗೊಳ್ಳಲು ಸಭೆ ಏರ್ಪಡಿಸಲಾಗುವುದು. ಆ ಮೂಲಕ ಪಾಲಿಕೆ ಆಯುಕ್ತರೊಂದಿಗೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗು ವುದು. ಸದರಿ ಸಭೆಗೆ ನೀವೂ ಸೇರಿದಂತೆ ಮುಖಂಡರಿಗೆ ಆಹ್ವಾನ ನೀಡಲಾಗುವುದು ಎಂದು ಹೇಳಿದರು. ನಗರ ಪಾಲಿಕೆ ಸದಸ್ಯ ರಮಣಿ (ರಮೇಶ್), ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅರ್ಚಕರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಮುಖಂಡರಾದ ಜೋಗಿ ಮಂಜು, ವಿಕ್ರಂಅಯ್ಯಂಗಾರ್, ಅಜಯ್‌ಶಾಸ್ತ್ರಿ ಮತ್ತಿತರರು ಹಾಜರಿದ್ದರು.

ಸರ್ ಎಂ.ವಿಶ್ವೇಶ್ವರಯ್ಯರ ಅಪಾರ ಜ್ಞಾನ ಕಂಡು ಬ್ರಿಟಿಷರೇ ನಿಬ್ಬೆರಗಾದರು!

ಕಸಾಪದಿಂದ ಸರ್‌ಎಂವಿ ಸ್ಮರಣೆ



ಮೈಸೂರು,ಸೆ.15(ಪಿಎಂ)– ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಅವರ ಪರಿಣಿತಿ ಮತ್ತು ಅಪಾರ ಜ್ಞಾನ ಕಂಡು ಬ್ರಿಟಿಷರು ಸೇರಿದಂತೆ ವಿದೇಶಿಗರು ನಿಬ್ಬೆರಗಾದ ಹಲವು ನಿದರ್ಶನಗಳಿವೆ ಎಂದು ಮೈಸೂರಿನ ಸರ್ಕಾರಿ ಮಹಾರಾಣಿ ಪ್ರಶಿಕ್ಷಣ ಸಂಸ್ಥೆ ಪ್ರಾಂಶುಪಾಲ ಬಿ.ವಿ.ನಂಜುಂಡಸ್ವಾಮಿ ಸ್ಮರಿಸಿದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಸರ್ಕಾರಿ ಮಹಾರಾಣಿ ಪ್ರಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಸರ್ ಎಂ.ವಿಶ್ವೇಶ್ವರಯ್ಯ ಜನ್ಮೋತ್ಸವ ಹಾಗೂ ಇಂಜಿನಿಯರ್ ದಿನಾಚರಣೆಯನ್ನು ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ, ಅವರು ಮಾತನಾಡಿದರು.

ವಿಶ್ವೇಶ್ವರಯ್ಯನವರು ರೈಲಿನ ಅಪಘಾತ ತಪ್ಪಿಸಿದ ಪ್ರಸಂಗವೊಂದು ರೋಚಕವಾಗಿದೆ. ಒಮ್ಮೆ ವಿದೇಶದಲ್ಲಿ ವಿಶ್ವೇಶ್ವರಯ್ಯ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಇವರನ್ನು ಬಿಟ್ಟರೆ ಅಲ್ಲಿ ಉಳಿದವರೆಲ್ಲಾ ಬ್ರಿಟಿಷರೇ ಆಗಿದ್ದರು. ಭಾರೀ ವೇಗವಾಗಿ ರೈಲು ಚಲಿಸುತ್ತಿತ್ತು. ಇದ್ದಕ್ಕಿದ್ದಂತೆ ವಿಶ್ವೇಶ್ವರಯ್ಯನವರು ರೈಲು ನಿಲ್ಲಿಸಲು ಚೈನ್ ಎಳೆದರು. ಇದರಿಂದ ಕೋಪಗೊಂಡ ಅಲ್ಲಿನ ಪ್ರಯಾಣಿಕರು ವಿಶ್ವೇಶ್ವರಯ್ಯರನ್ನು ಅಪಹಾಸ್ಯ ಮಾಡುತ್ತಾರೆ. ಇದರಿಂದ ವಿಚಲಿತರಾಗದ ವಿಶ್ವೇಶ್ವರಯ್ಯನವರು ಮುಂದೆ ರೈಲ್ವೆ ಹಳಿಯಲ್ಲಿ ಕಂಬಿ ಕಿತ್ತು ಬಂದಿದೆ. ಅದಕ್ಕಾಗಿ ರೈಲು ನಿಲ್ಲಿಸಲು ಚೈನ್ ಅನ್ನು ಎಳೆಯಬೇಕಾಯಿತು ಎನ್ನುತ್ತಾರೆ.

ಆದಾಗ್ಯೂ ರೈಲ್ವೆ ಸಿಬ್ಬಂದಿ ಹಳಿಯನ್ನು ಪರಿಶೀಲಿಸಿದಾಗ, ವಿಶ್ವೇಶ್ವರಯ್ಯನವರ ಊಹೆ ನಿಜವಾಗಿತ್ತು. ಇದ್ದಕ್ಕಿದ್ದಂತೆ ಬೋಗಿಯ ಕಂಪನದ ಶಬ್ದದಲ್ಲಿ ವ್ಯತ್ಯಯ ಉಂಟಾಗಿದ್ದನ್ನು ಸೂಕ್ಷ್ಮವಾಗಿ ಗಮನಿಸಿ ವಿಶ್ವೇಶ್ವರಯ್ಯ ಈ ಮುನ್ಸೂಚನೆ ನೀಡಿದ್ದರು. ಅವರು ಅಂತಹ ಮೇಧಾವಿ ಎಂದು ಹೇಳಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ವಿಶ್ವೇಶ್ವರಯ್ಯ ಅವರ ಕುರಿತು ವಿಶೇಷ ಉಪನ್ಯಾಸ ನೀಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದರು. ಮುಕ್ತಕ ಸಾಹಿತ್ಯ ಅಕಾಡೆಮಿ ಗೌರವಾಧ್ಯಕ್ಷ ಎಸ್.ರಾಮಪ್ರಸಾದ್, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಜಿಲ್ಲಾ ಕಸಾಪ ಕಾರ್ಯದರ್ಶಿ ಲತಾಮೋಹನ್ ಸೇರಿದಂತೆ ಸಂಸ್ಥೆ ವಿದ್ಯಾರ್ಥಿಗಳು ಹಾಜರಿದ್ದರು.

ಸರ್ ಎಂವಿ ಸಾಧನೆ ಅಗಾಧ, ಕೊಡುಗೆ ಅವಿಸ್ಮರಣೀಯ

ವಿಶ್ವೇಶ್ವರಯ್ಯ ಜಯಂತಿಯಲ್ಲಿ ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ ಸ್ಮರಣೆ



ಮೈಸೂರು,ಸೆ.15(ಪಿಎಂ)– ಅಂದಿನ ಮೈಸೂರು ಸಂಸ್ಥಾನದ ದಿವಾನರಾಗಿ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯನವರು ನೀಡಿದ ಕೊಡುಗೆ ಅವಿಸ್ಮರಣೀಯ. ಅಲ್ಲದೆ, ಅವರ ಸಾಧನೆ ಅಗಾಧವಾಗಿದೆ ಎಂದು ಅರಗು ಮತ್ತು ಬಣ್ಣ ಕಾರ್ಖಾನೆ (ಮೈಲ್ಯಾಕ್) ಅಧ್ಯಕ್ಷ ಆರ್.ರಘು ಕೌಟಿಲ್ಯ ಸ್ಮರಿಸಿದರು.

ಮೈಸೂರಿನ ವಿಶ್ವೇಶ್ವರನಗರದ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಅಪೂರ್ವ ಸ್ನೇಹ ಬಳಗ ಹಾಗೂ ಶಾಲೆಯ ಜಂಟಿ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಇಂಜಿನಿಯರ್ ದಿನಾಚರಣೆ ಹಾಗೂ ಭಾರತ ರತ್ನ ಡಾ.ಸರ್ ಎಂ.ವಿಶ್ವೇಶ್ವರಯ್ಯ ಅವರ 162ನೇ ಜಯಂತಿಯಲ್ಲಿ ವಿವಿಧ ಕ್ಷೇತ್ರಗಳ ಸಾಧಕ ಇಂಜಿನಿಯರ್‌ಗಳನ್ನು ಸನ್ಮಾನಿಸಿ, ಅವರು ಮಾತನಾಡಿದರು.

ವಿಶ್ವೇಶ್ವರಯ್ಯನವರ ನೀರಾವರಿ ಯೋಜನೆ ಗಳು ಇಂದಿಗೂ ಮಾದರಿಯಾಗಿವೆ. ಸೂಕ್ತ ಸ್ಥಳಗಳಲ್ಲಿ ಜಲಾಶಯಗಳನ್ನು ನಿರ್ಮಿಸುವ ಮೂಲಕ ನೀರಿನ ಸದ್ಬಳಕೆ ಮಾಡಿಕೊಳ್ಳುವುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಅವರ ಕಾರ್ಯಸಾಧನೆ ಮತ್ತು ಯೋಜನೆಗಳು ಇಂದಿನ ಯುವ ಜನಾಂಗಕ್ಕೆ ಪ್ರೇರಣೆಯಾಗಿವೆ. ಅವರ ವ್ಯಕ್ತಿತ್ವವನ್ನು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಮಾದರಿಯನ್ನಾಗಿ ಇಟ್ಟುಕೊಳ್ಳಬೇಕು ಎಂದು ಹೇಳಿದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಮಾತನಾಡಿ, ವಿಶ್ವೇಶ್ವರಯ್ಯನವರ ಸಾಧನೆ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತಗೊಳ್ಳದೆ, ಇಡೀ ದೇಶಕ್ಕೆ ಸಂದಿದೆ. ತಮ್ಮ ದೂರಾಲೋಚನೆಯ ಯೋಜನೆಗಳ ಮೂಲಕ ಅನೇಕ ಸಮಸ್ಯೆಗಳಿಗೆ ಅವರು ಪರಿಹಾರ ನೀಡಿದ್ದಾರೆ. ಆ ಮೂಲಕ ತಮ್ಮ ಕಾರ್ಯಕ್ಷೇತ್ರದಲ್ಲಿ ಯಶಸ್ಸು ಗಳಿಸಿದ್ದಾರೆ ಎಂದು ತಿಳಿಸಿದರು.

ಸರ್ ಎಂವಿ ಅವರ ಚಿಂತನಾ ಶಕ್ತಿ ಅಗಾಧ ಅವರು ಯಾವುದೇ ಒಂದು ಜನಾಂಗಕ್ಕೆ ಅಥವಾ ಪ್ರದೇಶಕ್ಕೆ ಸೀಮಿತವಲ್ಲ. ನೀರಿನ ಹನಿಯ ಮಹತ್ವವನ್ನು ವಿಶ್ವಕ್ಕೆ ಸಾರಿದ ಮೇಧಾವಿ ವಿಶ್ವೇಶ್ವರಯ್ಯ ಎಂದು ಸ್ಮರಿಸಿದರು.

ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ರಾಜರ್ಷಿ ನಾಲ್ವಡಿ ಮತ್ತು ಯಂತ್ರ ಋಷಿ ಸರ್ ಎಂವಿ ಅವರ ಒಡನಾಟ ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ನಾಂದಿ ಹಾಡಿತು. ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವದ ಸುಧಾರಣೆ ತರಲು ಶ್ರೀಗಂಧದ ಉತ್ಪಾದನೆ ಮತ್ತು ರಫ್ತಿಗೆ ಉತ್ತೇಜನ ನೀಡಿದರು. ಅವರ ಬಗ್ಗೆ ಯುವ ಪೀಳಿಗೆಗೆ ತಿಳಿಸುವ ನಿಟ್ಟಿನಲ್ಲಿ ಪ್ರವಾಸಿ ತಾಣಗಳಲ್ಲಿ ಅವರ ಸಾಧನೆ–ಕೊಡುಗೆಯ ಮಾಹಿತಿ ಫಲಕ ಹಾಕುವ ಅಗತ್ಯವಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಇಂಜಿನಿಯರ್‌ಗಳಾದ ಎ.ಎಸ್.ಯೋಗನರಸಿಂಹ, ಗುರುದತ್, ಜಯಸಿಂಹ ಶ್ರೀಧರ್, ಎನ್.ರಾಜೇಶ್ವರಿ, ರಾಮಚಂದ್ರು ಮತ್ತು ಆನಂದ್ ದೇಶಪಾಂಡೆ ಅವರನ್ನು ಆರ್.ರಘು ಕೌಟಿಲ್ಯ ಸನ್ಮಾನಿಸಿದರು. ಮಹರ್ಷಿ ವಿದ್ಯಾಸಂಸ್ಥೆಯ ಸಿಇಓ ತೇಜಸ್ ಶಂಕರ್, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಮುಖಂಡರಾದ ರಂಗನಾಥ್, ಸುಚೇಂದ್ರ, ಪ್ರಶಾಂತ್ ಮತ್ತಿತರರು ಹಾಜರಿದ್ದರು.



ಸರ್ ಎಂ.ವಿಶ್ವೇಶ್ವರಯ್ಯರವರ 161ನೇ ಜನ್ಮದಿನದ ನಿಮಿತ್ತ ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಮತ್ತು ಕಾಮಗಾರಿ ಮಜ್ದೂರ್ ಸಂಘ(ರಿ) ವತಿಯಿಂದ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಆವರಣದಲ್ಲಿರುವ ಸರ್ ಎಂ.ವಿಶ್ವೇಶ್ವರಯ್ಯರವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಎನ್.ಚಂದ್ರು, ಜಗದೀಶ್ ಬಿ., ಚಂದನ್‌ಬಿ., ಬಾಬು, ಮಂಜುನಾಥ್ ಸ್ವಾಮಿ ಹಾಗೂ ಕುಮಾರ್ ಭಾಗವಹಿಸಿದ್ದರು.



ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರ ಜನ್ಮದಿನದ ಪ್ರಯುಕ್ತ ಅವರ ಪುತ್ಥಳಿಗೆ ಎ.ಪಿ.ಎನ್ ಫೌಂಡೇಶನ್ ವತಿಯಿಂದ ಗೌರವ ಸಲ್ಲಿಸಲಾಯಿತು. ಈ ವೇಳೆ ಎ.ಪಿ.ಎನ್ ಫೌಂಡೇಶನ್‌ನ ಮ್ಯಾನೇಜಿಂಗ್ ಟ್ರಸ್ಟಿ ಎ.ಪಿ.ನಾಗೇಶ್ ಹಾಗೂ ಸತೀಶ್, ಹೇಮಂತ್, ಸಚಿನ್.ವೈ, ವಸಂತ್‌ಕುಮಾರ್ ಹಾಗೂ ಅವಿನಾಶ್ ಹಾಜರಿದ್ದರು.

ದಸರಾ ಅಂಗವಾಗಿ ಬೊಂಬೆ ಹಬ್ಬ, ಹೆಣ್ಣು ಮಕ್ಕಳಿಗೆ ನೃತ್ಯ ಸ್ಪರ್ಧೆ

ಮೈಸೂರು, ಸೆ.15(ಆರ್‌ಕೆಬಿ)– ಇನ್ನರ್ ವ್ಹೀಲ್ ಮೈಸೂರು ಗೋಲ್ಡ್ ಕ್ಲಬ್ ವತಿಯಿಂದ ದಸರಾ ಅಂಗವಾಗಿ ಬೊಂಬೆ ಹಬ್ಬ ಹಾಗೂ ಹೆಣ್ಣು ಮಕ್ಕಳ ದಿನದ ನೃತ್ಯ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಅಧ್ಯಕ್ಷರಾದ ಉಮಾ ಅನಿಲ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮ್‌ಸನ್ಸ್ ಬೊಂಬೆ ಮನೆ ಸಹಯೋಗದಲ್ಲಿ ಬೊಂಬೆ ಹಬ್ಬ ಸ್ಪರ್ಧೆ ನಡೆಯಲಿದೆ. ನವರಾತ್ರಿ ನಂತರ ವಿಜೇತರಿಗೆ ಬಹುಮಾನ ವಿತರಿಸಲಾಗುವುದು. ಹೀಗಾಗಿ ಆಸಕ್ತರು ತಮ್ಮ ಮನೆಯಲ್ಲಿ ಕೂರಿಸಿರುವ ಬೊಂಬೆಗಳ ವಿಡಿಯೋ ಮಾಡಿ ಕಳುಹಿಸಬೇಕು.

ಜೊತೆಗೆ ಹೆಣ್ಣು ಮಕ್ಕಳ ದಿನದ ಅಂಗವಾಗಿ ನೃತ್ಯ ಸ್ಪರ್ಧೆ ಆಯೋಜಿಸಿದ್ದು, ತಾಯಿ ಅಥವಾ ತಂದೆ ಜೊತೆಗೆ ಹೆಣ್ಣು ಮಕ್ಕಳು ಯಾವುದೇ ಸಂಯೋಜನೆಯ ನೃತ್ಯ ಮಾಡಿ ವಿಡಿಯೋವನ್ನು ಕಳುಹಿಸಬೇಕು. ಈ ಎರಡೂ ಸ್ಪರ್ಧೆಗಳಿಗೆ ಪ್ರವೇಶ ಶುಲ್ಕ 200 ರೂ.ಗಳಾಗಿವೆ. ಮಾಹಿತಿಗೆ ದೂ. 88619 38451 ಅನ್ನು ಸಂಪರ್ಕಿಸಬಹುದಾಗಿದೆ. ಗೋಷ್ಠಿಯಲ್ಲಿ ಕ್ಲಬ್ ಕಾರ್ಯದರ್ಶಿ ಪ್ರೇಮಾ ರವಿ, ಪ್ರತಿಭಾ ಪ್ರಶಾಂತ್ ಉಪಸ್ಥಿತರಿದ್ದರು.

ರೋಟರಿ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ವಿವಿಧ ಸವಲತ್ತು ವಿತರಣೆ

ಮೈಸೂರು, ಸೆ.15(ಆರ್‌ಕೆಬಿ)– ರೋಟರಿ ಸಂಸ್ಥೆಗಳು ನೀಡುವ ಸಹಾಯ, ಸವಲತ್ತುಗಳನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕೆಂದು ರೋಟರಿ ಕ್ಲಬ್ ಮೈಸೂರು ಜಯಪ್ರಕಾಶ್ ನಗರದ ಅಧ್ಯಕ್ಷ ಡಾ.ಮುಳ್ಳೂರು ನಂಜುಂಡಸ್ವಾಮಿ ತಿಳಿಸಿದರು.

ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರವೇಶಾತಿ ಶುಲ್ಕ, ಗುರುತಿನ ಚೀಟಿ ಶುಲ್ಕ, ಬಸ್ ಪಾಸ್‌ಗೆ ತಗಲುವ ಒಟ್ಟು ಹಣದ ಚೆಕ್ ವಿತರಣೆ ಮತ್ತು ಲೇಖನ ಸಾಮಗ್ರಿಗಳ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಯ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದಕ್ಕಾಗಿ ಇಂತಹ ಕಾರ್ಯಕ್ರಮಗಳನ್ನು ವಿವಿಧ ಸರ್ಕಾರಿ ಶಾಲೆಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಇದೇ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ಜೆ.ಗೀತಾ ಅವರಿಗೆ ಮುಳ್ಳೂರು ನಂಜುಂಡಸ್ವಾಮಿ ಅವರು ಚೆಕ್ ವಿತರಿಸಿದರು. ವಿದ್ಯಾರ್ಥಿಗಳಿಗೆ



ಲೇಖನ ಸಾಮಗ್ರಿಗಳನ್ನು ಸಹ ವಿತರಿಸಲಾಯಿತು.

ಶಿಕ್ಷಕರ ದಿನಾಚರಣೆ ಅಂಗವಾಗಿ ಶಾಲೆಯ ಶಿಕ್ಷಕರಿಗೆ ನೆನಪಿನ ಕಾಣಿಕೆ, ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ರೋಟರಿ ವಲಯ 7ರ ಸಹಾಯಕ ಗವರ್ನರ್ ಆರ್.ವೆಂಕಟೇಶ್, ಆರೋಗ್ಯ ಸಿರಿ ಜಿಲ್ಲಾ ಕಾರ್ಯಾಧ್ಯಕ್ಷ ಹೆಚ್.ಆರ್.ಹರೀಶ್, ಕಾರ್ಯದರ್ಶಿ ಅನಿಲ್ ಸಲ್ಡಾನಾ ಇನ್ನಿತರರು ಉಪಸ್ಥಿತರಿದ್ದರು.

ಸಾಮಾಜಿಕ, ಶೈಕ್ಷಣಿಕ ಬೆಳವಣಿಗೆಯಿಂದ ದೇಶದ ಪ್ರಗತಿ ಸಾಧ್ಯ

ಡಾ.ಅಂಬೇಡ್ಕರ್ ಛೇಂಬರ್ ಆಫ್ ಕಾಮರ್ಸ್‌ನ ಮಹಾನಿರ್ದೇಶಕ ಇಂದರ್ ಇಕ್ಬಾಲ್ ಸಿಂಗ್ ಅತ್ವಲ್ ಅಭಿಮತ



ಮೈಸೂರು,ಸೆ.15(ಎಂಟಿವೈ)– ಸಾಮಾಜಿಕ ಹಾಗೂ ಶೈಕ್ಷಣಿಕ ಬೆಳವಣಿಗೆಯಿಂದ ದೇಶದ ಪ್ರಗತಿ ಸಾಧ್ಯ ಎಂದು ಡಾ. ಬಿ.ಆರ್.ಅಂಬೇಡ್ಕರ್ ಛೇಂಬರ್ ಆಫ್ ಕಾಮರ್ಸ್‌ನ ಮಹಾನಿರ್ದೇಶಕ ಇಂದರ್ ಇಕ್ಬಾಲ್ ಸಿಂಗ್ ಅತ್ವಲ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಛೇಂಬರ್ ಆಫ್ ಕಾಮರ್ಸ್, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಸಾಮಾಜಿಕ ನ್ಯಾಯ ವೇದಿಕೆ ವತಿಯಿಂದ ಆಯೋಜಿಸಿದ್ದ ಸಮುದಾಯ ಆರ್ಥಿಕತೆ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಎಸ್‌ಸಿ, ಎಸ್‌ಟಿ ಕುರಿತಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುವಜನರು ಉದ್ಯೋಗ ಹುಡುಕುವುದಕ್ಕೆ ತಮ್ಮ ಶ್ರಮ ವ್ಯಯಿಸದೇ ಸ್ವಯಂ ಉದ್ಯೋಗ ಸ್ಥಾಪಿಸಿ, ಕೆಲಸ ಹುಡುಕುತ್ತಿರುವವರಿಗೆ ಉದ್ಯೋಗ ನೀಡುವಂತಹ ಜವಾಬ್ದಾರಿ ಬೆಳೆಸಿಕೊಳ್ಳಬೇಕು. ಕಾಲೇಜು ದಿನಗಳಲ್ಲಿಯೇ ಜೀವನ ರೂಪಿಸಿಕೊಳ್ಳಲು ಆಲೋಚನೆಯನ್ನು ಮೈಗೂಡಿಸಿಕೊಳ್ಳಬೇಕು. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಜೀವನದ ತಿರುವು ಸಿಗುತ್ತವೆ. ದೇಶದ ಜನಸಂಖ್ಯೆಯಲ್ಲಿ ಯುವಜನರ ಸಂಖ್ಯೆ ಹೆಚ್ಚಾಗಿದೆ. ಯುವಜನತೆ ಏಳಿಗೆ ಸಾಧಿಸಿದರೆ ದೇಶದ ಬೆಳವಣಿಗೆ ಸಾಧ್ಯ ಸಾಮಾಜಿಕ ಹಾಗೂ ಶೈಕ್ಷಣಿಕ ವಲಯದಲ್ಲಿ ಅಭಿವೃದ್ಧಿಯಾದರೆ ದೇಶ ಪ್ರಗತಿಗೆ ಅನುಕೂಲವಾಗಲಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಹೋರಾಟ ಹಾಗೂ ಅವರು ಅನುಸರಿಸಿದ ಮಾರ್ಗಗಳನ್ನು ವಿದ್ಯಾರ್ಥಿಗಳು ಅನುಸರಿಸಬೇಕು. ಡಾ.ಬಿ.ಆರ್.ಅಂಬೇಡ್ಕರ್ ಅವರು ಅರ್ಥಶಾಸ್ತ್ರಜ್ಞ ಕೂಡ ಹೌದು. ದೇಶದಲ್ಲಿ ಆರ್ಥಿಕತೆಯ ಸಮತೋಲನವನ್ನು ಹೇಗೆ ಕಾಪಾಡಬೇಕು ಎಂಬುವುದರ ಬಗ್ಗೆ ಹೇಳಿದ್ದಾರೆ. ಇವರ ಮಾಹಿತಿಯನ್ನು ಅರ್ಥಶಾಸ್ತ್ರಜ್ಞರಾದ ಅಮಾರ್ತ್ಯ ಸೇನ್ ಕೂಡ ಮೆಚ್ಚಿಕೊಂಡಿದ್ದಾರೆ ಎಂದರು.

ಅನುದಾನಗಳ ಬಳಕೆಯಿಂದ ಸಮುದಾಯಗಳು ಆರ್ಥಿಕತೆ ಹಾಗೂ ಸಾಮಾಜಿಕತೆಯಲ್ಲಿ ಸುಧಾರಣೆಯಾಗುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮೀಸಲಿಡುವ ಅನುದಾನವನ್ನು ಪಡೆದುಕೊಂಡು, ಮುಂದೆ ಬರಬೇಕು. ಸರಕಾರಗಳು ಎಸ್‌ಸಿ, ಎಸ್‌ಟಿಗೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ. ಅದರ ಮಾಹಿತಿ ಅರಿತು ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾ ಉಸ್ತುವಾರಿ ಸಿರಿ ಪ್ರಕಾಶ್ ತನ್ವರ್, ಮೈಸೂರಿನ ಆರ್‌ಎಸ್‌ಎಸ್ ಕಾರ್ಯನಿರ್ವಾಹಕ ಮಾ. ವೆಂಕಟೇಶ್, ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಮಾನಸಗಂಗೋತ್ರಿ ಮಾನವಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಗಂಗಾಧರ್, ಸಾಮಾಜಿಕ ಕಾರ್ಯ ವಿಭಾಗದ ಪ್ರೊ.ಜ್ಯೋತಿ ಮತ್ತಿತರರು ಪಾಲ್ಗೊಂಡಿದ್ದರು.

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ



ಈ ವಾರ ತೆರೆಗೆ ಮಾನ್ಸೂನ್ ರಾಗ

ಡಾಲಿ ಧನಂಜಯ್, ರಚಿತಾ ರಾಮ್ ಅಭಿನಯದ ಮಾನ್ಸೂನ್ ರಾಗ ಈವಾರ (16) ರಾಜ್ಯಾದ್ಯಂತ ತೆರೆಕಾಣುತ್ತಿದೆ. ಈಗಾಗಲೇ ತನ್ನ ಮೇಕಿಂಗ್ ಹಾಗೂ ಹಾಡುಗಳಿಂದಲೇ ಸಾಕಷ್ಟು ಕುತೂಹಲ ಹುಟ್ಟಿಸಿರುವ ಚಿತ್ರ ಇದಾಗಿದ್ದು ಬಡವ ರಾಸ್ಕಲ್, ರತ್ನನ್ ಪ್ರಪಂಚ ಚಿತ್ರಗಳ ನಂತರ ಧನಂಜಯ್ ಮತ್ತೊಂದು ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿರುವ ಚಿತ್ರ ಇದಾಗಿದೆ.

ಪುಷ್ಪಕ ವಿಮಾನ ಖ್ಯಾತಿಯ ರವೀಂದ್ರನಾಥ್ ಅವರ ನಿರ್ದೇಶನದ ಈ ಚಿತ್ರವನ್ನು ವಿಖ್ಯಾತ್ ನಿರ್ಮಿಸಿದ್ದಾರೆ. ಇಡೀ ಚಿತ್ರದ ಕಥೆ ಮುಂಗಾರು ಮಳೆಯೊಳಗೇ ನಡೆಯುತ್ತದೆ ಎನ್ನಲಾಗಿದ್ದು, ಟೀಸರ್‌ನಲ್ಲಿ ಮಳೆಯ ಜೊತೆಗೆ ನೆರಳು ಬೆಳಕಿನ ಹಿನ್ನೆಲೆಯು ಚಿತ್ರೀಕರಣವೂ ಸೊಗಸಾಗಿ ಮೂಡಿಬಂದಿದೆ. ಎಸ್.ಕೆ. ರಾವ್ ಅವರ ಸಿನಿಮಾಟೋಗ್ರಫಿ ಈ ಚಿತ್ರಕ್ಕಿದ್ದು, ಚಿತ್ರದ ಹಾಡುಗಳಿಗೆ ಅನೂಪ್ ಸೀಳಿನ್ ಅವರ ಸಂಗೀತ ಸಂಯೋಜನೆಯಿದೆ.



ಗಾಳಿಪಟ-2 ಚಿತ್ರದ ನಾಯಕಿ
ವೈಭವಿ ಶಾಂಡಿಲ್ಯ



26ರ ಹುಡುಗ 33ರ ಮಹಿಳೆಯ ಪ್ರೇಮಕಥೆ
ಕುಳ್ಳನ ಹೆಂಡತಿ

ಸ್ಟಾರ್ ವೆಂಚರ್ಸ್ ಬ್ಯಾನರ್‌ನಲ್ಲಿ ನಿರ್ಮಾಣವಾದ ವಿಭಿನ್ನ ಪ್ರೇಮಕಥಾನಕ ಕುಳ್ಳನ ಹೆಂಡತಿ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು. ವಿಶಾಖ್ ಅವರ ನಿರ್ದೇಶನದ ಈ ಚಿತ್ರದಲ್ಲಿ ಆಶ್ರಿತ್ ವಿಶ್ವನಾಥ್ ಹಾಗೂ ರಾಸಿಕಾ ಬೀರೇಂದ್ರ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿಕೊಂಡು ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದಲ್ಲಿ ವಯಸ್ಸಿನ ಅಂತರದ ಮೇಲೆ ಮಾಡಿದ ಕಥೆಯಿದ್ದು, ಸಮಾಜಕ್ಕೆ ಒಳ್ಳೆಯ ಮೆಸೇಜ್ ಹೇಳುತ್ತದೆ.

ನಿರ್ದೇಶಕ ವಿಶಾಖ್ ಚಿತ್ರದ ಕುರಿತು ಮಾತನಾಡಿ 26ರ ಹರೆಯದ ಹುಡುಗನಿಗೆ 33ರ ವಯಸ್ಸಿನ ನರ್ಸ್ ಮೇಲೆ ಲವ್ ಆದರೆ ಹೇಗಿರುತ್ತೆ ಎಂಬುದನ್ನು ಈ ಚಿತ್ರದ ಮೂಲಕ ಹೇಳ ಹೊರಟಿದ್ದೇನೆ ಒಂದು ಸುಂದರ ಲವ್ ಸ್ಟೋರಿ ಚಿತ್ರದಲ್ಲಿದ್ದು, 45 ದಿನಗಳ ಕಾಲ ಶೂಟಿಂಗ್ ನಡೆಸಿದ್ದೇವೆ 15-20 ಜನ ಮೇನ್ ಆರ್ಟಿಸ್ಟ್ ಈ ಚಿತ್ರದಲ್ಲಿ ನಟಿಸಿದ್ದಾರೆ ಅಕ್ಟೋಬರ್‌ನಲ್ಲಿ ರಿಲೀಸ್ ಮಾಡುವ ಯೋಚನೆಯಿದೆ ಎಂದರು. ಚಿತ್ರದ 5 ಹಾಡುಗಳಿಗೆ ಪರಮ್ ನಿರ್ವಿಕಾರ್ ಸಂಗೀತ ಸಂಯೋಜನೆ ಮಾಡಿದ್ದಾರೆ.

ನಾಯಕ ಅಶ್ರಿತ್ ವಿಶ್ವನಾಥ್ ಮಾತನಾಡಿ, ಸಿನಿಮಾಗಳಲ್ಲಿ ಸಣ್ಣ ಪುಟ್ಟ ಪಾತ್ರ ಮಾಡಿದ್ದೆ. ನಾಯಕನಾಗಿ ಮೊದಲ ಸಿನಿಮಾ ಎಂದು ಹೇಳಿದರು. ನಾಯಕಿ ರಾಸಿಕಾ ಬೀರೇಂದ್ರ ಮಾತನಾಡಿ, ನಟನೆ ಮಾಡಬೇಕೆಂದು ಚಿಕ್ಕ ವಯಸ್ಸಿನಿಂದ ಆಸೆ ಇತ್ತು. ಇದರಲ್ಲಿ ಜ್ಯೋತಿರ್ಮಹಿ ಎಂಬ ಪಾತ್ರ ಮಾಡಿದ್ದೇನೆ ಎಂದರು.



ಶಿವಾಜಿ ಸುರತ್ಕಲ್ 2 ಟೀಸರ್ ಬಿಡುಗಡೆ

ಪ್ರತಿಭಾವಂತ ನಟ ರಮೇಶ್ ಅರವಿಂದ್ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರು ನಟಿಸಿರುವ "ಶಿವಾಜಿ ಸುರತ್ಕಲ್ 2" ಚಿತ್ರದ ಟೀಸರ್ ಬಿಡುಗಡೆ ಸಮಾರಂಭ ನಡೆಯಿತು. ಎರಡು ವರ್ಷಗಳ ಹಿಂದೆ ಬಿಡುಗಡೆಯಾದ 'ಶಿವಾಜಿ ಸುರತ್ಕಲ್' ಚಿತ್ರಕ್ಕೆ ಸಿಕ್ಕ ಪ್ರಶಂಸೆಯೇ ಭಾಗ 2 ಮಾಡಲು ಸ್ಫೂರ್ತಿ. ಥಿಯೇಟರ್‌ನಲ್ಲಿ ನಮ್ಮ ಚಿತ್ರ ಚೆನ್ನಾಗಿ ಓಡುತ್ತಿರುವ ಸಂದರ್ಭದಲ್ಲೇ ಕೋವಿಡ್ ಬಂತು. ನಂತರ ರಮೇಶ್ ಅರವಿಂದ್ ಅವರ ಜೊತೆಗೆ ಸಾಕಷ್ಟು ಚರ್ಚೆ ನಡೆಸಿದ ನಂತರ "ಶಿವಾಜಿ ಸುರತ್ಕಲ್ 2" ಚಿತ್ರಕ್ಕೆ ಚಾಲನೆ ದೊರೆಯಿತು. ಎರಡನೇ ಭಾಗ ಮಾಡುವುದು ಅಷ್ಟು ಸುಲಭವಲ್ಲ. ಎಲ್ಲರ ಬಳಿ ಮೊಬೈಲ್ ಇರುವುದರಿಂದ ಸಣ್ಣಸಣ್ಣ ವಿಷಯಗಳನ್ನು ಪ್ರೇಕ್ಷಕ ಗಮನಿಸುತ್ತಿರುತ್ತಾನೆ. ಈ ರೀತಿಯ ತಪ್ಪಾಗಿದೆ ಎಂದು ತಕ್ಷಣವೇ ತಿಳಿಸುತ್ತಾನೆ. ಅದನ್ನೆಲ್ಲಾ ಗಮನಿಸಿ ಚಿತ್ರ ಮಾಡುವ ಜವಾಬ್ದಾರಿ ನಿರ್ದೇಶಕನ ಮೇಲಿರುತ್ತದೆ ಎಂದು ನಿರ್ದೇಶಕ ಆಕಾಶ್ ಶ್ರೀವತ್ಸ ಹೇಳಿದರು.


'ಶಿವಾಜಿ ಸುರತ್ಕಲ್'ಗೆ ಸಿಕ್ಕ ಗೆಲುವಿನಿಂದ ಭಾಗ 2 ಮಾಡಲು ಮುಂದಾದೆವು. ಅದರಲ್ಲೂ ರಮೇಶ್ ಅರವಿಂದ್ ಅವರ ಸಹಕಾರ ಅಪಾರ ಎಂದು ನಿರ್ಮಾಪಕ ಅನೂಪ್ ಗೌಡ ಹೇಳಿದರು.

ಈ 30 ವರ್ಷಗಳಲ್ಲಿ ಸಾಕಷ್ಟು ಪಾತ್ರಗಳನ್ನು ಮಾಡಿದ್ದೇನೆ. ಆದರೆ ಒಂದೇ ಪಾತ್ರವನ್ನು ಎರಡನೇ ಬಾರಿ ಮಾಡುತ್ತಿರುವುದು ಇದೇ ಮೊದಲು. ನನಗೆ ನಿರ್ದೇಶಕ ಆಕಾಶ್ ಶ್ರೀವತ್ಸ ಹದಿನೈದು ವರ್ಷಗಳಿಂದ ಪರಿಚಯ. "ಆಕ್ಸಿಡೆಂಟ್" ಚಿತ್ರದಲ್ಲಿ ನನ್ನೊಟ್ಟಿಗೆ ಕೆಲಸವನ್ನೂ ಮಾಡಿದ್ದಾರೆ. ಅದ್ಭುತ ನಿರ್ದೇಶಕ. ಒಳ್ಳೆಯ ತಂಡ ಎಂದರು ನಾಯಕ ರಮೇಶ್ ಅರವಿಂದ್.

ನಾನು ರಮೇಶ್ ಅವರ ಪತ್ನಿಯ ಪಾತ್ರದಲ್ಲಿ ಅಭಿನಯಿಸಿದ್ದೇನೆ ಎಂದು ನಟಿ ರಾಧಿಕಾ ನಾರಾಯಣ್ ಹೇಳಿಕೊಂಡರು. ರಮೇಶ್ ಸರ್ ಜೊತೆ ಅಭಿನಯ ಮಾಡುವುದು ನನ್ನ ಬಹು ದಿನಗಳ ಕನಸು. ಅದು ಈಗ ಈಡೇರಿದೆ. ಚಿತ್ರದಲ್ಲಿ ಪೊಲೀಸ್ ಅಧಿಕಾರಿಯಾಗಿ ಅಭಿನಯಿಸಿದ್ದೇನೆ ಎಂದರು ನಟಿ ಮೇಘನ ಗಾಂವ್ಕರ್. ಅಂಜನಾದ್ರಿ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ರೇಖಾ ಕೆ.ಎನ್ ಹಾಗೂ ಅನೂಪ್ ಗೌಡ ನಿರ್ಮಿಸಿರುವ ಚಿತ್ರಕ್ಕೆ ಜ್ಯೂಡಾ ಸ್ಯಾಂಡಿ ಸಂಗೀತ ನೀಡಿದ್ದಾರೆ. ದರ್ಶನ್ - ಗುರುಪ್ರಸಾದ್ ಛಾಯಾಗ್ರಹಣ ಹಾಗೂ ಆಕಾಶ್ ಶ್ರೀವತ್ಸ ಸಂಕಲನ ಈ ಚಿತ್ರಕ್ಕಿದೆ.

ಸಿನಿಪದಬಂಧ-025

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ________
ವಿಳಾಸ ________
____
ದೂರವಾಣಿ ಸಂಖ್ಯೆ ________

ಎಡದಿಂದ ಬಲಕ್ಕೆ

1. ಶಂಕರನಾಗ್-ಟೈಗರ್ ಪ್ರಭಾಕರ್ - ಜಯಮಾಲಾ ಅಭಿನಯದ ಚಿತ್ರ (5)
3. "ನವಿಲೇನೋ ಕುಣಿಬೇಕು.. ಕೋಗಿಲೆಯೋ ಹಾಡಬೇಕು" ಈ ಚಿತ್ರದ್ದು (4)
5. ಗಿರೀಶ್ ಕಾರ್ನಾಡ್ ನಿರ್ದೇಶನದ ಅರಣ್ಯ ಎಂಬರ್ಥದ 1973ರ ಚಿತ್ರ (2)
7. ಚಿರಂಜೀವಿ ಸರ್ಜಾ-ರಾಧಿಕಾ ಕುಮಾರಸ್ವಾಮಿ ಅಭಿನಯದ 2015ರ ಚಿತ್ರ (5)
8. _ _ _ ಬೊಂಬೆಗೆ ಗಂಧದ ಶೃಂಗಾರ, ನೀಲಕಂಠ ಚಿತ್ರದ ಗೀತೆ (3)
11. ಆಟೋ _ _ _ , ಉಪೇಂದ್ರ- ಶಿಲ್ಪಾ ಶೆಟ್ಟಿ ಅಭಿನಯದ ಚಿತ್ರ (3)
13. ವಿಷ್ಣುವರ್ಧನ್- ನಗ್ಮಾ - ಅನು ಪ್ರಭಾಕರ್ ಅಭಿನಯದ 2003ರ ಚಿತ್ರ (5)
15. ಸಮಾಧಿ ಎಂಬರ್ಥದ ಸಿನಿಮಾ ತಿರುಗಿದೆ (2)
17. ರಾಜ್-ಭಾರತಿ-ಲೀಲಾವತಿ ಅಭಿನಯದ ಪಂತುಲು ನಿರ್ದೇಶನದ ಚಿತ್ರ (4)
18. _ _ _ _ _ ಬಂದಾಗ ಮಾವು ಚಿಗುರಲೇಬೇಕು (5)

ಮೇಲಿನಿಂದ ಕೆಳಕ್ಕೆ

1. ಗೋಲ್ ಮಾಲ್ ರಾಧಾಕೃಷ್ಣ ಸಿನಿಮಾದ ನಾಯಕಿ (3)
2. ಯೋಗರಾಜ್ ಭಟ್ ನಿರ್ದೇಶನದಲ್ಲಿ ಗಣೇಶ್ ನಟಿಸಿದ ಸುಪ್ರಸಿದ್ಧ ಚಿತ್ರ (5)
3. _ _ _ರೇಖೆ, ಶ್ರೀನಾಥ್-ಅಂಬಿಕಾ-ಮಾಧವಿ ಅಭಿನಯದ ಚಿತ್ರ (3)
4. ಗಟ್ಟಿತಾಳಿ _ _ _ _, ಕಾಶಿನಾಥ್ ಅಭಿನಯದ ಚಿತ್ರ, (ತಲೆಕೆಳಗಾಗಿದೆ) (4)
6. "ಪ್ರೀತಿಯಲ್ಲಿ ಇರೋ ಸುಖ ಗೊತ್ತೇ ಇರಲಿಲ್ಲ" ಗೀತೆಯ ಚಿತ್ರ ತಲೆಕೆಳಗಾಗಿದೆ (5)
9. ಕೆ.ಆರ್.ವಿಜಯ-ಕಲ್ಯಾಣಕುಮಾರ್ ಅಭಿನಯದ ಕೆ.ಎಸ್.ಎಲ್.ಸ್ವಾಮಿ ಚಿತ್ರ (5)
10. ಶ್ರೀನಾಥ್-ಆರತಿ ಅಭಿನಯದ 1984ರ ಚಿತ್ರ (ಕೊನೆಗೆ ಅನುಸ್ವಾರ ಸೇರಿದೆ) (5)
12. ಶಿವರಾಜ್ ಕುಮಾರ್-ನಿರೋಶಾ ಅಭಿನಯದ ಚಿತ್ರ ತಲೆಕೆಳಗಾಗಿದೆ (4)
14. ತಂಗಿ ಎಂಬರ್ಥದ 1955ರ ಚಿತ್ರದ ಆದಿ ಅಸ್ತವ್ಯಸ್ತಗೊಂಡಿದೆ (3)
16. ವಿಜಯ ರಾಘವೇಂದ್ರ-ಯಶ್-ಪೂಜಾ ಗಾಂಧಿ ಅಭಿನಯದ ಚಿತ್ರ (3)

ಸಿನಿ ಪದಬಂಧ 024ರ ಸರಿ ಉತ್ತರ

ಅ	ರ	ಣ್ಯ	ದ	ಲ್ಲಿ	ಅ	ಭಿ	ಮ	ನ್ಯು		ಒಂ
ಪೂ					ಣ್ಣ					ಟಿ
ರ್ವ				ಅ	ಯ್ಯ		ಸ		ದಾ	ಸ
ಜೋ	ಡಿ	ಹ	ಕ್ಕಿ				ಪ್ತ			ಲ
ಡಿ		ಬ್ಬ				ಭೂ	ಪ	ತಿ	ರಂ	ಗ
			ರಿ				ದಿ			
ಜೇ	ಡ	ರ	ಬ	ಲೆ				ಕ		ಗೌ
ನಿ			ಲಾಂ				ಸ್ವ	ರ್ಣ	ಗೌ	ರಿ
ನ	ವ್ಯಾ		ನೀ		ತಿ	ಥಿ				ಕ
ಹೊ					ಭೂ					ಲ್ಯಾ
ಳೆ		ಒಂ	ದೇ	ರೂ	ಪ	ಎ	ರ	ಡು	ಗು	ಣ

ವಿಜೇತರು: ಜಗದೀಶ್
ರಾಮಕೃಷ್ಣ ನಗರ,
ಇ ಅಂಡ್ ಎಫ್ ಬ್ಲಾಕ್, ಮೈಸೂರು

ಛೀಕಳ್ಳ ಹಾಡಿನಲ್ಲಿ ಅಕ್ಷರ್-ರೀಷ್ಮಾ ನಾಣಯ್ಯ



ಹಲವಾರು ಯಶಸ್ವೀ ಚಿತ್ರಗಳನ್ನು ನಿರ್ಮಿಸಿರುವ ಬೆಂ.ಕೋ.ಶ್ರೀನಿವಾಸ್ ಅವರ ಪುತ್ರ ಅಕ್ಷರ್ ಹಾಗೂ ಏಕ್ ಲವ್ ಯಾ ಬೆಡಗಿ ರೀಷ್ಮಾ ನಾಣಯ್ಯ ಅಭಿನಯದ 'ಛೀಕಳ್ಳ' ವೀಡಿಯೋ ಹಾಡಿನ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು. ನವೀನ್‌ಸಜ್ಜು ಅವರ ಕಂಠದಲ್ಲಿ ಮೂಡಿಬಂದಿರುವ ಈ ವೀಡಿಯೋ ಹಾಡನ್ನು ಎ2 ಮ್ಯೂಸಿಕ್ ಹೊರತಂದಿದೆ. ಪುನರ್ವ್ ಆಕರ್ಷ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಗೀತೆಯ ಸಾಹಿತ್ಯವನ್ನು ವಿಸ್ಮಯ ಜಗ ರಚಿಸಿದ್ದಾರೆ. ಅವರೇ ಸಂಗೀತ ಸಂಯೋಜನೆಯನ್ನೂ ಮಾಡಿದ್ದಾರೆ. ನಿರ್ಮಾಪಕ ಬೆಂ.ಕೋ.ಶ್ರೀ ಅವರೇ "ಛೀಕಳ್ಳ" ಗೀತೆಯನ್ನು ಬಿಡುಗಡೆಗೊಳಿಸಿ ಮಾತನಾಡುತ್ತ ನಾನು 7 ಚಿತ್ರಗಳನ್ನು ನಿರ್ಮಿಸಿದ್ದೇನೆ. ಆ ಪೈಕಿ ಕೆಲವು ಚಿತ್ರಗಳಿಗೆ ರಾಜ್ಯಪ್ರಶಸ್ತಿ ಸಹ ಬಂದಿದೆ. ನನಗೆ ಮೊದಲಿನಿಂದಲೂ ಮಾಧ್ಯಮದವರು ನೀಡಿರುವ ಪ್ರೋತ್ಸಾಹ ಮರೆಯಲಾಗದು. ಅದೇ ಪ್ರೋತ್ಸಾಹವನ್ನು ನನ್ನ ಮಗನಿಗೂ ನೀಡಿ ಎಂದು ಕೇಳಿಕೊಂಡರು.

ಯುವನಟ ಅಕ್ಷರ್ ಮಾತನಾಡುತ್ತ, ನಾನು ಸಿನಿಮಾದಲ್ಲಿ ನಟಿಸಲು ಸಿದ್ಧತೆ ನಡೆಸಿದ್ದೇನೆ. ಅದರ ಪೂರ್ವಭಾವಿಯಾಗಿ ಈ ಆಲ್ಬಂ ಗೀತೆಯನ್ನು ಮಾಡಿದ್ದೇವೆ. ರೀಷ್ಮಾ ನಾಣಯ್ಯ ಅವರ ಮುದ್ದಾದ ಅಭಿನಯ ಈ ಹಾಡನ್ನು ಮತ್ತಷ್ಟು ಸುಂದರವಾಗಿಸಿದೆ. ವಿಸ್ಮಯ ಜಗ ಅದ್ಭುತವಾದ ಸಾಹಿತ್ಯ ಬರೆದು, ರಾಗ ಸಂಯೋಜನೆ ಕೂಡ ಮಾಡಿದ್ದಾರೆ. ಅಷ್ಟೇ ಚೆನ್ನಾಗಿ ಪುನರ್ವ್ ಆಕರ್ಷ್ ನಿರ್ದೇಶಿಸಿದ್ದಾರೆ. ನವೀನ್ ಕುಮಾರ್ ಹಾಗೂ ಎ.ಜೆ.ಶೆಟ್ಟಿ ಅವರ ಛಾಯಾಗ್ರಹಣದಲ್ಲಿ ಈ ಹಾಡನ್ನು ನೋಡುವುದೇ ಸೊಗಸು ಎಂದು ಹೇಳಿದರು.

ನಾಯಕಿ ರೀಷ್ಮಾ ನಾಣಯ್ಯ ಮಾತನಾಡುತ್ತ, "ಛೀಕಳ್ಳ" ಆಲ್ಬಂಸಾಂಗ್ ತುಂಬಾ ಚೆನ್ನಾಗಿ ಮೂಡಿಬಂದಿದೆ. ನಾನು ನಟಿಸಿರುವ ಮೊದಲ ಆಲ್ಬಂ ಸಾಂಗ್ ಇದು ಎಂದು ತಿಳಿಸಿದರು. ನಿರ್ದೇಶಕ ಪುನರ್ವ್ ಆಕರ್ಷ್, ಹಾಡು ಬರೆದು, ರಾಗಸಂಯೋಜನೆ ಮಾಡಿರುವ ವಿಸ್ಮಯ ಜಗ, ಛಾಯಾಗ್ರಾಹಕ ನವೀನ್‌ಕುಮಾರ್ ಹಾಗೂ ನೃತ್ಯ ನಿರ್ದೇಶಕ ನಾಗೇಂದ್ರ ಇವರೆಲ್ಲ ಈ ವಿಶೇಷ ಹಾಡಿನ ಕುರಿತಂತೆ ತಮ್ಮ ಅಭಿಪ್ರಾಯ ಹಂಚಿಕೊಂಡರು.

ಮತ್ತೆ 'ಮಾಯಾಮೃಗ'ದ ಹಿಂದೆ ಸೀತಾರಾಮ್





25 ವರ್ಷಗಳ ಹಿಂದೆ ಟಿ.ಎನ್. ಸೀತಾರಾಮ್ ನಿರ್ದೇಶನದಲ್ಲಿ ಮೂಡಿಬಂದಿದ್ದ ಮಾಯಾಮೃಗ ಅತ್ಯಂತ ಜನಪ್ರಿಯವಾಗಿತ್ತು. ಈಗ ಅದರ ಮುಂದುವರಿದ ಭಾಗವಾಗಿ ಮತ್ತೆ ಮಾಯಾಮೃಗ ನಿರ್ಮಾಣವಾಗುತ್ತಿದೆ. ಈ ಕುರಿತಂತೆ ಕಂಠೀರವ ಸ್ಟುಡಿಯೋದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ತಂಡ ಮಾಹಿತಿ ಹಂಚಿಕೊಂಡಿತು.

ಸಿನಿಮಾಗಳಿಗೆ ಸೀಕ್ವೆಲ್ ಬರುವುದು ಸಾಮಾನ್ಯ. ಕಿರುತೆರೆಯಲ್ಲಿ ಈ ಪ್ರಯತ್ನ ಇದೇ ಮೊದಲು. 25 ವರ್ಷಗಳ ನಂತರ ಈ ಧಾರಾವಾಹಿಯ ಮುಂದುವರೆದ ಭಾಗ ತರುವುದು ಅಷ್ಟು ಸುಲಭವಲ್ಲ. ಸಾಕಷ್ಟು ಚಾಲೆಂಜ್‌ಗಳಿರುತ್ತವೆ ಎಂದು ಸೀತಾರಾಮ್ ಹೇಳಿದರು. ಆಗಲೂ, ಈಗಲೂ ಧಾರಾವಾಹಿ ನೋಡುವವರ ಮನಸ್ಥಿತಿ ಬದಲಾಗಿದೆ. ಸಿರಿಕನ್ನಡದ ಸಂಜಯ್‌ಶಿಂಧೆ ಅವರು ಈ ಪ್ರಪೋಸಲ್ ತಂದಾಗ ನನಗೆ ಭಯವಾಯ್ತು. ಮಾಯಾಮೃಗಕ್ಕೆ ಸೀಕ್ವೆಲ್ ಹೇಗೆ ಎಂಬ ಚಿಂತೆ ಕಾಡಿತು. ನಮ್ಮ ಧಾರಾವಾಹಿಯಲ್ಲಿ ನಟಿಸಿದ್ದ ಅನೇಕರು ಈಗ ಬೇರೆಬೇರೆ ಕಡೆ ಇದ್ದಾರೆ. ಕೆಲವರು ಈ ಜಗತ್ತಿನಲ್ಲೇ ಇಲ್ಲ ಎಂದು ಎದುರಿರುವ ಚಾಲೆಂಜ್‌ಗಳ ಬಗ್ಗೆ ಸೀತಾರಾಮ್ ವಿವರಿಸಿದರು.

ಆ ಕಾಲದಲ್ಲೇ ಆಗಿದ್ದರೆ ಅವರದ್ದೇ ಎರಡನೇ ಕಥೆ ಮಾಡಬಹುದಿತ್ತು ಈಗ ಅವರ ಮುಂದಿನ ಜನರೇಷನ್ ಕಥೆ ಹೇಳಬೇಕು. ಈಗ ಅತೀ ವೇಗದಲ್ಲಿ ಜಗತ್ತು ಸಾಗುತ್ತಿದೆ. ಸಂಬಂಧಗಳ ಮೌಲ್ಯ ಕಡಿಮೆ ಆಗಿದೆ. ಹಣದ ವಿಚಾರದಲ್ಲೂ ನಾವು ಬದಲಾಗಿದ್ದೇವೆ. ಈ ಕಥೆ ಹೊಸ ಜಗತ್ತಿಗೆ ತಕ್ಕ ಆಗಿರುತ್ತದೆ. ಹಿಂದಿನ ಸಲ ಶಾಸ್ತ್ರಿಗಳ ಕಥೆ ಹೇಳಿದ್ದೆವು. ಈಗ ನಾವು ಹಳೆಯ ತಂಡವನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ ಈಗ ಶಾಸ್ತ್ರಿಗಳು ವೇಗದ ಜಗತ್ತಿಗೆ ಹೇಗೆ ಹೊಂದಿಕೊಂಡಿದ್ದಾರೆ, ಅವರ ಮಕ್ಕಳು ಏನು ಮಾಡುತ್ತಿದ್ದಾರೆ ಎಂಬುದರ ಮೇಲೆ ಕಥೆ ಸಾಗುತ್ತದೆ. ಅಲ್ಲಿ ಅವಿನಾಶ್, ಮಾಳವಿಕ, ರಾಜೇಶ್ ನಟರಂಗ, ವೀಣಾಸುಂದರ್ ನಟಿಸಿದ್ದರು. ಅವರೆಲ್ಲ ಇಲ್ಲೂ ಇರುತ್ತಾರೆ. ಜೊತೆಗೆ ಸಾಕಷ್ಟು ಹೊಸ ಪಾತ್ರಗಳು ಸೇರ್ಪಡೆಯಾಗಿದ್ದು, ಈಗಾಗಲೇ ಚಿತ್ರೀಕರಣ ಆರಂಭವಾಗಿದೆ ಎಂದು ಟಿ.ಎನ್. ಸೀತಾರಾಮ್ ಹೇಳಿದರು. ಕಲಾವಿದರಾದ ಲಕ್ಷ್ಮೀ ಚಂದ್ರಶೇಖರ್, ಶಶಿಕುಮಾರ್, ವಿಕ್ರಮ್ ಸೂರಿ, ಸಿರಿ ಕನ್ನಡದ ಸಂಜಯ್ ಶಿಂಧೆ ಹಾಗೂ ರಾಜೇಶ್ ರಾಜಘಟ್ಟ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಅ.2ರಂದು ಬದನವಾಳಿಗೆ ರಾಹುಲ್ ಗಾಂಧಿ ಭೇಟಿ ಹಿನ್ನೆಲೆ

ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಡಿ.ಕೆ.ಶಿವಕುಮಾರ್ ಭೇಟಿ, ಪರಿಶೀಲನೆ

ನಂಜನಗೂಡು, ಸೆ.15– ಅ.1ರಂದು ಕರ್ನಾಟಕ ಪ್ರವೇಶಿಸುವ ಭಾರತ್ ಜೋಡೋ ಯಾತ್ರೆ ಅ.2ರಂದು ನಂಜನಗೂಡು ತಲುಪಲಿದ್ದು, ಅಂದು ಗಾಂಧಿ ಜಯಂತಿ ಆಗಿರುವುದರಿಂದ ಮಹಾತ್ಮ ಗಾಂಧೀಜಿ ಸ್ಥಾಪಿಸಿದ ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ವರಿಷ್ಠರಾದ ರಾಹುಲ್ ಗಾಂಧಿ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಲಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.

ತಾಲೂಕಿನ ಬದನವಾಳಿಗೆ ರಾಹುಲ್ ಗಾಂಧಿ ಭೇಟಿ ನೀಡುವ ಹಿನ್ನೆಲೆಯಲ್ಲಿ ಗುರುವಾರ ಇಲ್ಲಿನ ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಮಾಹಿತಿ ನೀಡಿದರು.

ಅ.2 ರಂದು ಗ್ರಾಮೋದ್ಯೋಗ ಕೇಂದ್ರದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಪಕ್ಷದ ರಾಜ್ಯ ನಾಯಕರು ಸೇರಿ ಗಾಂಧಿ ಜಯಂತಿ ಆಚರಿಸಲಾಗುವುದು. ಗ್ರಾಮೋದ್ಯೋಗ ಕೇಂದ್ರದ ಆವರಣದಲ್ಲಿ ನಾಯಕರು ಕುಳಿತುಕೊಳ್ಳಲು ಬೃಹದಾಕಾರದ ಎರಡು ಜರ್ಮನ್ ಟೆಂಟ್‌ಗಳು, ನೆಲಹಾಸು ಹಾಕಲಾಗುವುದು. ಅಲ್ಲದೇ ಕಲಾ ತಂಡಗಳಿಂದ ದೇಶಭಕ್ತಿ ಗೀತೆ, ಭಜನೆ, ಜಾನಪದ ಗಾಯನ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಗಿದೆ. ಮುಖ್ಯವಾಗಿ ಗಾಂಧೀಜಿಯವರು ರಾಜ್ಯಕ್ಕೆ ಭೇಟಿ ನೀಡಿದ್ದ ವೇಳೆ ತೆಗೆಯಲಾಗಿದ್ದ ಫೋಟೋಗಳನ್ನು 'ಕರ್ನಾಟಕ ಮತ್ತು ಗಾಂಧೀಜಿ' ಎಂಬ ಶೀರ್ಷಿಕೆ ನೀಡಿ ಪ್ರದರ್ಶಿಸಲಾಗುವುದು ಎಂದರು.

ಕರ್ನಾಟಕಕ್ಕೂ ಸ್ವಾತಂತ್ರ್ಯ ಹೋರಾಟಕ್ಕೂ ದೊಡ್ಡ ನಂಟಿದೆ. ಮಹಾತ್ಮ ಗಾಂಧೀಜಿ ಬೆಳಗಾಂ ಅಧಿವೇಶನದಲ್ಲಿ ಸ್ವಾತಂತ್ರ್ಯ ಹೋರಾಟದ ಅಧ್ಯಕ್ಷತೆ ವಹಿಸಿದ್ದರು. 1927ರಲ್ಲಿ ನಂಜನಗೂಡಿನ ಬದನವಾಳು ಗ್ರಾಮಕ್ಕೆ ಭೇಟಿ ನೀಡಿ ಖಾದಿ ಕೇಂದ್ರ ಸ್ಥಾಪಿಸಿದರು. ಈ ಪುಣ್ಯಸ್ಥಳಕ್ಕೆ ಭೇಟಿ ನೀಡಿದ 20 ವರ್ಷಗಳ ನಂತರ ದೇಶಕ್ಕೆ ಸ್ವಾತಂತ್ರ್ಯ



ದೊರತಿದೆ ಎಂದರು.

ಇತ್ತೀಚೆಗೆ ದೇಶದಲ್ಲಿ ಅಭದ್ರತೆ, ಧರ್ಮ ಸಂಘರ್ಷದಿಂದ ದೇಶ ತೊಂದರೆಯಲ್ಲಿದೆ. ರಾಹುಲ್ ಗಾಂಧಿ ಅವರು ಜಾತಿ, ಧರ್ಮ ತಾರತಮ್ಯ ಹೋಗಲಾಡಿಸಬೇಕು, ನಿರುದ್ಯೋಗ ಸಮಸ್ಯೆ ಹೋಗಲಾಡಿಸಬೇಕು, ಬೆಲೆ ಏರಿಕೆಯಿಂದಾದ ಜನರ ನೋವನ್ನು ತಿಳಿಯಬೇಕು, ರೈತರ ಬೆಳೆಗಳಿಗೆ ಬೆಂಬಲ ಬೆಲೆ ಸಿಗುವಂತಾಗಬೇಕು, ರಾಜ್ಯದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು, ನಾವೆಲ್ಲಾ ಒಂದಾಗಿರಬೇಕೆಂಬ ಸಂಕಲ್ಪದೊಂದಿಗೆ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 3700 ಕಿ.ಮೀ. ಬೃಹತ್ ನಡಿಗೆ ಮಾಡಲಿದ್ದಾರೆ. ರಾಜ್ಯದಲ್ಲಿ ಗುಂಡ್ಲುಪೇಟೆ ಮೂಲಕ ಸಾಗಿ 22 ದಿನಗಳ ಕಾಲ 570 ಕಿ.ಮೀ. ರಾಜ್ಯದಲ್ಲಿ ಹೆಜ್ಜೆ ಇಡಲಿದ್ದಾರೆ. ದೇಶದ ಐಕ್ಯತೆ ಕಾಪಾಡುವ ನಿಟ್ಟಿನಲ್ಲಿ ಎಲ್ಲರೂ ಪಕ್ಷಭೇದ ಮರೆತು ಒಂದಾಗಿ ಹೆಜ್ಜೆ ಇಡುವ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಾರತ್ ಜೋಡೋ ಯಾತ್ರೆ ಯಶಸ್ವಿಗೊಳಿಸಿ ಎಂದು ಮನವಿ ಮಾಡಿದರು.

ರಾಹುಲ್ ಗಾಂಧಿ ಅವರು, ಖಾದಿ ಗ್ರಾಮೋದ್ಯೋಗಕ್ಕೆ ಭೇಟಿ ನೀಡಿದ ವೇಳೆ ಇಲ್ಲಿನ ಕಾರ್ಮಿಕರ ಜೊತೆ ಕೆಲಕಾಲ ಸಂಭಾಷಣೆ ನಡೆಸಲಿದ್ದಾರೆ ಎಂದರು. ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಸಂಸದ ಡಿ.ಕೆ.ಸುರೇಶ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹೆಚ್.ಸಿ.ಬಸವರಾಜ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಜಿಪಂ ಮಾಜಿ ಅಧ್ಯಕ್ಷೆ ಲತಾಸಿದ್ಧಶೆಟ್ಟಿ, ತಾಪಂ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್ ರಾಜ್, ಉಪ್ಪಿನಹಳ್ಳಿ ಶಿವಣ್ಣ ಹಾಗೂ ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ಶಾಸಕ ಹರ್ಷವರ್ಧನ್ ಶ್ರಮದಿಂದ ಗ್ರಾಮಗಳು ಅಭಿವೃದ್ಧಿ



ಮಲ್ಲುಂಡಿ, ಸೆ.15– ಶಾಸಕ ಬಿ.ಹರ್ಷವರ್ಧನ್ ಅವರ ಪರಿಶ್ರಮದಿಂದ ಕ್ಷೇತ್ರದ ಗ್ರಾಮಗಳು ಅಭಿವೃದ್ಧಿ ಕಾಣುತ್ತಿವೆ ಎಂದು ಬಿಜೆಪಿ ತಾಲೂಕು ಕಾರ್ಯದರ್ಶಿ ಪುಟ್ಟಸ್ವಾಮಿ ತಿಳಿಸಿದ್ದಾರೆ. ನಂಜನಗೂಡು ತಾಲೂಕಿನ ವಳಗೆರೆ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ನಿರ್ಮಾಣದ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಶಾಸಕ ಬಿ.ಹರ್ಷವರ್ಧನ್ ಅವರು ಕ್ಷೇತ್ರದ ಅಭಿವೃದ್ಧಿಗಾಗಿ ಪಕ್ಷಭೇದ ಮರೆತು ಕೆಲಸ ಮಾಡು ತ್ತಿದ್ದಾರೆ. ಇಂದು ಅವರು ಕ್ಷೇತ್ರದ ಪ್ರತಿ ಗ್ರಾಮದ ಎಲ್ಲಾ ಜನಾಂಗದ ಬೀದಿಗಳಿಗೆ ಸಮರ್ಪಕವಾಗಿ ಅನುದಾನ ನೀಡಿ ಕ್ಷೇತ್ರದ ಪ್ರತಿ ಗ್ರಾಮಗಳ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದಾರೆ. ಇಂತಹ ಶಾಸಕರನ್ನು ಕ್ಷೇತ್ರದ ಜನತೆ ಪಡೆದಿದ್ದು, ಪುಣ್ಯವಂತರಾಗಿದ್ದೇವೆ ಎಂದು ನುಡಿದರು.

ವಿದ್ಯುತ್ ಸ್ಪರ್ಶ: ವ್ಯಕ್ತಿ ಸಾವು

ತಿ.ನರಸೀಪುರ, ಸೆ.15– ವಿದ್ಯುತ್ ಸ್ಪರ್ಶದಿಂದ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ಹಿರಿಯೂರು ಗ್ರಾಮದಲ್ಲಿ ನಡೆದಿದೆ.



ತಾಲೂಕಿನ ತುಂಬಲ ಗ್ರಾಮದ ನಿವಾಸಿ ನಾಗರಾಜು(46) ಸಾವನ್ನಪ್ಪಿದವರು. ಈತ ಮಾದಾಪುರದ ಪಂಕಜ ಅವರ ಗದ್ದೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ವೇಳೆ ಜಮೀನಿಗೆ ಹಾಕಲಾಗಿದ್ದ ತಂತಿ ಬೇಲಿ ಮೇಲೆ ಹಾದು ಹೋಗಿದ್ದ ವಿದ್ಯುತ್ ತಂತಿ ಬೇಲಿಗೆ ಆಕಸ್ಮಿಕವಾಗಿ ತಗುಲಿದೆ. ಈ ವೇಳೆ ಬೇಲಿ ತಂತಿ ಸ್ಪರ್ಶಿಸಿದ ನಾಗರಾಜು ಅವರಿಗೆ ವಿದ್ಯುತ್ ಪ್ರವಹಿಸಿದ್ದು, ಹತ್ತಿರದಲ್ಲೇ ಇದ್ದ ರಾಮಣ್ಣ ಎಂಬುವರು ದೊಣ್ಣೆಯಿಂದ ಬಿಡಿಸಲು ಯತ್ನಿಸಿದರಾದರೂ ಆತ ಸಾವನ್ನಪ್ಪಿದ್ದಾನೆ. ಈ ಸಂಬಂಧ ರಾಮಣ್ಣ ಎಂಬುವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಪಟ್ಟಣ ಠಾಣೆ ಎಸ್‌ಐ ತಿರುಮಲ್ಲೇಶ್ ತನಿಖೆ ಕೈಗೊಂಡಿದ್ದಾರೆ.

ಚಿರತೆ ದಾಳಿಗೆ ಹಸು ಬಲಿ

ಹನಗೋಡು, ಸೆ.15– ಚಿರತೆ ದಾಳಿಗೆ ಹಸು ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಕೆ.ಜಿ.ಹೆಬ್ಬನಕುಪ್ಪೆ ಗ್ರಾಮದಲ್ಲಿ ನಡೆದಿದೆ.

ನಾಗರಹೊಳೆ ರಾಷ್ಟ್ರೀಯ ಉದ್ಯಾನದಂಚಿನ ಕೆ.ಜಿ.ಹೆಬ್ಬನಕುಪ್ಪೆ ಗ್ರಾಮದ ಜಿ.ಡಿ.ಮೋಹನ್ ಅವರಿಗೆ ಸೇರಿದ ಹಸು ಚಿರತೆ ದಾಳಿಗೆ ಬಲಿಯಾಗಿರುವುದು. ಮೋಹನ್ ಅವರು ಬುಧವಾರ ಮಧ್ಯಾಹ್ನ ತಮ್ಮ ತೋಟದಲ್ಲಿ ಹಸು ಮೇಯಲು ಕಟ್ಟಿದ್ದರು. ಈ ವೇಳೆ ಏಕಾಏಕಿ ದಾಳಿ ಮಾಡಿರುವ ಚಿರತೆ ಅರೆಬರೆ ತಿಂದು ಹಾಕಿದ್ದು, ಸಂಜೆ ಹಸು ಕರೆತರಲು ತೋಟಕ್ಕೆ ಹೋದ ಮೋಹನ್ ಅವರನ್ನು ಕಂಡು ಚಿರತೆ ಅರಣ್ಯದೊಳಗೆ ಓಡಿಹೋಗಿದೆ. ಘಟನೆ ಸ್ಥಳಕ್ಕೆ ಗುರುವಾರ ಕಚುವಿನಹಳ್ಳಿ ಶ್ರೇಣಿಯ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ನೀಡುವ ಭರವಸೆ ನೀಡಿದ್ದಾರೆ.

ಹುಂಡಿ ಕಳ್ಳನ ಹಿಡಿದು ಪೊಲೀಸರಿಗೆ ಒಪ್ಪಿಸಿದ ಗ್ರಾಮಸ್ಥರು

ತಿ.ನರಸೀಪುರ, ಸೆ.15– ದೇವಸ್ಥಾನದ ಹುಂಡಿ ಕಳ್ಳತನ ಮಾಡಿ ಪರಾರಿಯಾಗುತ್ತಿದ್ದ ಕಳ್ಳನೋರ್ವನನ್ನು ಗ್ರಾಮಸ್ಥರೇ ಹಿಡಿದು ಪೊಲೀಸರಿಗೆ ಒಪ್ಪಿಸಿರುವ ಘಟನೆ ಸಮೀಪದ ಹೆಳವರಹುಂಡಿ ಗ್ರಾಮ ವ್ಯಾಪ್ತಿಯ ಕಾಡು ಬಸವೇಶ್ವರ ಸ್ವಾಮಿ ದೇವಸ್ಥಾನದ ಬಳಿ ನಡೆದಿದೆ.

ನಂಜನಗೂಡು ತಾಲೂಕಿನ ಕುರುಹಟ್ಟಿ ಗ್ರಾಮದ ಮನೋಜ್ ಕುಮಾರ್ ಎಂಬಾತ ದೇವಸ್ಥಾನದ ಹುಂಡಿ ಕಳವು ಮಾಡಿ ಗ್ರಾಮಸ್ಥರ ಕೈಗೆ ಸಿಕ್ಕಿ ಬಿದ್ದವನು. ಈತ ಹೆಳವರಹುಂಡಿ ಗ್ರಾಮದ ಹೊರವಲಯದಲ್ಲಿರುವ ಕಾಡು ಬಸವೇಶ್ವರ ಸ್ವಾಮಿ ದೇವಸ್ಥಾನದ ಹುಂಡಿ ಒಡೆದು ಹಣ ಕದ್ದೊಯ್ಯುತ್ತಿದ್ದ ವೇಳೆ ಈಶ್ವರಗೌಡನಹಳ್ಳಿ ಗ್ರಾಮಸ್ಥರಾದ ಶಿವಣ್ಣ, ಸ್ವಾಮಿ, ರವಿ ಎಂಬುವರು ಆತನನ್ನು ಹಿಂಬಾಲಿಸಿ ಹಿಡಿದು ದೇವಸ್ಥಾನದ ಅರ್ಚಕ ಸಿದ್ದರಾಜಪ್ಪರಿಗೆ ಸುದ್ದಿ ಮುಟ್ಟಿಸಲಾಗಿ ಅರ್ಚಕ ಪಟ್ಟಣ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಎಸ್‌ಐ ಭಾನುಪ್ರಕಾಶ್ ತನಿಖೆ ಕೈಗೊಂಡಿದ್ದಾರೆ.

ಎ.ಎಸ್.ರಾಮಸ್ವಾಮಿ ನಿಧನ

ತಿ.ನರಸೀಪುರ, ಸೆ.15– ತಾಲೂಕಿನ ರಂಗಸಮುದ್ರ ಗ್ರಾಮದ ಮುಖಂಡ ಎ.ಎಸ್.



ರಾಮಸ್ವಾಮಿ (75) ಗುರುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಮತ್ತು ಓರ್ವ ಪುತ್ರನನ್ನು ಅಗಲಿದ್ದಾರೆ. ಮೃತರು ಕಾಶಿಯಾತ್ರೆಗೆ ತೆರಳಿ ವಾಪಸ್ಸಾಗುತ್ತಿದ್ದ ವೇಳೆ ರೈಲಿನಲ್ಲಿ ಮೃತರಾಗಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸೂಕ್ತ

ಪುರಸಭಾಧ್ಯಕ್ಷ ಎಸ್.ಮದನ್‌ರಾಜ್

ತಿ.ನರಸೀಪುರ, ಸೆ.15– ಪ್ರತಿಭಾ ಕಾರಂಜಿ ಮೂಲಕ ನಿಮ್ಮ ಪ್ರತಿಭೆ ಹೊರತಂದು ಅದನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಲು ವಿದ್ಯಾರ್ಥಿಗಳು ಶ್ರಮಿಸಬೇಕು ಎಂದು ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪಟ್ಟಣದ ಪಿಆರ್‌ಎಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಕಲಾ ಪದ್ಮ ಸಭಾಂಗಣದಲ್ಲಿ ನಡೆದ ಕಸಬಾ ಹೋಬಳಿ ಮಟ್ಟದ ಪ್ರತಿಭಾ ಕಾರಂಜಿ/ ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸುಪ್ತ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸೂಕ್ತ ವೇದಿಕೆಯಾಗಿದ್ದು, ವಿದ್ಯಾರ್ಥಿಗಳು ಉತ್ಸಾಹಭರಿತರಾಗಿ ಇಂತಹ ವೇದಿಕೆಗಳನ್ನು ಬಳಸಿಕೊಂಡು ಬೆಳೆಯುವಂತೆ ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ ಮಾತ



ನಾಡಿ, ನಿಮ್ಮೊಳಗಿರುವ ಪ್ರತಿಭೆ ಹೊರತರಲು ಇಲಾಖೆ ಈ ಕಾರ್ಯಕ್ರಮವನ್ನು ಪ್ರಸಕ್ತ ಸಾಲಿನಿಂದ ಪುನರಾರಂಭಿಸಿದೆ. ನಿಮ್ಮ ಪ್ರತಿಭೆ ಹೊರ ಬರಬೇಕಾದರೆ ನಿಮ್ಮಲ್ಲಿರುವ ಕೀಳರಿಮೆ ಹಾಗೂ ಹಿಂಜರಿಕೆ ದೂರವಾಗಬೇಕು. ಶಿಕ್ಷಕರು ಮಕ್ಕಳ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಬೇಕು ಎಂದರು.

ಈ ವೇಳೆ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಡಿ. ಮಾದಪ್ಪ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಪ್ರಸಾದ್, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಪುಟ್ಟರಾಜು, ಪಿಆರ್‌ಎಂ ಕಾಲೇಜಿನ ಪ್ರಾಂಶುಪಾಲ ಡಾ.ವೀರಭದ್ರಸ್ವಾಮಿ, ಎಂ. ಮಹದೇವ್, ನೋಡಲ್ ಅಧಿಕಾರಿ ವಿಶ್ವನಾಥರೆಡ್ಡಿ, ಶಿಕ್ಷಣ ಸಂಯೋಜಕ ಬಿ.ಮಹದೇವಸ್ವಾಮಿ, ವಿದ್ಯೋದಯ ಶಿಕ್ಷಣ ಸಂಸ್ಥೆಗಳ ಮುಖ್ಯ ಶಿಕ್ಷಕರಾದ ಪುಟ್ಟಬುದ್ಧಿ, ನಾಗೇಂದ್ರ ಪ್ರಭು, ಸಿಆರ್‌ಪಿ ನವೀನ್, ಪಿಆರ್‌ಎಂ ಪ್ರೌಢಶಾಲೆಯ ಆರ್.ರಮೇಶ್, ವೆಂಕಟಕೃಷ್ಣ ಹಾಜರಿದ್ದರು.

ಹಾಲು ಉತ್ಪಾದಕರಿಗೆ ಹಸು ಖರೀದಿಸಲು 1.20 ಲಕ್ಷ ರೂ. ಸಾಲ

ಎಸ್‌ಬಿಐ ಜೊತೆ ಮಾತುಕತೆ: ಡಾ.ಪ್ರವೀಣ್ ಪತ್ತರ್



ಭೇರ್ಯ, ಸೆ,15– ಭೇರ್ಯ ಹಾಲು ಉತ್ಪಾದಕರ ಸಹಕಾರ ಸಂಘ ಗುಣಮಟ್ಟದ ಹಾಲನ್ನು ಮೈಸೂರು ಜಿಲ್ಲಾ ಹಾಲು ಒಕ್ಕೂಟಕ್ಕೆ ಸರಬರಾಜು ಮಾಡಿದೆ ಎಂದು ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಉಪ ವ್ಯವಸ್ಥಾಪಕ ಡಾ.ಪ್ರವೀಣ್ ಪತ್ತರ್ ತಿಳಿಸಿದ್ದಾರೆ.

ಇಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘದ ಹಾಲು ಪಿತಾಮಹ ಡಾ.ವರ್ಗೀಸ್ ಕುರಿಯನ್ ಸಭಾಂಗಣದಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಹಾಲು ಉತ್ಪಾದಕರು ಗುಣಮಟ್ಟದ ಹಾಲನ್ನು ಸಂಘಕ್ಕೆ ಸರಬರಾಜು ಮಾಡಿ ಎಂದು ಮನವಿ ಮಾಡಿದರು.

ಹಾಲು ಉತ್ಪಾದಕರಿಗೆ ಕಡಿಮೆ ಬಡ್ಡಿಯಲ್ಲಿ ಎರಡು ಹಸುಗಳನ್ನು ಖರೀದಿಸಲು 1.20 ಲಕ್ಷ ಸಾಲ ನೀಡಲು ಭಾರತೀಯ ಸ್ಟೇಟ್ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕರ ಜೊತೆಯಲ್ಲಿ ಮಾತುಕತೆ ನಡೆಯುತ್ತಿದೆ ಎಂದು ತಿಳಿಸಿದರು.

ಸಂಘದ ಮುಖ್ಯ ಕಾರ್ಯನಿರ್ವಾಹಕ ಬಿ.ಪಿ. ಲೋಕೇಶ್ ಮಾತನಾಡಿ, ಸಂಘದಲ್ಲಿ 1.97 ಕೋಟಿ ವಹಿವಾಟು ನಡೆಸಿದ್ದು ವ್ಯಾಪಾರ ಲಾಭ 18.31 ಲಕ್ಷ, ನಿವ್ವಳ ಲಾಭ 4.43 ಲಕ್ಷ ಬಂದಿದ್ದು ಇದರಲ್ಲಿ 250 ಉತ್ಪಾದಕರಿಗೆ 2.81 ಲಕ್ಷ ರೂ. ಬೋನಸ್ ನೀಡಲಾಗುವುದು ಎಂದರು.

ಗ್ರಾಮದೇವತೆ ಕರಿಯಮ್ಮ ದೇವಸ್ಥಾನ ಅಭಿವೃದ್ಧಿಗಾಗಿ 15 ಸಾವಿರ ನೀಡಲಾಗಿದೆ, 25 ಲಕ್ಷದಷ್ಟು ಉತ್ಪಾದಕರಿಗೆ ಪಶು ಆಹಾರ ಖರೀದಿಸಿ ವಿತರಿಸಲಾಗಿದ್ದು, ಸ್ಥಳೀಯವಾಗಿ 4.30 ಲಕ್ಷದಷ್ಟು ಹಾಲು ಮಾರಾಟ ಮಾಡಲಾಗಿದೆ ಎಂದು ತಿಳಿಸಿದರು

ಇದೇ ಸಂದರ್ಭದಲ್ಲಿ ಸಂಘಕ್ಕೆ ಅತಿ ಹೆಚ್ಚು ಹಾಲು ಸರಬರಾಜು ಮಾಡಿದ ಬಿ.ಆರ್.ಕುಮಾರ, ಬಿ.ಟಿ. ನಾಗೇಂದ್ರ, ರಾಮಕೃಷ್ಣೇಗೌಡ ಅವರನ್ನು ಅಭಿನಂದಿಸಿ ಬಹುಮಾನ ವಿತರಣೆಯನ್ನು ಸಂಘದ ಅಧ್ಯಕ್ಷ ಬೋರನಾಯಕ ಮಾಡಿದರು.

ಸಂಘದ ಉಪಾಧ್ಯಕ್ಷ ನಾಗೇಂದ್ರ, ನಿರ್ದೇಶಕರಾದ ರಾಮನಾಯಕ, ಬಿ.ಎಂ.ಜಯಪ್ರಕಾಶ್, ಬಿ.ಎಸ್. ಮಹದೇವಪ್ಪ, ಹರೀಶ್, ರಾಜಯ್ಯ, ಬಿ.ಟಿ.ನಾಗೇಂದ್ರ, ಕಮಲಮ್ಮ, ಸುಕನ್ಯ, ಮಾರ್ಗ ವಿಸ್ತರಣಾಧಿಕಾರಿ ಗಳಾದ ವರಲಕ್ಷ್ಮೀ, ನೇಮಣ್ಣ ಮಾಕಾನಿ, ತಾಲೂಕು ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಂಘದ ಅಧ್ಯಕ್ಷ ಜಿ.ಕೆ.ಮಹದೇವ್, ಉಪಾಧ್ಯಕ್ಷ ಬೆಟ್ಟಹಳ್ಳಿ ದಿನೇಶ್, ಸಂಘದ ಸಹಾಯಕರಾದ ಪ್ರಸನ್ನ, ಪ್ರಜ್ವಲ್ ಹಾಗೂ ಸದಸ್ಯರು ಭಾಗವಹಿಸಿದ್ದರು.

ಹಿಂದಿ ದಿವಸ್ ಖಂಡಿಸಿ ಜೆಡಿಎಸ್ ಪ್ರತಿಭಟನೆ

ಹೆಚ್.ಡಿ.ಕೋಟೆ, ಸೆ.15– ಕೇಂದ್ರ ಸರ್ಕಾರದ ಹಿಂದಿ ದಿವಸ್ ಆಚರಣೆ ಖಂಡಿಸಿ ಪಟ್ಟಣದಲ್ಲಿ ಗುರುವಾರ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಆಡಳಿತ ಭವನದ ಮುಂಭಾಗ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ನಿಲುವನ್ನು ಖಂಡಿಸಿದರು.

ಮಾಜಿ ಶಾಸಕ ಚಿಕ್ಕಣ್ಣ ಮಾತನಾಡಿ, ಭಾರತ ದೇಶ ಒಕ್ಕೂಟ ಸರ್ಕಾರವಾಗಿದೆ. ಆದರೆ ಪ್ರಾದೇಶಿಕ ಭಾಷೆಗಳಿಗೆ ಒತ್ತುಕೊಟ್ಟು ಅವುಗಳನ್ನು ಬೆಳೆಸುವ ಜವಾಬ್ದಾರಿ ಕೇಂದ್ರ ಸರ್ಕಾರದ ಕರ್ತವ್ಯ. ಆದರೆ ಕೇಂದ್ರ ಸರ್ಕಾರ ಸೆ.14 ಅನ್ನು ಹಿಂದಿ ದಿವಸವೆಂದು ಆಚರಣೆ ಮಾಡಲು ಹೊರಟಿರುವುದು ಸರಿಯಲ್ಲ ಎಂದು ಆರೋಪಿಸಿದರು.

ಕರ್ನಾಟಕ ರಾಜ್ಯ ಕನ್ನಡ, ಕೊಂಕಣಿ,



ತುಳು, ಹೀಗೆ ಹಲವು ಭಾಷೆಗಳನ್ನು ಒಳಗೊಂಡ ರಾಜ್ಯವಾಗಿದ್ದು, ಇಂತಹ ಭಾಷೆಗಳನ್ನು ಬೆಳೆಸುವ ಜೊತೆಗೆ ಸಂವಿಧಾನದ ಅಭಿವ್ಯಕ್ತಿ ಸ್ವಾತಂತ್ರ್ಯದ ಪಾವಿತ್ರ್ಯತೆ ಕಾಪಾಡಬೇಕೆಂದು ಒತ್ತಾಯಿಸಿದರು.

ನಂತರ ತಹಸೀಲ್ದಾರ್ ರತ್ನಾಂಬಿಕಾ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಚಾ.ನಂಜುಂಡಮೂರ್ತಿ, ಪಟೇಲ್ ರಾಜೇಗೌಡ, ರಾಜೇಂದ್ರ ಗೋಪಾಲಸ್ವಾಮಿ, ಶಾಂತ, ಚಾಕಹಳ್ಳಿ ಕೃಷ್ಣ, ಶಫೀಉಲ್ಲಾ, ನಾಗನಾಯಕ, ನರಸಿಂಹೇಗೌಡ, ರಾಜು, ಶಿವಕುಮಾರ್, ಹೋ.ಕೆ.ಮಹೇಂದ್ರ, ದೊರೆಸ್ವಾಮಿ, ತೇಜು, ರಾಜೇಗೌಡ, ರಾಜು, ನಿಂಗನಾಯಕ, ರವಿ, ಗುರುಮಲ್ಲು, ಗಾಯಿತ್ರಿ, ರೇಣುಕಾ, ಸವಿತಾ ಇದ್ದರು.

152 ಕೋಟಿ ರೂ. ವೆಚ್ಚದಲ್ಲಿ ಫೀಡ್ಸ್ ಕಾರ್ಖಾನೆ ಸ್ಥಾಪನೆ

ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ

ಕಂಪಲಾಪುರ, ಸೆ.15– ಅಂದಾಜು 152 ಕೋಟಿ ರೂ. ವೆಚ್ಚದಲ್ಲಿ ಪಿರಿಯಾಪಟ್ಟಣದಲ್ಲಿ ಫೀಡ್ಸ್ ಕಾರ್ಖಾನೆ ಸ್ಥಾಪಿಸುವ ಗುರಿ ಹೊಂದಲಾಗಿದೆ ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ತಿಳಿಸಿದರು.

ಗುರುವಾರ ಕಂಪಲಾಪುರ ಕೊಪ್ಪಲು ಹಾಲಿನ ಡೇರಿ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ನನ್ನ ಅಧಿಕಾರಾವಧಿಯಲ್ಲಿ ಪಶು ಆಹಾರ ತಯಾರಿಕಾ ಕಾರ್ಖಾನೆ ತೆರೆಯುವ ಮೂಲಕ ತಾಲೂಕಿನ ಜನರ ಋಣ ತೀರಿಸುತ್ತೇನೆ. ಅದಕ್ಕಾಗಿ ಪಂಚವಳ್ಳಿ ಬಳಿ 12.5 ಎಕರೆ ಭೂಮಿ ಖರೀದಿಸಿರುವುದಾಗಿ ತಿಳಿಸಿದರು. ಜಿಲ್ಲೆಯಲ್ಲೇ ಅತಿ ಹೆಚ್ಚು ಜೋಳ ಬೆಳೆಯುವ ತಾಲೂಕು ಪಿರಿಯಾಪಟ್ಟಣವಾಗಿದ್ದು ಇಲ್ಲಿನ ರೈತರಿಗೆ ತಾವು ಬೆಳೆದ ಜೋಳಕ್ಕೆ ಹೆಚ್ಚು ಬೆಲೆ ಜೊತೆಗೆ ಸ್ಥಳೀಯವಾಗಿ ನೂರಾರು ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯಲಿದೆ ಎಂದರು.

ಉತ್ಪಾದಕರು ಗುಣಮಟ್ಟದ ಹಾಲು



ಪೂರೈಸಿದರೆ ನಿಮಗೂ ಲಾಭ ಒಕ್ಕೂಟಕ್ಕೂ ಲಾಭ. ನಾನು ಅಧ್ಯಕ್ಷನಾದಾಗ ಪ್ರತಿ ಲೀಟರ್ ಹಾಲಿಗೆ 25 ರೂ. ಇತ್ತು ನಂತರ 2 ರೂ. ಹೆಚ್ಚಿಸಲಾಯಿತು. ಒಕ್ಕೂಟಕ್ಕೆ ಲಾಭಾಂಶ ಹೆಚ್ಚಿದ ಕಾರಣ ಮತ್ತೆ 2 ರೂ. ಹೆಚ್ಚಿಸಿ ಲೀಟರ್‌ಗೆ 29 ರೂ. ನೀಡಲಾಗುತ್ತಿದೆ. ದಿನೇ ದಿನೇ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗುತ್ತಿರುವ ಕಾರಣ ಹಾಲಿನ ದರವನ್ನ 3 ರೂ. ಹೆಚ್ಚಿಸುವ ಪ್ರಸ್ತಾಪ ಇದೆ ಎಂದರು.

ಈ ಬಾರಿ ಹೆಚ್ಚುಮಳೆಯಿಂದಾಗಿ ಮುಂಗಾರು ಹಾಗೂ ಹಿಂಗಾರು ಎರಡೂ ಬೆಳೆಗಳು ಕೈ ಸೇರದೆ ರೈತ ತೀವ್ರ ಸಂಕಷ್ಟದಲ್ಲಿದ್ದಾನೆ ಆದರೂ ರೈತರು ಎದೆಗುಂದಬಾರದು ಎಂದರು.

ಒಕ್ಕೂಟ ಈಗ 9 ಕೋಟಿ ಲಾಭದಲ್ಲಿದ್ದು, ರಾಜ್ಯದಲ್ಲೇ ಮೈಸೂರು ಹಾಲು ಒಕ್ಕೂಟವನ್ನು ನಂ.1 ಸ್ಥಾನಕ್ಕೆ ತರುವ ಗುರಿ ಇದೆ. ತಾಲೂಕಿನಲ್ಲಿ ಈ ಹಿಂದೆ 87 ಹಾಲಿನ ಡೇರಿಗಳಿದ್ದವು. ಈಗ 107 ಸಂಘಗಳಿವೆ. ಮುಂದೆ ಇನ್ನೂ 13 ಸಂಘಗಳನ್ನು ತೆರೆಯಲಾಗುವುದು. ತಾಲೂಕಿನಲ್ಲಿ ಪ್ರತಿನಿತ್ಯ 55 ಸಾವಿರ ಲೀ ಹಾಲು ಉತ್ಪಾದನೆಯಾಗುತ್ತಿತ್ತು. ಈಗ 1.75 ಲಕ್ಷ ಲೀಟರ್ ಉತ್ಪಾದನೆಯಾಗುತ್ತಿದೆ. ಮುಂದೆ 2 ಲಕ್ಷ ಲೀಟರ್ ಉತ್ಪಾದನೆ ಗುರಿ ಹೊಂದಲಾಗಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಮೇಘನಾ ಪ್ರಾರ್ಥಿಸಿದರು. ಸಿಇಓ ಲೋಕೇಶ್ ವಾರ್ಷಿಕ ವರದಿ ಮಂಡಿಸಿ ಸಂಘಕ್ಕೆ ಈ ಬಾರಿ 2.93 ಲಕ್ಷ ರೂ. ನಿವ್ವಳ ಲಾಭ ಬಂದಿದೆ, 1.37 ಲಕ್ಷ ಬೋನಸ್ ಅನ್ನು ಉತ್ಪಾದಕರಿಗೆ ಹಂಚಲಾಗುವುದು ಎಂದರು.

ಈ ವೇಳೆ ಮೈಮುಲ್ ಉಪ ವ್ಯವಸ್ಥಾಪಕ ಬಿ.ಎಸ್.ನಿಶ್ಚಿತ್, ಅಧ್ಯಕ್ಷ ಕೆ.ಎಂ.ಲಕ್ಷ್ಮಣ್, ಕೃಷ್ಣೇಗೌಡ, ಉಪಾಧ್ಯಕ್ಷೆ ಪುಟ್ಟಮ್ಮ, ಮಾಜಿ ಅಧ್ಯಕ್ಷ ಎಂ.ರಮೇಶ್, ನಿರ್ದೇಶಕರಾದ ಕೆ.ಗೋಪಾಲ್, ಸದಾನಂದ, ಸಿದ್ದಪ್ಪ, ಶಿವಕುಮಾರ್, ಚನ್ನೇಗೌಡ ,ದಿನೇಶ್, ಗೀತಾ, ಶೀಲಾ, ಸಿಇಓ ಕಿಶೋರ್, ಹಾಲು ಪರೀಕ್ಷಕ ಮಂಜುನಾಥ್, ರೇವಣ್ಣ ಮತ್ತಿತರರಿದ್ದರು.

ಪ್ರತಿ ಗ್ರಾಪಂಗೊಂದು ನಂದಿನಿ ಪಾರ್ಲರ್

ಮುಂದಿನ ದಿನಗಳಲ್ಲಿ ಮೈಮುಲ್ ವತಿಯಿಂದ ಪ್ರತಿ ಗ್ರಾಪಂಗೊಂದು ನಂದಿನಿ ಪಾರ್ಲರ್ ತೆರೆಯುವ ಉದ್ದೇಶ ಇದೆ. ಹಾಲು ಉತ್ಪಾದಕರ ಮಕ್ಕಳಿಗೋಸ್ಕರ ಜಿಲ್ಲಾ ಕೇಂದ್ರದಲ್ಲಿ 11 ಕೋಟಿ ರೂ. ವೆಚ್ಚದಲ್ಲಿ 250 ಮಕ್ಕಳಿಗೆ ಅನುಕೂಲವಾಗುವಂತೆ ಅತ್ಯಾಧುನಿಕ ಸೌಲಭ್ಯದ ಹಾಸ್ಟೆಲ್ ನಿರ್ಮಾಣ ಮಾಡಲಾಗಿದೆ ಎಂದು ಪಿ.ಎಂ. ಪ್ರಸನ್ನ ತಿಳಿಸಿದರು.

ಮೈಸೂರು ರೇಸುಗಳು–2022

7ನೇ ದಿನ, ಶುಕ್ರವಾರ 16–9–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಸನ್ ಆಫ್ ದಿ ಲೈಟ್ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). ಮ.2.00ಕ್ಕೆ
1. ರೂಮರ್ ಲೇಡಿ 2. ಸೋ ಫಾರ್ 3. ಸ್ಪಿರಿಚ್ಯುಯಲ್ ಕ್ವೀನ್

II. ಪೆನ್ನಂಬೂರ್ ಪ್ಲೇಟ್ ಡಿ2–1200 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ಫೆಲಿಸಿಟಾ 2. ಕಂಟ್ರೆಸ್ ಡಿಲೈಟ್ 3. ಸ್ಟಾರ್‌ಪೆಕ್

III. ಒರಿಜಿನಲ್ ವೇಲ್ ರೈಸಿಂಗ್ ಟ್ರೋಫಿ–1600 ಮೀ. ರೇಟೆಡ್ 40 ರಿಂದ 65. ಮ.3.00ಕ್ಕೆ
1 ರಾವಿಶಿಂಗ್ ಫಾರಮ್ 2 ಥಿಯಾಮಾರಿಯ 3 ಆಕ್‌ಹೂಕ್

IV. M.W.ಚಿನ್ನಪ್ಪ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಅನ್‌ಯೀಲ್ಡಿಂಗ್ 2. ಪಲೂಚಿ 3. ನೈಸ್ ಕ್ಯಾನ್‌ಬರೀಸ್

V. ಮೈಸೂರ್ 1000 ಗಿನ್ನಿಸ್ 2022– 1600 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಮಿರ್ರಾ 2. ಫಿಲಾಸಫಿ 3. ಪ್ರೈಮ್ ಅಬ್ಬೆಸ್

VI. ಗೂಲ್ ಅಂಡ್ ಸೋಲಿ ಪೂನಾವಾಲ ಮೆಮೋರಿಯಲ್ ಟ್ರೋಫಿ–1600 ಮೀ. ರೇಟೆಡ್ 60 ರಿಂದ 85. ಸಂ.4.30ಕ್ಕೆ
1. ಡಿವೈನ್ ರೇ 2. ಸಕ್ಸಸ್ 3. ಸ್ಕ್ವೇರ್ ದಿ ಸರ್ಕಲ್

VII. ಪೆನ್ನಂಬೂರ್ ಪ್ಲೇಟ್ ಡಿ1–1200 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. ಸರ್‌ಕಾಲೂಕ್ಯೂಲಸ್ 2. ಓರಿಯಂಟಲ್ ಲಿಲ್ಲಿ 3. ಕಟಾಲಿನಾ

ದಿನದ ಅತ್ಯುತ್ತಮ	ಮಿರ್ರಾ
ಡಬ್ಬಲ್	ಅನ್‌ಯೀಲ್ಡಿಂಗ್, ಡಿವೈನ್ ರೇ
ಜಾಕ್‌ಪಾಟ್	3, 4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	6 ಮತ್ತು 7

ಟಿಪ್‌ಸ್ಟರ್ ಪಿಜಿಸಿ



ಒಂದನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು

ತ್ರಿಶಿಕಾ.ಎ.ವಿ

ಶುಭಕೋರುವವರು: ತಾಯಿ : ಎಂ.ಆರ್.ಬೀನಾ, ತಂದೆ: ವಿಕಾಸ ಚೋಪ್ರಾ, ಅಜ್ಜ: ಎಲ್.ವಿ.ರಾಜು, ಅಜ್ಜಿ: ಟಿ.ಯೋಗೇಶ್ವರಿ ಮಾಮಂದಿರು ಮಂಜುನಾಥ, ವಿನು, ಕಿರಣ(ಕೆಂಚ) ಹಾಗೂ ಬಂಧು ಮಿತ್ರರು

ಚಾಮರಾಜನಗರ ತಾಲ್ಲೂಕು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗೃಹ ನಿರ್ಮಾಣ ಸಹಕಾರ ಸಂಘ ನಿ.,

ಮಹದೇಶ್ವರ ನಿಲಯ, ಕೆ.ಎನ್.ಪುರ, ಹೊಸ ಬಡಾವಣೆ, 3ನೇ ಕ್ರಾಸ್, ಬುದ್ಧನಗರ, ಚಾಮರಾಜನಗರ – 571313

ಕ್ರಮಾಂಕ:ಚಾತಾಪಜಾ/ಪಂಗೃಸಸಂ:ವಾಸಾಸ:2022–23 ದಿನಾಂಕ: 15–09–2022

ಪ್ರಕಟಣೆ

ಮೇಲ್ಕಂಡ ಸಂಘದ 2021–22 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 22–09–2022 ರಂದು ಗುರುವಾರ ಬೆಳಿಗ್ಗೆ 11–00 ಘಂಟೆಗೆ ಭಾರತ ರತ್ನ ಡಾ: ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಚಾಮರಾಜನಗರ ಇಲ್ಲಿ ನಡೆಸಲಾಗುತ್ತದೆ. ಸದರಿ ಸಭೆಗೆ ಸದಸ್ಯರು ಹಾಜರಾಗಲು ತಿಳಿಸಲಾಗಿದೆ. ಸಭೆಯ ಆಹ್ವಾನ ಪತ್ರಿಕೆಯು ತಲುಪದ ಸದಸ್ಯರು ಇದನ್ನೇ ಆಹ್ವಾನ ಪತ್ರಿಕೆಯೆಂದು ಪರಿಗಣಿಸಲು ಕೋರಿದೆ.

ಸಹಿ/– ಎಂ.ರಂಗಸ್ವಾಮಿ, ಗೌರವ ಕಾರ್ಯದರ್ಶಿ
ಚಾಮರಾಜನಗರ ತಾಲ್ಲೂಕು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗೃಹ ನಿರ್ಮಾಣ ಸಹಕಾರ ಸಂಘ ನಿ.,

1ನೇ ವರ್ಷದ ಸವಿನೆನಪು



ರಾಜಶೇಖರ ಮೂರ್ತಿ.ಕೆ.ಎ


ಕೇಂದ್ರಿಯ ರೇಷ್ಮೆ ಇಲಾಖೆ, ಮೈಸೂರು

ಜನನ: 20-09-1963 ಮರಣ : 16-09-2021

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾದರು ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ದುಃಖತಪ್ತರು: ಪತ್ನಿ: ರುಕ್ಮಿಣಿ, ಮಕ್ಕಳು: ತೇಜಸ್ವಿನಿ.ಎಂ.ಆರ್. ದರ್ಶಿನಿ.ಎಂ.ಆರ್ ಹಾಗೂ ಕುಟುಂಬವರ್ಗದವರು

ವೈಕುಂಠ ಸಮಾರಾಧನಾ ಆಹ್ವಾನ ಪತ್ರಿಕೆ



ಸಮಾಜಭೂಷಣ್

ಶ್ರೀ ಟಿ.ಎಸ್.ನಾರಾಯಣರಾವ್ ತೇಲ್ಕರ್

ಇವರು ದಿ.07.09.2022 ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನಾ ಕಾರ್ಯವನ್ನು ದಿ.17.09.2022 ಶನಿವಾರ ಮಧ್ಯಾಹ್ನ 01.00 ಗಂಟೆಗೆ ಶ್ರೀ ಪಾಂಡುರಂಗ ವಿಠ್ಠಲ ಸ್ವಾಮಿ ದೇವಸ್ಥಾನ, ಕಬೀರ್ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು ಇಲ್ಲಿ ಏರ್ಪಡಿಸಿದ್ದು,ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಭೋಜನ : ಮ.1.30ಕ್ಕೆ

ದುಃಖತಪ್ತರು: ಪತ್ನಿ: ಶ್ರೀಮತಿ ದಾಕ್ಷಾಯಿಣಿ ಮತ್ತು ಮಕ್ಕಳು ಹಾಗೂ ತೇಲ್ಕರ್ ಕುಟುಂಬವರ್ಗ

ಸ್ಥಾಪನೆ: 1935 ನೋಂದಣಿ ಸಂಖ್ಯೆ : 1520 /18/12–1935

ಅರಸು ಮಂಡಳಿ ಸಹಕಾರ ಸಂಘ ನಿಯಮಿತ

ನಂ.1483/1, 5ನೇ ಕ್ರಾಸ್, ತ್ಯಾಗರಾಜ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು – 570004

ಆಹ್ವಾನ ಪತ್ರಿಕೆ

ಮಾನ್ಯ ಸದಸ್ಯರುಗಳ ಗಮನಕ್ಕೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನಮ್ಮ ಅರಸು ಮಂಡಳಿ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಎ.ಆರ್. ಮಲ್ಲರಾಜೇಅರಸ್ (ಅಚ್ಯುತ) ರವರ ಅಧ್ಯಕ್ಷತೆಯಲ್ಲಿ 87ನೇ ವಾರ್ಷಿಕ ಮಹಾಸಭೆಯು ದಿ.: 18/09/2022 ರ ಭಾನುವಾರ ಬೆಳಿಗ್ಗೆ 11–00 ಗಂಟೆಗೆ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಮುದಾಯ ಭವನ ತ್ಯಾಗರಾಜ ರಸ್ತೆ, ಮೈಸೂರು ಇಲ್ಲಿ ನಡೆಯುವುದರಿಂದ ಆಹ್ವಾನ ಪತ್ರಿಕೆ ತಲುಪದೆ ಇರುವ ಸದಸ್ಯರು ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ವಾರ್ಷಿಕ ಮಹಾಸಭೆಗೆ ಆಗಮಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇವೆ.

ಆಡಳಿತ ಮಂಡಳಿ ಪರವಾಗಿ
ಸಹಿ/– ಕಾರ್ಯದರ್ಶಿ

ತಿ. ನರಸೀಪುರ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ.., ಮೈಸೂರು ಜಿಲ್ಲೆ

2021-22 ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮಾನ್ಯ ಸಹಕಾರಿ ಬಂಧುಗಳೇ,

ಮೇಲ್ಕಂಡ ಸಂಘದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 17–09–2022 ರ ಶನಿವಾರ ಬೆಳಿಗ್ಗೆ 11:00 ಗಂಟೆಗೆ, ಸ್ಥಳ: ಗುರುಭವನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಿಂಭಾಗ ತಿ. ನರಸೀಪುರದಲ್ಲಿ ಅಧ್ಯಕ್ಷರಾದ ಎಂ. ಮಹದೇವಣ್ಣರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಈಗಾಗಲೇ ಅಂಚೆ ಮೂಲಕ ಸರ್ವ ಸದಸ್ಯರಿಗೆ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದೆ, ಮಾನ್ಯ ಸರ್ವ ಸದಸ್ಯರುಗಳು ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನ ಎಂದು ಪರಿಗಣಿಸಿ ಸಭೆಗೆ ಆಗಮಿಸಬೇಕಾಗಿ ಕೋರುತ್ತೇವೆ, ಮಾಸ್ಕನ್ನು ಕಡ್ಡಾಯವಾಗಿ ಧರಿಸಬೇಕು – ಆರೋಗ್ಯದಿಂದಿರಿ.

ಕಾರ್ಯಕಾರಿ ಮಂಡಳಿ ಅಪ್ಪಣೆಯ ಮೇರೆಗೆ,
ಸಹಿ/– ಎನ್. ಮಹೇಶ್, ಪ್ರಭಾರ ವ್ಯವಸ್ಥಾಪಕರು

ದೂರವಾಣಿ ಸಂಖ್ಯೆ: 08223–297377

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿ., ನೌಕರರ ವಿವಿದೋದ್ದೇಶ ಸಹಕಾರ ಸಂಘ ನಿ.,

3ನೇ ಕ್ರಾಸ್, 17ನೇ ವಾರ್ಡ್, ಸುಭಾಷ್‌ನಗರ, ಕೃಷ್ಣರಾಜನಗರ ಟೌನ್, ಮೈಸೂರು ಜಿಲ್ಲೆ.

ಸಂಖ್ಯೆ:ಕ.ರಾ.ರ.ಸಾ.ನಿ.ನೌ.ವಿ.ಸ.ಸಂ.ನಿ/ಕೃ.ರಾ.ನ/060/2022–2023 ದಿನಾಂಕ: 15.09.2022

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮಾನ್ಯರೇ, ಮೇಲ್ಕಂಡ ನಮ್ಮ ಸಹಕಾರ ಸಂಘದ 2021–2022ನೇ ಸಾಲಿನ 23ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ: 18.09.2022 ನೇ ಭಾನುವಾರ ಬೆಳಿಗ್ಗೆ 10–30 ಗಂಟೆಗೆ "ಶ್ರೀ ವಾಲ್ಮಿಕಿ ನಾಯಕರ ಸಮುದಾಯ ಭವನ, ಸಿಲ್ವರ್ ಜ್ಯೂಬಿಲಿ ರಸ್ತೆ, ಕೃಷ್ಣರಾಜನಗರ, ಮೈಸೂರು ಜಿಲ್ಲೆ" ಸಂಘದ ಅಧ್ಯಕ್ಷರಾದ "ಶ್ರೀ ಶಿವಾನಂದ ಕುಂಬಾರ" ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ದೇಶಕ ಮಂಡಳಿ ತೀರ್ಮಾನಿಸಿದೆ. ಎಲ್ಲಾ ಸದಸ್ಯರಿಗೂ ಆಹ್ವಾನ ಪತ್ರಿಕೆಗಳನ್ನು ಅಂಚೆಯಲ್ಲಿ ಕಳುಹಿಸಲಾಗಿದ್ದು, ತಲುಪದೇ ಇದ್ದಲ್ಲಿ ಇದೇ ಆಹ್ವಾನ ಪತ್ರಿಕೆಯೆಂದು ತಿಳಿದು ದಯಮಾಡಿ ಸದರಿ ವಾರ್ಷಿಕ ಮಹಾಸಭೆಗೆ ಭಾಗವಹಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– **ಶ್ರೀ ರಾಜು,** ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಕರ್ನಾಟಕ ಸರ್ಕಾರ

(ಕಾರಾಗೃಹ ಮತ್ತು ಸುಧಾರಣಾ ಸೇವೆಗಳು)

ಅಧೀಕ್ಷಕರ ಕಛೇರಿ, ತಾಲ್ಲೂಕು ಉಪ ಕಾರಾಗೃಹ, ನಂಜನಗೂಡು

Tel/Fax: 08221-226602 Email Id: tsjnjg.prisons-kar@gov.in

ಕ್ರಸಂ/ತಾಉಕಾನಂ/ಅ.ಮಾ/376/2022–23 ದಿನಾಂಕ: 13.09.2022

ಟೆಂಡರ್–ಕಂ–ಹರಾಜು ಪ್ರಕಟಣೆ

ಸಂಸ್ಥೆಯಲ್ಲಿನ ಹಳೆಯ ನಿರುಪಯುಕ್ತ ದ್ವಿ ಚಕ್ರ ವಾಹನವನ್ನು ನಿಯಮಾನುಸಾರ ಟೆಂಡರ್–ಕಂ–ಹರಾಜಿನ ಮೂಲಕ ದಿ: 26.09.2022 ರಂದು ಮಧ್ಯಾಹ್ನ 03–00 ಗಂಟೆಗೆ ತಾಲ್ಲೂಕು ಉಪ ಕಾರಾಗೃಹ, ನಂಜನಗೂಡಿನಲ್ಲಿ ನಡೆಸಲಾಗುವುದು ಇನ್ನು ಹೆಚ್ಚಿನ ಮಾಹಿತಿಯನ್ನು ಅಧೀಕ್ಷಕರು, ಉಪ ಕಾರಾಗೃಹ, ನಂಜನಗೂಡುರವರಿಂದ ಕೆಳಗೆ ಕಾಣಿಸಿದ ದೂರವಾಣಿ ಹಾಗೂ ಇ–ಮೇಲ್ ಮೂಲಕ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರಾಗೃಹ ಮುಖ್ಯಸ್ಥರ ಹೆಸರು: ಶ್ರೀ ಶಿವಕುಮಾರ್. ಎನ್.ಎಸ್. ದೂ.ಸಂ.: 08221 226602/9480806435. Email Id: tsjnjg.prisons-kar@gov.in

DIPR/DDMYS/MCA/476/2022-23 ಸಹಿ/– ಅಧೀಕ್ಷಕರು



ತಿ.ನರಸೀಪುರ ತಾಲ್ಲೂಕು, ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (ನಿ), ತಿ.ನರಸೀಪುರ

2021–22ನೇ ಸಾಲಿನ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಮಾನ್ಯ ಸಹಕಾರಿ ಬಂಧುಗಳೇ, ಮೇಲ್ಕಂಡ ಸಂಘದ 2021–2022ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು ದಿನಾಂಕ: 21–09–2022 ರ ಬುಧವಾರ ಬೆಳಿಗ್ಗೆ 11–00 ಗಂಟೆಗೆ ಸಂಘದ ಆವರಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ. ಟಿ.ಪಿ. ಸುಬ್ರಹ್ಮಣ್ಯ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿರುತ್ತದೆ. ಸಂಘದ ಮಾನ್ಯ ಅರ್ಹ ಸದಸ್ಯರೆಲ್ಲರಿಗೂ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿರುತ್ತದೆ. ಒಂದು ವೇಳೆ ಆಹ್ವಾನ ಪತ್ರಿಕೆ ತಲುಪದಿದ್ದ ಸದಸ್ಯರು ಇದನ್ನೇ ಆಹ್ವಾನವೆಂದು ಪರಿಗಣಿಸಿ, ಸಕಾಲದಲ್ಲಿ ಆಗಮಿಸಿ ಮಹಾಸಭೆಗೆ ಭಾಗವಹಿಸಬೇಕಾಗಿ ಈ ಮೂಲಕ ಕೋರಿದೆ ಹಾಗೂ ಸಭೆಯಲ್ಲಿ 2021–22ನೇ ಸಾಲಿನ ಎಸ್.ಎಸ್.ಎಲ್.ಸಿ & ದ್ವಿತೀಯ ಪಿ.ಯು.ಸಿ ಯಲ್ಲಿ ಹೆಚ್ಚು, ಅಂಕಗಳನ್ನು ಪಡೆದ ಇಬ್ಬರು ಪ್ರತಿಭಾವಂತ ಸದಸ್ಯರುಗಳ ಮಕ್ಕಳನ್ನು ಸನ್ಮಾನಿಸಲಾಗುವುದು. ಹೆಚ್ಚಿನ ಮಾಹಿತಿಯನ್ನು ಸಂಘದ ಕಛೇರಿಯಲ್ಲಿ ಪಡೆಯತಕ್ಕದ್ದು.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಜಿ.ರಘುನಂದನ್, ಕಾರ್ಯದರ್ಶಿ
ತಾ॥ವ್ಯ॥ಮಾ॥ಸ॥ಸಂ॥.(ನಿ) ತಿ.ನರಸೀಪುರ, ಮೊ.: 9036840738

ಸ್ಥಾಪನೆ: 2015 Regd. No. 42540 ಮೊ.: 8904771073, 0821-2424909

ದಿ ಭಾವಸಾರ ಕ್ಷತ್ರಿಯ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ.,

ನಂ.279, ಬೆಂಕಿನವಾಬ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು – 570021

ಆಹ್ವಾನ ಪತ್ರಿಕೆ

ಮೇಲ್ಕಂಡ ನಮ್ಮ ಸಂಘದ 2021–22 ನೇ ಸಾಲಿನ 7ನೇ ವಾರ್ಷಿಕ ಮಹಾಸಭೆಯನ್ನು ದಿ॥ 18–09–2022 ನೇ ಭಾನುವಾರ ಸಂಜೆ 6.00 ಘಂಟೆಗೆ ಲಷ್ಕರ್ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ "ಶ್ರೀ ಪಾಂಡುರಂಗ ವಿಠ್ಠಲ ಸ್ವಾಮಿ" ದೇವಸ್ಥಾನದ ಆವರಣ, ಮೈಸೂರು. ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ .ಆರ್.ವಿ.ಶಿವಾಜಿರಾವ್ ರಂಪೂರೆ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ದೇಶಕ ಮಂಡಳಿಯು ತೀರ್ಮಾನಿಸಿದೆ. ಎಲ್ಲಾ ಸದಸ್ಯರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು, ಪತ್ರಿಕೆ ತಲುಪದೇ ಇದ್ದಲ್ಲಿ ಇದೇ ಆಹ್ವಾನ ಪತ್ರಿಕೆಯೆಂದು ತಿಳಿದು ದಯಮಾಡಿ ಸದರಿ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– **ಶ್ರೀ. ಆರ್.ವಿ.ಶಿವಾಜಿರಾವ್ ರಂಪೂರೆ,** ಅಧ್ಯಕ್ಷರು

ಯಶಸ್ವಿನಿ ಗೃಹ ನಿರ್ಮಾಣ ಸಹಕಾರ ಸಂಘ ನಿ.,

ನಂ.43, ಡಿ. ದೇವೇಗೌಡ ವೃತ್ತ, ಬನ್ನೂರು ರಿಂಗ್ ರಸ್ತೆ, ಮೈಸೂರು–570028.
ಕರ್ನಾಟಕ ರಾಜ್ಯ. ಮೊ.ನಂ. 9108491059
ರಿ.ನಂ.; ಡಿ.ಅರ್. ಎಂ./ಸಿ–3/ಆರ್.ಜಿ.ಎಸ್./42502/2012–13

ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮೇಲ್ಕಂಡ ನಮ್ಮ ಸಂಘದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು **ದಿನಾಂಕ: 24–09–2022ರ ಶನಿವಾರ ಬೆಳಗ್ಗೆ 11.00 ಗಂಟೆಗೆ** ಸಂಘದ ವಿಶೇಷಾಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಆದರಿಂದ **Virtual Meeting / Video Conference** (ವರ್ಚ್ಯುವಲ್ ಮೀಟಿಂಗ್) ಮೂಲಕ ವರ್ಚ್ಯುವಲ್ ಸಭೆಯನ್ನು ಏರ್ಪಡಿಸಲಾಗಿದ್ದು, ಎಲ್ಲಾ ಅರ್ಹ ಸದಸ್ಯರು **GOOGLE MEET APP** ಡೌನ್‌ಲೋಡ್ ಮಾಡಿ ಕೊಂಡು ಈ ಲಿಂಕ್ ನಿಂದ **https://tinyurl.com/2p8z2yyh** ಲಾಗಿನ್ ಆಗಬೇಕು. ದಿನಾಂಕ 24–09–2022 ರಂದು ಬೆಳಗ್ಗೆ 11.00 ಗಂಟೆಗೆ ಲಾಗಿನ್ ಆಗಿ ಎಲ್ಲಾ ಸರ್ವ ಸದಸ್ಯರೆಲ್ಲರೂ ತಪ್ಪದೇ ವರ್ಚ್ಯುವಲ್ ಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಮನವಿ.

ಸಹಿ/– ಶ್ರೀಕಾಂತ್ ಎಂ.
ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರು ಜಿಲ್ಲೆ

ದೂರವಾಣಿ : 08223–262242 ಫ್ಯಾಕ್ಸ್: 08223–262241
ಇಮೇಲ್:itstaff_ulb_krnagar@@yahoo.com

ಸಂಖ್ಯೆ:ಪುಸಕೃ/ಪ.ಅ/ಸಿಆರ್/2022–23 ದಿನಾಂಕ:06.09.2022

ಟೆಂಡರ್ ಪ್ರಕಟಣೆ

ಕೆ.ಆರ್.ನಗರ ಪುರಸಭೆಯ 2020–2021 ಮತ್ತು 2021–22ನೇ ಸಾಲಿನ 15ನೇ ಹಣಕಾಸು ಯೋಜನೆ ಅಡಿ ಮೀಸಲಾದ ಅನುದಾನದಲ್ಲಿ ಈ ಕೆಳಕಂಡ ಪೂರೈಕೆಗಳಿಗಾಗಿ ಪ್ರತ್ಯೇಕವಾಗಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಹ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://www.eproc.karnataka.gov.in** ಮುಖಾಂತರ ಭಾಗವಹಿಸಬಹುದು.

ಕ್ರ ಸಂ	ಟೆಂಡರ್ ಇಂಡೆಂಟ್ ಸಂಖ್ಯೆ	ವಿವರ	ಇ.ಎಂ.ಡಿ ಮೊತ್ತ	ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ
1.	DMA/2022-23/IND14216	ಮೂಡಲಕೊಪ್ಪಲು ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದಲ್ಲಿ ಮುಖ್ಯ ದ್ವಾರದಲ್ಲಿ ಮತ್ತು ಘಟಕದ ಎಲ್ಲಾ ಭಾಗಗಳಿಗೆ ನಾಮ ಫಲಕ ಅಳವಡಿಸಲು.	10,000/-	30.09.2022
2.	DMA/2022-23/IND14217	ಮೂಡಲಕೊಪ್ಪಲು ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದಲ್ಲಿ ಒಳಕಸ ಸಂಗ್ರಹಣೆಗಾಗಿ ವುಡನ್(ಮರದ) ಕಂಪಾರ್ಟ್‌ಮೆಂಟ್‌ಗಳ ಖರೀದಿಗಾಗಿ.	10,000/-	30.09.2022
3.	DMA/2022-23/OW/ WORK_INDENT130922	ಮೂಡಲಕೊಪ್ಪಲು ಘನತ್ಯಾಜ್ಯ ವಸ್ತು ವಿಲೇವಾರಿ ಜಾಗದಲ್ಲಿರುವ ಲೆಗಸಿ ವೇಸ್ಟ್ ಕ್ಲಿಯರ್ ಮಾಡಲು	62,200/-	15.10.2022
4.	DMA/2022-23/OW/ WORK_INDENT130923	ಮೂಡಲಕೊಪ್ಪಲು ಘನತ್ಯಾಜ್ಯ ವಸ್ತು ವಿಲೇವಾರಿ ಜಾಗದಲ್ಲಿರುವ ಲೆಗಸಿ ವೇಸ್ಟ್ ಪ್ರೋಸೆಸ್ ಮಾಡಿ ವೇಸ್ಟ್ ಕ್ಲಿಯರ್ ಮಾಡಲು	95,000/-	15.10.2022

ಸಾಮಾನ್ಯ ಸೂಚನೆಗಳು : 1. ಟೆಂಡರ್‌ದಾರರು ಟೆಂಡರ್ ಬಿಡ್ ಡಾಕ್ಯುಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2. ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್‌ಮಾಡಿ ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಟೆಂಡರ್‌ದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–ಮುಖ್ಯಾಧಿಕಾರಿಗಳು,
ಕೆ.ಆರ್.ನಗರ, ಪುರಸಭೆ

DIPR/MYS/KAVITA/465/2022-23

ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು.

ಎಂ.ಯು.ಡಿ.ಎ. ಕಛೇರಿ ಆವರಣ, ಜೆ.ಎಲ್.ಬಿ.ರಸ್ತೆ, ಮೈಸೂರು.

2021–2022ನೇ ಸಾಲಿನ ಸಂಘದ ಇಪ್ಪತ್ತನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ

ಸೂಚನಾ ಪತ್ರ (ನೋಟೀಸ್)

ಸಂಘದ 2021–2022ನೇ ಸಾಲಿನ ಇಪ್ಪತ್ತನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ಸಂಘದ ಅಧ್ಯಕ್ಷರಾದ ಶ್ರೀ. ಮಹಾಲಿಂಗಂರವರ ಅಧ್ಯಕ್ಷತೆಯಲ್ಲಿ ದಿನಾಂಕ 18.09.2022ರ ಭಾನುವಾರ ಬೆಳಿಗ್ಗೆ 9.30 ಗಂಟೆಗೆ ಸೊಸೈಟಿಯ ಕೇಂದ್ರ ಕಛೇರಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ ಆವರಣ, ಜೆ.ಎಲ್.ಬಿ. ರಸ್ತೆ, ಮೈಸೂರು ಇಲ್ಲಿ ನಡೆಯಲಿದೆ. ಮಾನ್ಯ ಸಂಘದ ಸದಸ್ಯರುಗಳು ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿಸಿಕೊಳ್ಳಲಾಗಿದೆ.

ಆಹ್ವಾನ ಪತ್ರಿಕೆಗಳನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಬೇಕಾಗಿ ವಿನಂತಿ.

ವಿ.ಸೂ: 19/9/2022ನೇ ಸೋಮವಾರ ಸೊಸೈಟಿಗೆ ರಜೆ ಇರುತ್ತದೆ

ಸ್ಥಳ: ಮೈಸೂರು
ದಿನಾಂಕ: 02.08.2022

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಾಪನೆ: 1916 ಮೊ.: 8904771073
Regd. No. 888 0821-2424909

ದಿ ಭಾವಸಾರ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ ಲಿ.,

"ಎ" ಶ್ರೇಣಿಯ ಸಹಕಾರ ಸಂಘ

ಕಛೇರಿ ವಿಳಾಸ: ನಂ. 279, ಬೆಂಕಿನವಾಬ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು – 570021

ಆಹ್ವಾನ ಪತ್ರಿಕೆ

ದಿನಾಂಕ: 18/09/2022 ಭಾನುವಾರ ಬೆಳಿಗ್ಗೆ 11.00 ಘಂಟೆಗೆ ಸಂಘದ 106 ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು "ಶ್ರೀ ವಿಠ್ಠಲ ರುಕ್ಮಿಣಿ ಕನ್‌ವೆನ್‌ಷನ್ ಹಾಲ್" ಐಶ್ವರ್ಯ ಪೆಟ್ರೋಲ್ ಬಂಕ್ ಹತ್ತಿರ, ವಿಜಯನಗರ, 3ನೇ ಹಂತ, ಹುಣಸೂರು ರಸ್ತೆ, ಮೈಸೂರು ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ. ಎಲ್.ವಿ.ದಯಾಶಂಕರ್ ಲಾಲೆ ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ದೇಶಕ ಮಂಡಳಿ ತೀರ್ಮಾನಿಸಿದೆ. ಎಲ್ಲಾ ಸದಸ್ಯರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು, ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ದಯಮಾಡಿ ಸದರಿ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– **ಶ್ರೀ. ಎಲ್.ವಿ.ದಯಾಶಂಕರ್**
ಅಧ್ಯಕ್ಷರು

ವಿಶೇಷ ಸೂಚನೆ:– ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸುವುದಕ್ಕಾಗಿ ಸದಸ್ಯರುಗಳು ಷೇರು ಪಾಸ್ ಪುಸ್ತಕವನ್ನು ಕಡ್ಡಾಯ ಹಾಜರು ಪಡಿಸಬೇಕಾಗಿ ಈ ಮೂಲಕ ಕೋರಲಾಗಿದೆ.